# ಅಹ್ಮದಿಯಾ ಸಂದೇಶ

# "Ahmadiya Sandesha"

Kannada rendering of Urdu work:

احمدیت کا پیغام

*(Ahmadiyyat ka Paigham)*

*By Hazrat Mirza Bashiruddin Mahmud Ahmad[ra]*

*Khalifatul Masih II*



| | |
|---|---|
| Author | Hazrat Mirza Bashiruddin Mahmud Ahmad[ra] Khalifatul Masih II |
| Translated by | M.P.Ibrahim, Manjeshwar |
| First Edition | 1976 |
| First Edition Reviewed by | Muhammad Yusuf; Editor Yugarashmi |
| Second Edition | 2020 |
| Second Edition Reviewed by | Moulavi Inamullah |
| Typing & Setting | Inamullah, Mangaluru |
| Published by | Nazarat Nashro - Isha'at, Qadian, Distt. Gurdaspur, Punjab -143516 |
| Copies | 1000 |
| Printed at | Fazl-e-Umar Printing Press, Qadian |

# ಅಹ್ಮದಿಯಾ ಸಂದೇಶ

*

ಗ್ರಂಥಕರ್ತ:

**ಹಝ಼್ರತ್ ಮಿರ್ಝ಼ಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್(ರ)**

(ಅಹ್ಮದಿಯಾ ಮುಸ್ಲಿಮ್ ಜಮಾಅತಿನ ದ್ವಿತೀಯ ಖ಼ಲೀಫ)

*

ಅನುವಾದಕ:

ಎಂ. ಪಿ. ಇಬ್ರಾಹೀಂ

*

ಪ್ರಕಾಶಕರು:

**ನಝ಼ಾರತ್ ನಶ್ರೊ ಇಶಾಅತ್,**

ಭಾರತ

# ಮುನ್ನುಡಿ

ವಾಗ್ದತ್ತ ಮಹ್‌ದೀ ಮಸೀಹ್ ಹಝ್ರತ್ ಮಿರ್ಝಾ ಗ್ಘುಲಾಮ್ ಅಹ್ಮದ್‌ರ ವಾಗ್ದತ್ತ ಪುತ್ರ ಹಾಗೂ ಅಹ್ಮದಿಯಾ ಜಮಾಅತಿನ ಎರಡನೆಯ ಖ಼ಲೀಫರೂ ಆದ ಹಝ್‌ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್‌ರಿಂದ ವಿರಚಿತವಾದ ಉರ್ದು ಉಪನ್ಯಾಸದ ಕನ್ನಡಾನುವಾದವಾಗಿದೆ ಈ ಲಘು ಕೃತಿ. 1948 ಅಕ್ಟೋಬರ್ 31ರಂದು ಸಿಯಾಲ್‌ಕೋಟ್‌ನಲ್ಲಿ ಸೇರಿದ ಅಲ್ಲಿನ ಅಹ್ಮದಿಯಾ ವಾರ್ಷಿಕ ಸಮ್ಮೇಳನದಲ್ಲಿ ಜನಾಬ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಷಾ ಸಾಹಿಬ್ ಈ ಉಪನ್ಯಾಸವನ್ನು ಓದಿದರು. ಆಜೀವ ಪರ್ಯಂತ ಇಸ್ಲಾಮಿಗಾಗಿ ಸೇವೆ ಸಲ್ಲಿಸಿ ಯಥಾರ್ಥ ಇಸ್ಲಾಮಿನ ಸುಂದರ ರೂಪವನ್ನು ಲೋಕಕ್ಕೆ ತೋರಿಸಿಕೊಡಲು ಪಣತೊಟ್ಟು ಮುಂದಾದ, ಅಹ್ಮದಿಯಾ ಜಮಾಅತಿನ ಒಬ್ಬ ಧೀರ ಯೋಧರೂ ಅದರ ಎರಡನೆಯ ಖಲೀಫರೂ ಆದ ಒಬ್ಬ ಮಹಾತ್ಮರಿಂದ ವಿರಚಿಸಲ್ಪಟ್ಟ ಒಂದು ಉಪನ್ಯಾಸವಾದುದರಿಂದ ಇದನ್ನು ಕರ್ನಾಟಕದ ಜನರ ವಾಚನೆಗಾಗಿ ಕನ್ನಡ ಭಾಷೆಗೆ ಭಾಷಾಂತರಿಸಿರುವೆನು. ಅದು ಸಾಧ್ಯವಾದುದಕ್ಕೆ ಪ್ರಥಮವಾಗಿ ಅಲ್ಲಾಹನನ್ನು ವಂದಿಸುತ್ತೇನೆ.

ಒಬ್ಬ ವ್ಯಕ್ತಿಯು ಯಾ ಒಂದು ಸಂಘಟನೆಯು ತಮ್ಮ ಧಾರ್ಮಿಕ ವಿಶ್ವಾಸದ ಕುರಿತು ಘೋಷಿಸುತ್ತಿರುವುದನ್ನೇ ಆ ವ್ಯಕ್ತಿಯ ಅಥವಾ ಸಂಘಟನೆಯ ಧಾರ್ಮಿಕ ತತ್ವವನ್ನಾಗಿ ಅಂಗೀಕರಿಸಬೇಕೆಂಬುದು ಒಂದು ಸಾಮಾನ್ಯ ನಿಯಮವಾಗಿದೆ. ಇಂದು ಅಹ್ಮದಿಯಾ ಜಮಾಅತಿನ ಕುರಿತು ಜನ ಸಾಮಾನ್ಯರೆಡೆಯಲ್ಲಿ ಹಲವಾರು ತಪ್ಪಭಿಪ್ರಾಯಗಳು ಹಬ್ಬಿವೆ. ಅಹ್ಮದಿಯರು ಇಸ್ಲಾಮಿನ ತತ್ವಗಳಿಗೆ ವಿರುದ್ಧವಾಗಿ ವಿಶ್ವಾಸ ಹೊಂದಿದವರಾಗಿರುವರೆಂದು ಹಲವರು ತಪ್ಪಾಗಿ ತಿಳಿದಿರುವರು. ಆದರೆ, ಅಹ್ಮದಿಯ್ಯತ್ ಎಂಬುದು ಯಥಾರ್ಥ ಇಸ್ಲಾಂ ಅಲ್ಲದೆ ಬೇರೇನೂ ಅಲ್ಲ. ಅಹ್ಮದಿಯಾ ವಿಶ್ವಾಸಗಳೆಲ್ಲವೂ ಪವಿತ್ರ ಖುರ್‌ಆನ್ ಮತ್ತು ನಬಿವಚನಗಳಿಂದ ಆಧಾರಿತವಾಗಿವೆ. ಅಹ್ಮದಿಯರ ಧಾರ್ಮಿಕ ವಿಶ್ವಾಸಗಳ ಒಂದು ಸಂಕ್ಷಿಪ್ತರೂಪವು ಈ ಪುಸ್ತಕದಲ್ಲಿ ಅಡಕವಾಗಿದ್ದು, ಇದನ್ನು ಓದುವವರಿಗೆ ಅಹ್ಮದಿಯ್ಯತಿನ ಕುರಿತಿರುವ ತಪ್ಪು ಅಭಿಪ್ರಾಯಗಳು ನೀಗುವುದೆಂಬುದರಲ್ಲಿ ಸಂದೇಹವಿಲ್ಲ. ಯಾವುದನ್ನೂ

ನೀವು ಪ್ರಥಮದಲ್ಲೇ ನಿಷೇಧಿಸದಿರಿ ಎಂದು ಪವಿತ್ರ ಖುರ್‌ಆನ್ ಆಜ್ಞಾಪಿಸುತ್ತದೆ. ಅಹ್ಮದಿಯ್ಯತಿನ ಕುರಿತು ಸರಿಯಾದ ಜ್ಞಾನವಿಲ್ಲದೆಯೇ, ಅದರ ವಿಶ್ವಾಸ ಸಿದ್ಧಾಂತಗಳ ಕುರಿತು ಅರಿವಿಲ್ಲದೆಯೇ ಅದನ್ನು ನಿರಾಕರಿಸುವುದು ಮೇಲಿನ ಖುರ್‌ಆನ್ ವಚನಕ್ಕೆ ವಿರುದ್ಧವಾಗಿದೆ. ಆದುದರಿಂದ ಅಹ್ಮದಿಯ್ಯತಿನ ಕುರಿತು ಅದರ ಶತ್ರುಗಳು ಆಕ್ಷೇಪಿಸಿ ಹೇಳುವುದನ್ನು ಮಾತ್ರವೇ ಮಾನದಂಡವನ್ನಾಗಿರಿಸದೆ ಅಹ್ಮದಿಯಾ ಪ್ರಕಟನೆಗಳಿಂದಲೇ ಅದರ ಕುರಿತು ತಿಳಿದುಕೊಳ್ಳಬೇಕಾಗಿರುವುದು.

"ಅಸತ್ಯವೆಂದು ಮೊದಲೇ ಅವರು ತೀರ್ಮಾನಿಸಿಟ್ಟಿರುವುದರಿಂದ ಸತ್ಯವನ್ನು ಸ್ವೀಕರಿಸಲು ಅವರಿಂದಾಗಲಿಲ್ಲ" ಎಂದು ಪವಿತ್ರ ಖುರ್‌ಆನ್ ಯಾರ ಕುರಿತು ಹೇಳಿರುವುದೋ ಅಂತಹವರೊಡನೆ ನಮಗೇನೂ ಹೇಳಲಿಕ್ಕಿಲ್ಲ. "ಅಲ್ಲಾಹನಿಂದ ಅವತೀರ್ಣವಾದುದರಲ್ಲಿ ವಿಶ್ವಾಸವಿಡಿರಿ ಎಂದು ಅವರೊಡನೆ ಹೇಳಲ್ಪಡುವಾಗ, ನಮಗೆ ಕಳುಹಿಸಲ್ಪಟ್ಟದನ್ನು ಮಾತ್ರ ನಾವು ನಂಬುವೆವು ಎಂದು ಹೇಳುತ್ತಾ ಅದರ ಹೊರತಿರುವುದನ್ನು ಅವರು ನಿರಾಕರಿಸಿದರು" ಎಂದು ಯಾರ ಕುರಿತು ಪವಿತ್ರ ಖುರ್‌ಆನ್ ಹೇಳಿರುವುದೋ ಅವರು ಹೇಳಿದಂತಹ ಉತ್ತರವನ್ನು ಮಾತ್ರವೇ ಇವರಿಂದಲೂ ಪ್ರತೀಕ್ಷಿಸಬಹುದು. ಆದರೆ, ಸತ್ಯಾಸತ್ಯಗಳನ್ನು ವಿವೇಚಿಸಿ ಸತ್ಯವೆಂದು ಕಂಡುದರಲ್ಲಿ ವಿಶ್ವಾಸವಿಡಬೇಕಾದುದು ಮನುಷ್ಯ ಧರ್ಮವೆಂದು ತಿಳಿದಿರುವ ಸತ್ಯಾನ್ವೇಷಿಗಳೊಡನೆ ನನ್ನ ಅಪೇಕ್ಷೆಯು, ಅವರು ಈ ಕಿರುಪುಸ್ತಕವನ್ನು ಮನಸ್ಸಿಟ್ಟು ಓದಬೇಕೆಂದಾಗಿದೆ. ಅವರನ್ನು ಅಲ್ಲಾಹನು ಸನ್ಮಾರ್ಗದಲ್ಲಿ ನಡೆಸಲಿ ಎಂದು ಪ್ರಾರ್ಥಿಸುತ್ತೇನೆ.

ಈ ಪುಸ್ತಕವನ್ನು ಪ್ರಕಟಿಸಲು ಸಕಲ ರೀತಿಯಲ್ಲೂ ಸಹಾಯಕರಾಗಿದ್ದು ನನ್ನೊಡನೆ ಸಹಕರಿಸಿದ "ಯುಗರಶ್ಮಿ" ತ್ರೈಮಾಸಿಕದ ಸಂಪಾದಕರಾದ ಜನಾಬ್ ಮುಹಮ್ಮದ್ ಯೂಸುಫ್ ಸಾಹಿಬ್ ಅವರಿಗೂ ಇತರ ಎಲ್ಲರಿಗೂ ನಾನು ಕೃತಜ್ಞನಾಗಿರುವೆನು. ಅವರೆಲ್ಲರಿಗೂ ಅಲ್ಲಾಹನು ತಕ್ಕ ಪ್ರತಿಫಲ ನೀಡಲಿ ಎಂಬ ಪ್ರಾರ್ಥನೆಯೊಂದಿಗೆ ಈ ಕಿರುಕೃತಿಯನ್ನು ವಾಚಕವೃಂದದ ಮುಂದಿಡುತ್ತೇನೆ.

"ವ ಆಖಿರು ದಅ್‌ವಾನಾ ಅನಿಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್"

ಮಂಜೇಶ್ವರ,

19-5-1976 ಎಂ.ಪಿ. ಇಬ್ರಾಹಿಂ

اَعُوْذُ بِاللّٰہِ مِنَ الشَّیْطٰنِ الرَّجِیْمِ
بِسْمِ اللّٰہِ الرَّحْمٰنِ الرَّحِیْمِ
نَحْمَدُہٗ وَ نُصَلِّیْ عَلٰی رَسُوْلِہِ الْکَرِیْمِ

خدا کے فضل اور رحم کے ساتھ

# ಅಹ್ಮದಿಯಾ ಸಂದೇಶ

ಅಹ್ಮದಿಯ್ಯತ್ ಎಂದರೆ ಏನು, ಯಾವ ಉದ್ದೇಶಕ್ಕಾಗಿ ಇದು ಸ್ಥಾಪಿತವಾಯಿತು? ಇದು ಅಹ್ಮದಿಯ್ಯತಿನ ಕುರಿತು ಪರಿಚಯವಿರುವವರ ಮತ್ತು ಪರಿಚಯವಿಲ್ಲದವರ ಹೃದಯಗಳಿಂದ ಉದ್ಭವಿಸುವ ಒಂದು ಪ್ರಶ್ನೆಯಾಗಿದೆ. ಪರಿಚಿತರ ಅಧ್ಯಯನವು ಬಹಳ ಆಳವಾಗಿರುತ್ತದೆ. ಆದರೆ, ಅಹ್ಮದಿಯ್ಯತಿನ ಬಗ್ಗೆ ತಿಳುವಳಿಕೆ ಇಲ್ಲದವರ ಪ್ರಶ್ನೆಗಳು ಅಧಿಕವೂ ಬಾಲಿಶವಾಗಿರುತ್ತವೆ. ಅಹ್ಮದಿಯ್ಯತಿನ ಕುರಿತು ಸರಿಯಾದ ವಿವರಗಳು ಲಭಿಸದ ಕಾರಣ ಹಲವಾರು ಸಂಗತಿಗಳನ್ನು ಅವರು ಸ್ವಯಂ ಊಹಿಸಿಕೊಳ್ಳುತ್ತಾರೆ ಮತ್ತು ಕೆಲವಾರು ಕಪೋಲಕಲ್ಪಿತ ಸಂಗತಿಗಳನ್ನು ಇತರರಿಂದ ಕೇಳಿ ಅದು ಸತ್ಯವೆಂದು ಸ್ವೀಕರಿಸುತ್ತಾರೆ. ಈ ರೀತಿ ಅಹ್ಮದಿಯ್ಯತಿನ ಕುರಿತು ಯಥಾರ್ಥವಾದ ವಿವರಗಳನ್ನು ತಿಳಿಯದೆ ಅದರ ಕುರಿತು ವಿವಿಧ ರೀತಿಯ ತಪ್ಪಭಿಪ್ರಾಯಗಳನ್ನು ಹೊಂದಿರುವವರ ತಿಳುವಳಿಕೆಗಾಗಿ ಮೊದಲು ಕೆಲವು ಸಂಗತಿಗಳನ್ನು ನಾನು ಹೇಳಬಯಸುತ್ತೇನೆ.

## ಅಹ್ಮದಿಯ್ಯತ್ ಒಂದು ಹೊಸ ಧರ್ಮವಲ್ಲ

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಕುರಿತು ಅಪರಿಚಿತರಾದ ಕೆಲವರ ಅಭಿಪ್ರಾಯವು ಅಹ್ಮದಿಯರು ಇಸ್ಲಾಮಿನ ಕಲಿಮವಾದ "ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್" ಎಂಬುದನ್ನು ಸ್ವೀಕರಿಸುವುದಿಲ್ಲವೆಂದೂ

ಅಹ್ಮದಿಯ್ಯತ್ ಒಂದು ಹೊಸ ಧರ್ಮವಾಗಿರುವುದೆಂದೂ ಆಗಿದೆ. ಇವರು ಈ ತಪ್ಪಭಿಪ್ರಾಯದಲ್ಲಿ ಮುಳುಗಿರುವುದು ಇತರರ ದುರ್ಬೋಧನೆಗೆ ಗುರಿಯಾಗಿಯೋ, ಅಥವಾ ಅಹ್ಮದಿಯ್ಯತ್ ಒಂದು ಹೊಸ ಧರ್ಮವೆಂದೂ ಎಲ್ಲ ಧರ್ಮಗಳಿಗೂ ಬೇರೆ ಬೇರೆ 'ಕಲಿಮ' ಅಗತ್ಯವೆಂದೂ ತಾವೇ ಸ್ವತಃ ಊಹಿಸಿಕೊಂಡಿರುವುದರಿಂದಲೋ ಆಗಿರಬಹುದು. ಹಾಗೆ ಅಹ್ಮದಿಯರಿಗೂ ಒಂದು ಹೊಸ 'ಕಲಿಮ' ಇರುವುದೆಂದು ಇವರು ನಂಬಿರುವರು. ಆದರೆ ಸತ್ಯಾಂಶವು ತದ್ವಿರುದ್ಧವಾಗಿದೆ. ಅಹ್ಮದಿಯ್ಯತ್ ಎಂಬುದು ಒಂದು ಹೊಸ ಧರ್ಮವಲ್ಲ, ಅದೇ ರೀತಿ, ಎಲ್ಲ ಧರ್ಮಗಳಿಗೂ ಬೇರೆ ಬೇರೆ ಕಲಿಮ ಇವೆಯೆಂಬ ಇವರ ಊಹೆಯೂ ತಪ್ಪಾಗಿರುವುದು. 'ಕಲಿಮ'ವು ಇಸ್ಲಾಮಿನ ಹೊರತು ಬೇರೆ ಯಾವುದೇ ಧರ್ಮದ ಚಿಹ್ನೆಯಾಗಿಲ್ಲ. ಯಾವ ರೀತಿಯಲ್ಲಿ ಇಸ್ಲಾಮಿಗೆ ಅದರ ವೇದಗ್ರಂಥ, ಪ್ರವಾದಿ ಮತ್ತು ಸಾರ್ವಲೌಕಿಕತೆಯಲ್ಲಿ ಇನ್ನಿತರ ಧರ್ಮಗಳಿಗಿಂತ ಪ್ರತ್ಯೇಕತೆಯಿರುವುದೋ ಅದೇ ರೀತಿಯಲ್ಲಿ 'ಕಲಿಮ'ದ ಕುರಿತೂ ಇಸ್ಲಾಮಿಗೆ ಒಂದು ವೈಶಿಷ್ಟ್ಯವಿದೆ. ಇತರ ಧರ್ಮಗಳಲ್ಲೂ ವೇದಗ್ರಂಥಗಳಿವೆ. ಆದರೆ, 'ಕಲಾಮುಲ್ಲಾಹ್' ಮುಸ್ಲಿಮರಿಗಲ್ಲದೆ ಬೇರೆ ಯಾರಿಗೂ ದೊರಕಲಿಲ್ಲ. ಸಾಮಾನ್ಯವಾಗಿ ಎಲ್ಲ ಧರ್ಮಗ್ರಂಥಗಳೂ ತತ್ವಸಾರಗಳನ್ನೂ ಕರ್ತವ್ಯಗಳನ್ನೂ ಆಜ್ಞೆಗಳನ್ನೂ ಒಳಗೊಂಡಿರುತ್ತವೆ. ಅವುಗಳ ಕುರಿತು ಆ ಗ್ರಂಥಗಳ ಹೇಳಿಕೆಗಳ ವಿಷಯವು ದೈವಿಕವಾಗಿರಬೇಕೇ ಹೊರತು ಅದರಲ್ಲಿ ಪ್ರಯುಕ್ತವಾದ ಪ್ರತಿಯೊಂದು ಪದಗಳೂ ದೇವವಾಕ್ಯಗಳಾಗಿರಬೇಕೆಂದಿಲ್ಲ. ಆದರೆ, ಇಸ್ಲಾಮಿನ ಧರ್ಮಗ್ರಂಥಕ್ಕೆ 'ಕಲಾಮುಲ್ಲಾಹ್' ಎಂದು ಹೆಸರು. ಅಂದರೆ, ಅದರ ವಿಷಯವು ಯಾವ ರೀತಿ ದೈವಿಕವಾಗಿರುವುದೋ ಅದೇ ರೀತಿ ಅದರಲ್ಲಿ ಪ್ರಯುಕ್ತವಾದ ಪ್ರತಿಯೊಂದು ಪದವೂ ಅಕ್ಷರವೂ ದೈವಿಕವಾಗಿರುವುದು. ಹಝ್ರತ್ ಮೂಸಾ ಅಲೈಹಿಸ್ಸಲಾಮರ ಗ್ರಂಥವೂ ದೈವಿಕ ಗ್ರಂಥವೇ ಆಗಿದೆ. ಅದರ ಎಲ್ಲ ಆಜ್ಞೆಗಳೂ ದೇವನಿಂದ ಅವತೀರ್ಣಗೊಂಡದ್ದೇ ಆಗಿವೆ. ಅದೇ ರೀತಿಯಲ್ಲಿ ಹಝ್ರತ್ ಈಸಾ ಅಲೈಹಿಸ್ಸಲಾಮರ ಗ್ರಂಥವೂ- ಅದರ ಮೂಲಸಾರವು- ದೈವಿಕವೇ ಆಗಿರುವುದು. ಆದರೆ ಆ ಗ್ರಂಥಗಳಲ್ಲಿ ಪ್ರಯುಕ್ತವಾದ ಪ್ರತಿಯೊಂದು ಪದವೂ ದೇವವಾಣಿಯೆಂದು ಹೇಳಲು ಸಾಧ್ಯವಿಲ್ಲ. ಎಂದರೆ, ದೇವನಿಂದ ಅವತೀರ್ಣಗೊಂಡ ರೂಪದಲ್ಲಿಯೇ ಆ

ಗ್ರಂಥಗಳಲ್ಲಿ ಪ್ರತಿಯೊಂದು ಪದವೂ ಸಂಗ್ರಹಿಸಲ್ಪಟ್ಟಿಲ್ಲ ಎಂದರ್ಥ. ತೌರಾತ್, ಇಂಜೀಲ್, ಖುರ್‌ಆನ್ ಈ ಮೂರು ಗ್ರಂಥಗಳನ್ನೂ ಪಠಿಸುವ ಯಾವನೇ ವ್ಯಕ್ತಿಗೂ, ಈ ವಿಷಯಗಳನ್ನು ಗಮನಿಸಿದಲ್ಲಿ ಕೆಲವೇ ನಿಮಿಷಗಳೊಳಗೆ ಒಂದು ತೀರ್ಮಾನವನ್ನು ಕೈಗೊಳ್ಳಲು ಸಾಧ್ಯವಾಗುವುದು. ಅದೇನೆಂದರೆ ತೌರಾತ್ ಮತ್ತು ಇಂಜೀಲ್‌ಗಳಲ್ಲಿ ಪ್ರಕಟವಾಗುವ ವಿಷಯಗಳು ದೈವಿಕವಾಗಿದ್ದರೂ, ಅದರಲ್ಲಿ ಪ್ರಯುಕ್ತವಾಗಿರುವ ಪ್ರತಿಯೊಂದು ಹೇಳಿಕೆಗಳೂ ನೇರವಾದ ದೇವನ ವಾಕ್ಯಗಳಲ್ಲವೆಂದೂ ಆದರೆ ಪವಿತ್ರ ಖುರ್‌ಆನಿನ ಎಲ್ಲ ವಿಷಯಗಳೂ ದೈವಿಕವಾಗಿರುವಂತೆಯೇ ಅದರ ಎಲ್ಲ ಪದಗಳೂ ನೇರವಾದ ದೇವವಾಕ್ಯಗಳ ಸಂಗ್ರಹವೆಂದೂ ಮನದಟ್ಟಾಗುವುದು.

ತೌರಾತ್, ಇಂಜೀಲ್ ಮತ್ತು ಖುರ್‌ಆನ್ ಈ ಮೂರೂ ಗ್ರಂಥಗಳಲ್ಲಿಯೂ ವಿಶ್ವಾಸವಿಲ್ಲದ ಒಬ್ಬ ವ್ಯಕ್ತಿ ಸಹ ಕೆಲವು ನಿಮಿಷಗಳ ಕಾಲ ಈ ಗ್ರಂಥಗಳನ್ನು ಓದಿದರೆ "ತೌರಾತ್ ಮತ್ತು ಇಂಜೀಲನ್ನು ಲೋಕದ ಮುಂದಿಟ್ಟವರು ಈ ಗ್ರಂಥಗಳಲ್ಲಿ ಅಡಕವಾಗಿರುವ ವಿಷಯಗಳು ದೈವಿಕವೆಂದು ವಾದಿಸಿದ್ದರೇ ಹೊರತು ಅದರ ಪ್ರತಿಯೊಂದು ಪದವೂ ದೈವಿಕವೆಂದು ವಾದಿಸಿರಲಿಲ್ಲವೆಂದೂ, ಆದರೆ, ಪವಿತ್ರ ಖುರ್‌ಆನನ್ನು ಲೋಕದ ಮುಂದಿಟ್ಟವರು ಅದರಲ್ಲಿ ಅಡಕವಾದ ಬೋಧನೆಗಳು ಯಾವ ರೀತಿ ದೈವಿಕವೋ ಅದೇ ರೀತಿ ಅದರಲ್ಲಿ ಪ್ರಯುಕ್ತವಾದ ಪ್ರತಿಯೊಂದು ವಚನವೂ ದೈವಿಕವೆಂದು ವಾದಿಸಿದ್ದರು" ಎಂದು ಹೇಳಲು ನಿರ್ಬಂಧಿತನಾಗುತ್ತಾನೆ. ಇದೇ ಕಾರಣದಿಂದಾಗಿ ಪವಿತ್ರ ಖುರ್‌ಆನಿಗೆ "ಕಿತಾಬುಲ್ಲಾಹ್" (ದೇವಗ್ರಂಥ) ಎಂಬುದರ ಜೊತೆಗೆ "ಕಲಾಮುಲ್ಲಾಹ್" (ದೇವವಚನ) ಎಂಬ ಹೆಸರೂ ಪ್ರಯೋಗಿಸಲ್ಪಟ್ಟಿರುವುದು. ಆದರೆ ತೌರಾತಾಗಲೀ ಇಂಜೀಲಾಗಲೀ "ಕಲಾಮುಲ್ಲಾಹ್" ಎಂದು ಸ್ವಯಂ ಕರೆಸಿಕೊಳ್ಳುವುದಿಲ್ಲ. ಅಲ್ಲದೆ ಪವಿತ್ರ ಖುರ್‌ಆನ್ ಕೂಡ ಅವುಗಳನ್ನು "ಕಲಾಮುಲ್ಲಾಹ್" ಎಂಬ ಹೆಸರಿನಿಂದ ಕರೆದಿಲ್ಲ. ಸಂಕ್ಷಿಪ್ತವಾಗಿ, ಇತರ ಧರ್ಮಗ್ರಂಥಗಳು ದೇವ ಗ್ರಂಥಗಳಾಗಿವೆಯಾದರೂ, ಅವುಗಳು ದೇವ ವಚನಗಳಾಗಿರದಿದ್ದು, ಮುಸ್ಲಿಮರ ಧರ್ಮಗ್ರಂಥವು ದೇವ ಗ್ರಂಥವಾಗಿರುವುದರೊಂದಿಗೆ ದೇವ ವಚನವೂ ಆಗಿರುವುದೆಂಬುದು ಇತರ ಧರ್ಮಾನುಯಾಯಿಗಳಿಗಿಂತ ಮುಸ್ಲಿಮರಿಗಿರುವ ಒಂದು ವೈಶಿಷ್ಟ್ಯವಾಗಿದೆ.

ಅದೇ ರೀತಿ, ಎಲ್ಲ ಧರ್ಮಗಳ ಪ್ರಾರಂಭವು ಪ್ರವಾದಿಗಳಿಂದ ಉಂಟಾಗಿದೆ. ಆದರೆ, ಧಾರ್ಮಿಕ ವಿಷಯಗಳ ಸರ್ವ ರಹಸ್ಯಗಳನ್ನೂ ವಿವರಿಸುವವನೆಂದು ವಾದಿಸುವ ಮತ್ತು ಮನುಕುಲಕ್ಕೆ ಅತ್ಯುತ್ತಮ ಜೀವಿತ ಮಾದರಿಯನ್ನಾಗಿ ಮುಂದಿರಿಸಬಹುದಾದ ಪ್ರವಾದಿಯೋರ್ವರನ್ನು ಇಸ್ಲಾಮಿನ ಹೊರತು ಬೇರೆ ಯಾವ ಧರ್ಮವೂ ಲೋಕಕ್ಕೆ ನೀಡಿಲ್ಲ. ಉದಾಹರಣೆಗೆ, ಇಸ್ಲಾಮಿಗೆ ಅತ್ಯಂತ ಹತ್ತಿರದ ಕ್ರೈಸ್ತ ಧರ್ಮವನ್ನು ಪರೀಕ್ಷಿಸಿರಿ. ಅದು ತನ್ನ ಧರ್ಮ ಸ್ಥಾಪಕರಾದ ಮಸೀಹರನ್ನು ದೇವಪುತ್ರ (Son of God) ಎಂದು ಘೋಷಿಸುತ್ತದೆ. ಆದುದರಿಂದ ಅವರ ನಡವಳಿಕೆಯನ್ನು ಮನುಷ್ಯರಿಗೆ ಅನುಸರಿಸಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಮನುಷ್ಯನಿಗೆ ಎಂದಿಗೂ ದೇವನಂತಾಗಲು ಸಾಧ್ಯವಿಲ್ಲ. ಅದೇ ರೀತಿಯಲ್ಲಿ ತೌರಾತ್ (Old Testament) ಕೂಡ ಹಝ್ರತ್ ಮೂಸಾ ಅಲೈಹಿಸ್ಸಲಾಮರನ್ನು ಸರ್ವ ರೀತಿಯಲ್ಲೂ ಅನುಸರಿಸಲು ಯೋಗ್ಯನಾದ ಒಬ್ಬನೆಂದು ತೋರಿಸಿ ಕೊಡುವುದಿಲ್ಲ. ತೌರಾತಾಗಲೀ ಇಂಜೀಲಾಗಲೀ ಹಝ್ರತ್ ಮೂಸಾ ಅಲೈಹಿಸ್ಸಲಾಮರನ್ನು ಮತ್ತು ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ಧರ್ಮಕಾರ್ಯಗಳ ಆಂತರಿಕ ಅರ್ಥವನ್ನು ವಿವರಿಸುವ ವ್ಯಾಖ್ಯಾನಕಾರರೆಂದೂ ಉಲ್ಲೇಖಿಸುವುದಿಲ್ಲ. ಆದರೆ ಪವಿತ್ರ ಖುರ್‌ಆನ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುರಿತು:

وَيُعَلِّمُكُمُ الْكِتٰبَ وَالْحِكْمَةَ

"ಅವರು ನಿಮಗೆ ದೇವಾಜ್ಞೆಗಳನ್ನೂ ಅವುಗಳ ಆಂತರಿಕ ಜ್ಞಾನವನ್ನೂ ವಿವರಿಸಿ ಕೊಡುವವರಾಗಿದ್ದಾರೆ" (ಪವಿತ್ರ ಖುರ್‌ಆನ್ 2:152) ಎಂದು ಹೇಳಿದೆ. ಧರ್ಮಶಾಸನಗಳನ್ನು ಬಲವಂತವಾಗಿ ಸ್ವೀಕರಿಸಲು ಅವರು ನಿರ್ಬಂಧಿಸಿರಲಿಲ್ಲ. ತಾನು ಯಾವುದೇ ಬೋಧನೆಯನ್ನು ಜನರ ಮುಂದಿಡುವಾಗ ಅದನ್ನು ತನ್ನ ಶಿಷ್ಯರು ಸ್ಪಷ್ಟವಾಗಿ ಗ್ರಹಿಸಿ ತಮ್ಮ ವಿಶ್ವಾಸವನ್ನು ದೃಢಪಡಿಸಿಕೊಳ್ಳುವಂತೆ ಅದರಲ್ಲಿ ಅಡಕವಾಗಿರುವ, ಸಮಾಜಕ್ಕೂ ವ್ಯಕ್ತಿಗೂ ಮಾನವ ಕುಲಕ್ಕೂ ಗುಣಕಾರಿಯಾದ ತತ್ವಗಳನ್ನು ವಿವರಿಸಿ ತಿಳಿಸುತ್ತಿದ್ದರು. ಹೀಗೆ ಇಸ್ಲಾಮಿನ ಧರ್ಮಸ್ಥಾಪಕರು ಲೋಕಕ್ಕೆ ಒಬ್ಬ ಉತ್ತಮ ಮಾದರಿಯೆಂಬ ನೆಲೆಯಲ್ಲೂ ಇಸ್ಲಾಂ ಧರ್ಮಕ್ಕೆ ಇತರ ಧರ್ಮಗಳಿಗಿಂತ ಶ್ರೇಷ್ಠತೆಯಿರುವುದು.

ಇದೇ ರೀತಿ ಇಸ್ಲಾಮಿಗೆ ಅದರ ಅಧ್ಯಾಪನೆಯ ದೃಷ್ಟಿಯಲ್ಲೂ ಇತರ ಧರ್ಮಗಳಿಗಿಲ್ಲದ ಒಂದು ವೈಶಿಷ್ಟ್ಯವಿದೆ. ಸಣ್ಣವನು–ದೊಡ್ಡವನು, ದರಿದ್ರ–ಧನಿಕ, ಸ್ತ್ರೀ–ಪುರುಷ, ಪಾಶ್ಚಾತ್ಯ–ಪೌರಾಸ್ತ್ಯ, ಬಲಹೀನ–ಬಲಶಾಲಿ, ಅರಸ–ಪ್ರಜೆ, ಯಜಮಾನ–ಸೇವಕ, ಪತಿ–ಪತ್ನಿ, ಹೆತ್ತವರು–ಮಕ್ಕಳು, ಮಾರುವವ–ಕೊಳ್ಳುವವ, ನೆರೆಕರೆಯವ, ಪ್ರಯಾಣಿಕ ಇವರೆಲ್ಲರಿಗೂ ಆಶ್ವಾಸದಾಯಕವೂ ಅಭಿವೃದ್ಧಿಕಾರಿಯೂ ಶಾಂತಿದಾಯಕವೂ ಆದ ಒಂದು ಸಂದೇಶವನ್ನು ಇಸ್ಲಾಂ ಸಮರ್ಪಿಸಿದೆ. ಮಾನವ ಕುಲದ ಯಾವುದೇ ವಿಭಾಗವನ್ನು ಇಸ್ಲಾಂ ತನ್ನ ಸಂಬೋಧನೆಯಿಂದ ಹೊರತುಪಡಿಸಿಲ್ಲ. ಹಿಂದಿನ ಮತ್ತು ಮುಂದಿನ ಎಲ್ಲ ಜನಸಮೂಹಕ್ಕೂ ಅದೊಂದು ಸನ್ಮಾರ್ಗದರ್ಶಿಯಾಗಿರುವುದು. ಸರ್ವಜ್ಞನೂ ನಿಗೂಢಜ್ಞನೂ ಆದ ಪರಮಾತ್ಮನ ದೃಷ್ಟಿಯು ಭೂಮಿಯ ತಳದಲ್ಲಿರುವ ಅಣುಗಳಲ್ಲೂ ಬಾಹ್ಯಾಕಾಶದಲ್ಲಿ ಪ್ರಜ್ವಲಿಸುವ ನಕ್ಷತ್ರಾದಿ ಆಕಾಶಕಾಯ ಗಳಲ್ಲೂ ವ್ಯಾಪಿಸಿರುವಂತೆಯೇ ಮುಸ್ಲಿಮರ ಧರ್ಮೋಪದೇಶವು ದರಿದ್ರರಲ್ಲಿ ದರಿದ್ರರೂ ಬಲಹೀನರಲ್ಲಿ ಬಲಹೀನರೂ ಆದವರ ಕಾರ್ಯಕ್ಕೊದಗುವಂತೆ ಧನಿಕರಲ್ಲಿ ಧನಿಕರೂ ಬಲಿಷ್ಠರಲ್ಲಿ ಬಲಿಷ್ಠರೂ ಆದವರ ಅವಶ್ಯಕತೆಗಳಿಗೂ ಪ್ರಯೋಜನಕಾರಿಯಾಗಿರುವುದು. ಸಂಕ್ಷಿಪ್ತವಾಗಿ, ಇಸ್ಲಾಂ ಧರ್ಮವು ಪೂರ್ವಧರ್ಮಗಳ ಒಂದು ಪ್ರತಿರೂಪ ಮಾತ್ರವಾಗಿರದೆ, ಧರ್ಮ ಶೃಂಖಲೆಯ ಕೊನೆಯ ಕೊಂಡಿಯೂ ಆಧ್ಯಾತ್ಮಿಕ ಸೌರವ್ಯೂಹದ ಸೂರ್ಯವೂ ಆಗಿದೆ. ಅದರ ಯಾವುದೇ ಅಧ್ಯಾಪನೆಯನ್ನು ಇತರ ಧರ್ಮಗಳ ಅಧ್ಯಾಪನೆಯೊಂದಿಗೆ ಹೋಲಿಸುವುದು ಸರಿಯಲ್ಲ. 'ಧರ್ಮ' ವೆಂಬ ಹೆಸರಿನಲ್ಲಿ ಎಲ್ಲ ಧರ್ಮಗಳೂ ಒಳಪಡುವುದಾದರೂ 'ಅಂಗಾರ' (Carbon) ಎಂಬ ರಾಸಾಯನಿಕ ಸಂಕೇತದಿಂದ ಕಲ್ಲಿದ್ದಲೂ ವಜ್ರವೂ ಸಮವಾದರೂ ಕಲ್ಲಿದ್ದಲು ಕಲ್ಲಿದ್ದಲೇ ಮತ್ತು ವಜ್ರವು ವಜ್ರವೇ ಆಗಿರುವುದು. ಜಲ್ಲಿ ಮತ್ತು ಅಮೃತಶಿಲೆಗಳೆರಡನ್ನೂ 'ಕಲ್ಲು' ಎಂದು ಕರೆಯಬಹುದಾದರೂ ಜಲ್ಲಿ ಜಲ್ಲಿಯೇ ಆಗಿರುವುದು ಮತ್ತು ಅಮೃತಶಿಲೆ ಅಮೃತಶಿಲೆಯೇ.

ಇಸ್ಲಾಮಿನಲ್ಲಿ 'ಕಲಿಮ' ಇರುವುದರಿಂದ ಇತರ ಧರ್ಮಗಳಿಗೂ ಅದು ಇರುವುದೆಂದು ಭಾವಿಸುವುದು ಪರಿಚಯದ ಅಭಾವದಿಂದಲೂ ಪವಿತ್ರ ಖುರ್‌ಆನನ್ನು ಗಾಢವಾಗಿ ಪಠಿಸದ ಕಾರಣದಿಂದಲೂ ಆಗಿದೆ. ಇನ್ನು ಕೆಲವರ

ನ್ಯಾಯವಾದವು ಇದಕ್ಕಿಂತಲೂ ಆಶ್ಚರ್ಯಕರವಾಗಿರುವುದು.

"ಲಾ ಇಲಾಹ ಇಲ್ಲಲ್ಲಾಹ್ ಇಬ್ರಾಹೀಂ ಖ಼ಲೀಲುಲ್ಲಾಹ್"

"ಲಾ ಇಲಾಹ ಇಲ್ಲಲ್ಲಾಹ್ ಮೂಸಾ ಕಲೀಮುಲ್ಲಾಹ್"

"ಲಾ ಇಲಾಹ ಇಲ್ಲಲ್ಲಾಹ್ ಈಸಾ ರೂಹುಲ್ಲಾಹ್"

ಎಂಬಿತ್ಯಾದಿ ವಾಕ್ಯಗಳನ್ನುಚ್ಚರಿಸುತ್ತಾ ಇವು ಪೂವಧರ್ಮೀಯರ ಕಲಿಮವಾಗಿತ್ತೆಂದು ಅವರು ಹೇಳುತ್ತಾರೆ. ಆದರೆ ತೌರಾತಿನಲ್ಲಾಗಲೀ ಇಂಜೀಲಿನಲ್ಲಾಗಲೀ ಇನ್ನಿತರ ಯಾವುದೇ ಕ್ರೈಸ್ತ ಕೃತಿಗಳಲ್ಲಾಗಲೀ ಈ ಕಲಿಮಗಳ ಸಂಕೇತ ಕೂಡ ಕಾಣಲ್ಪಡುವುದಿಲ್ಲ. ಮುಸ್ಲಿಮರಲ್ಲಿ ಇಂದು ಸಾವಿರಾರು ಅನಾಚಾರಗಳು ಬಂದು ಸೇರಿ, ಇಸ್ಲಾಮಿನ ಹಲವಾರು ಪಾವನ ತತ್ವೋಪದೇಶಗಳನ್ನು ಅವರು ಮರೆತು ಬಿಟ್ಟರಾದರೂ ಅವರೇನು ತಮ್ಮ ಕಲಿಮವನ್ನು ಮರೆತರೇ? ಇಲ್ಲವೆಂದಾದರೆ ಮತ್ತೆ ಯಹೂದ್ಯರಿಗೂ ಕ್ರೈಸ್ತರಿಗೂ ತಮ್ಮ 'ಕಲಿಮ' ಮರೆತು ಹೋದುವೆಂದು ಹೇಳಲು ಹೇಗೆ ಸಾಧ್ಯ? ಒಂದು ವೇಳೆ ಅವರಿಗೆ ತಮ್ಮ 'ಕಲಿಮ' ಮರೆತು ಹೋಗಿ, ಅವರ ಎಲ್ಲ ಕೃತಿಗಳಲ್ಲೂ ಅದು ಅದೃಶ್ಯವಾದುದೂ ಆಗಿದ್ದರೆ, ಅವರ ಕಲಿಮಗಳು ಇವೆಲ್ಲ ಆಗಿತ್ತೆಂದು ಈ ಮುಸ್ಲಿಮರಿಗೆ ಯಾರು ತಿಳಿಸಿಕೊಟ್ಟರು? ನಿಜವೇನೆಂದರೆ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಮರಿಗಲ್ಲದೆ ಬೇರೆ ಯಾವ ಪ್ರವಾದಿಗೂ 'ಕಲಿಮ' ಇರಲಿಲ್ಲ. ಮುಹಮ್ಮದ್ ಪೈಗಂಬರರಿಗೆ[ಸ] ಮಾತ್ರವೇ 'ಕಲಿಮ' ಲಭಿಸಿತು ಎಂಬುದು ಇತರ ಪ್ರವಾದಿಗಳಲ್ಲಿ ಅವರಿಗಿರುವ ಶ್ರೇಷ್ಠತೆಗಳಲ್ಲಿ ಒಂದಾಗಿದೆ. ಅವರಿಗಲ್ಲದೆ ಬೇರೆ ಯಾವ ಪ್ರವಾದಿಗೂ 'ಕಲಿಮ' ಲಭಿಸಿರಲಿಲ್ಲ. ಅದಕ್ಕೆ ಕಾರಣವೇನೆಂದರೆ, 'ಕಲಿಮ'ದಲ್ಲಿ ನಬಿಯವರ್ಯರ ಪ್ರವಾದಿತ್ವವನ್ನು (ರಿಸಾಲತ್) ಅಲ್ಲಾಹನ ಏಕತ್ವದೊಂದಿಗೆ (ತೌಹೀದ್) ಸೇರಿಸಿ ಹೇಳಲ್ಪಟ್ಟಿದೆ. ದೇವನ ಏಕತ್ವ ಪ್ರಕಟಣೆಯು ಎಂದೂ ಉಳಿಯಬೇಕಾದದ್ದೂ ಎಂದಿಗೂ ಅಳಿದು ಹೋಗಬಾರದ್ದೂ ಆಗಿರುವುದಷ್ಟೆ. ಪೂರ್ವ ಪ್ರವಾದಿಗಳ ಪ್ರವಾದಿತ್ವದ ಕಾಲಾವಧಿ ಒಂದಲ್ಲ ಒಂದು ಕಾಲದಲ್ಲಿ ಕೊನೆಗೊಳ್ಳಲಿರುವುದರಿಂದ ಅವರಲ್ಲಿ ಯಾರ ಹೆಸರಿನೊಂದಿಗೂ ದೇವನು ತನ್ನ ಏಕತ್ವವನ್ನು ಹೊಂದಿಸಿ ಹೇಳಲಿಲ್ಲ. ಆದರೆ ಪ್ರವಾದಿಗಳ ಪ್ರಭುವಾದ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ

ವಸಲ್ಲಮರ ಸಂದೇಶವು ಅಂತ್ಯಕಾಲದವರೆಗೆ ನೆಲೆಗೊಳ್ಳಲಿರುವುದೂ ಆ ಪುಣ್ಯ ಪ್ರವಾದಿಯ ಕಾಲವು ಕೊನೆಗೊಳ್ಳದ್ದೂ ಆಗಿರುವುದರಿಂದ ಅವರ ಹೆಸರು ಮತ್ತು ದೌತ್ಯವನ್ನು ತನ್ನ ಏಕತ್ವ ಪ್ರಖ್ಯಾಪನೆಯೊಂದಿಗೆ ಜಂಟಿಯಾಗಿ ಪ್ರಕಟಿಸಿದನು. ಏಕೆಂದರೆ "ಲಾ ಇಲಾಹ ಇಲ್ಲಲ್ಲಾಹು" ಎಂಬುದು ಎಂದೂ ಅಳಿದು ಹೋಗದ ರೀತಿಯಲ್ಲೇ 'ಮುಹಮ್ಮದ್ ರಸೂಲುಲ್ಲಾಹ್' ಎಂಬುದು ಎಂದಿಗೂ ಅಳಿಯಲಾರದು ಎಂದು ಲೋಕಕ್ಕೆ ತೋರಿಸಿಕೊಡಲಿಕ್ಕಾಗಿ! ಏನಾಶ್ಚರ್ಯ, ಪ್ರವಾದಿ ಮೂಸಾರಿಗೆ[ಅ] ಒಂದು 'ಕಲಿಮ' ಇದ್ದುದಾಗಿ ಯಹೂದಿಗಳು ಹೇಳುವುದಿಲ್ಲ. ಈಸಾ ನಬಿ ಅಲೈಹಿಸ್ಸಲಾಮರಿಗೆ ಒಂದು 'ಕಲಿಮ' ಇದ್ದುದಾಗಿ ಕ್ರೈಸ್ತರೂ ಹೇಳುವುದಿಲ್ಲ. ಪ್ರವಾದಿ ಇಬ್ರಾಹೀಂ ಅಲೈಹಿಸ್ಸಲಾಮರಿಗೆ ಯಾವುದೇ 'ಕಲಿಮ' ಇದ್ದುದಾಗಿ ಸಾಬಿಗಳೂ ಹೇಳುವುದಿಲ್ಲ. ಆದರೆ, ಯಾವ ಧರ್ಮಾನುಯಾಯಿಗಳ ನಬಿವರ್ಯರಿಗೆ 'ಕಲಿಮ' ಒಂದು ವೈಶಿಷ್ಟ್ಯವಾಗಿ ನೆಲೆಗೊಳ್ಳುವುದೋ, ಯಾವ ಧರ್ಮಸ್ಥರ ವೈಶಿಷ್ಟ್ಯವನ್ನು ದೇವನು ಆ ಕಲಿಮದಿಂದ ಅಲಂಕರಿಸಿದನೋ ಅಂತಹವರಾದ ಮುಸ್ಲಿಮರು ಇಂದು ಬಹು ವಿಶಾಲ ಹೃದಯರಾಗಿ ತಮ್ಮ ನಬಿವರ್ಯರಿಗಿರುವ ಈ ವೈಶಿಷ್ಟ್ಯವನ್ನು ಇತರ ಪ್ರವಾದಿಗಳಿಗೂ ಹಂಚಿಕೊಡಲು ಸಿದ್ಧರಾಗಿರುವರು. ಆ ಪ್ರವಾದಿಗಳ ಅನುಯಾಯಿಗಳಾದರೋ ತಮ್ಮ ಪ್ರವಾದಿಗಳಿಗೆ ಆ ರೀತಿಯ 'ಕಲಿಮ' ಇದ್ದುದಾಗಿ ವಾದಿಸುವುದಿಲ್ಲ. ಆದರೂ ಇವರು ತಮ್ಮದೇ ಆದ ಕಲಿಮಗಳನ್ನು ನಿರ್ಮಿಸಿಕೊಂಡು ಯಹೂದ್ಯರ ಕಲಿಮ ಇದಾಗಿತ್ತು, ಇಬ್ರಾಹೀಮರ ಕಲಿಮ ಇದಾಗಿತ್ತು, ಕ್ರೈಸ್ತರ ಕಲಿಮ ಇದಾಗಿತ್ತು ಎಂದು ಹೇಳಿಕೊಳ್ಳುತ್ತಾರೆ.

ಸಂಕ್ಷಿಪ್ತವಾಗಿ, ಪ್ರತಿಯೊಂದು ಧರ್ಮಕ್ಕೂ ಒಂದೊಂದು ಕಲಿಮ ಅಗತ್ಯವಿಲ್ಲ. ಅಗತ್ಯವಿರುವುದಾದರೂ ಅಹ್ಮದಿಯ್ಯತಿಗೆ ಒಂದು ಹೊಸ ಕಲಿಮ ಇರಲು ಸಾಧ್ಯವಿಲ್ಲ. ಏಕೆಂದರೆ ಅಹ್ಮದಿಯ್ಯತ್ ಎಂಬುದು ಒಂದು ನೂತನ ಧರ್ಮವಲ್ಲ. ಅದು ಇಸ್ಲಾಮಿನ ಒಂದು ಪರ್ಯಾಯ ಮಾತ್ರವಾಗಿದೆ. ಶ್ರೇಷ್ಠ ಪ್ರವಾದಿ ಮುಹಮ್ಮದ್ ಮುಸ್ತಫಾ[ಸ] ಲೋಕದ ಮುಂದೆ ಸಮರ್ಪಿಸಿದ "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹಿ" ಎಂಬ ಅದೇ ಕಲಿಮದಲ್ಲಿ ಅಹ್ಮದಿಯರು ದೃಢವಿಶ್ವಾಸ ಉಳ್ಳವರಾಗಿದ್ದಾರೆ. ಅಹ್ಮದಿಯರ ದೃಷ್ಟಿಯಲ್ಲಿ ಈ

ಭೌತಿಕ ಪ್ರಪಂಚಕ್ಕೆ ಸೃಷ್ಟಿಕರ್ತನಾಗಿ ಒಬ್ಬ ದೇವನಿರುವನು. ಅವನು ಏಕನೂ ನಿಸ್ತುಲ್ಯನೂ ಆಗಿರುವನು. ಅವನ ಶಕ್ತಿ ಸಾಮರ್ಥ್ಯಗಳು ಅಪಾರವಾಗಿರುವುವು. ಅವನು ಸರ್ವ ಜಗತ್ತಿನ ಸಂರಕ್ಷಕನೂ ಪಾಲಕನೂ ಆಗಿರುವನು. ಅವನು ದಯಾಳುವೂ ಕಾರುಣ್ಯನಿಧಿಯೂ ಆಗಿರುವನು. ಅವನು ನಮ್ಮ ಯಜಮಾನನೂ ನ್ಯಾಯಾಧಿಪತಿಯೂ ಆಗಿರುವನು. ಪವಿತ್ರ ಖುರ್‌ಆನಿನಲ್ಲಿ ವಿವರಿಸಲ್ಪಟ್ಟ ಎಲ್ಲ ಗುಣಗಳನ್ನೂ ಅವನು ಹೊಂದಿರುವನು. ಯಾವೆಲ್ಲ ನ್ಯೂನತೆಗಳಿಂದ ಅವನು ಸುರಕ್ಷಿತನೆಂದು ಪವಿತ್ರ ಖುರ್‌ಆನ್ ಹೇಳುವುದೋ ಆ ಎಲ್ಲ ಲೋಪದೋಷಗಳಿಂದ ಅವನು ಪರಿಶುದ್ಧನಾಗಿರುವನು. ಮಕ್ಕದ ಖುರೈಷಿ ಗೋತ್ರದಲ್ಲಿ ಜನಿಸಿದ ಮುಹಮ್ಮದ್ ಬಿನ್ ಅಬ್ದುಲ್ಲಾಹಿ ಬಿನ್ ಅಬ್ದುಲ್ ಮುತ್ತಲಿಬ್ ಅಲ್ಲಾಹನ ವರಿಷ್ಠ ದೂತರೆಂದೂ ಅಹ್ಮದಿಯರು ನಂಬುತ್ತಾರೆ. ಎಲ್ಲಕ್ಕಿಂತಲೂ ಕೊನೆಯದಾದ ಶರೀಅತ್ (ಧರ್ಮಶಾಸನ) ಗ್ರಂಥವು ಅವರಿಗೆ ಅವತೀರ್ಣಗೊಂಡಿತು. ಅವರು ಅರಬಿಗಳಿಗೂ ಅಜಮಿಗಳಿಗೂ (ಅರಬಿಗಳಲ್ಲದವರಿಗೂ) ಕಪ್ಪು ಜನರಿಗೂ ಬಿಳಿಯರಿಗೂ ಎಲ್ಲ ಜಾತಿಯರಿಗೂ ಎಲ್ಲ ಮನುಷ್ಯ ಸಂತತಿಗಳಿಗೂ ಪ್ರವಾದಿಯಾಗಿ ನಿಯೋಗಿಸಲ್ಪಟ್ಟವರಾಗಿರುವರು. ಅವರ ಸಂದೇಶದ ಪ್ರವರ್ತನ ಕಾಲವು ಅವರ ಪ್ರವಾದಿತ್ವ ವಾದದ ಕಾಲದ ಮೊದಲ್ಗೊಂಡು ಪ್ರಪಂಚದಲ್ಲಿ ಒಬ್ಬನೇ ಮನುಷ್ಯನು ಮಾತ್ರವೇ ಬಾಕಿಯುಳಿಯುವ ಕಾಲದವರೆಗೂ ಆಗಿರುವುದು. ಅವರ ತತ್ವಬೋಧನೆಗಳನ್ನು ಅನುಸರಿಸಿ ಜೀವಿಸಲು ಪ್ರತಿಯೊಬ್ಬ ವ್ಯಕ್ತಿಯೂ ನಿರ್ಬಂಧಿತನಾಗಿರುವನು. ಅವರ ಸಂದೇಶವನ್ನು ಕೇಳಿಯೂ ಅವರ ಕುರಿತು ಪರ್ಯಾಲೋಚಿಸಲು ಸಂದರ್ಭ ಲಭಿಸಿಯೂ ಇರುವ ಯಾವನೇ ವ್ಯಕ್ತಿಯೂ ಅವರಲ್ಲಿ ವಿಶ್ವಾಸ ಕೈಗೊಳ್ಳದಿದ್ದಲ್ಲಿ ದೇವ ಶಿಕ್ಷೆಗೆ ಗುರಿಯಾಗದಿರಲಾರನು. ಯಾವನಿಗೆ ಅವರ ಹೆಸರು ಕೇಳಲ್ಪಟ್ಟಿತೋ ಮತ್ತು ಅವರ ಕುರಿತು ಸತ್ಯ ಸಾಕ್ಷ್ಯಗಳು ವಿವರಿಸಿ ಕೊಡಲ್ಪಟ್ಟವೋ ಅಂತಹ ಪ್ರತಿಯೊಬ್ಬ ಮನುಷ್ಯನೂ ಅವರಲ್ಲಿ ವಿಶ್ವಾಸವಿಡಲು ನಿರ್ಬಂಧಿತನಾಗುತ್ತಾನೆ. ಅವರನ್ನು ಸ್ವೀಕರಿಸದೆ ಮನುಷ್ಯರಿಗೆ ಮೋಕ್ಷ ಲಭಿಸಲು ಬೇರೆ ಮಾರ್ಗವಿಲ್ಲ. ನಿಜವಾದ ಪರಿಶುದ್ಧತೆಯೂ ಪವಿತ್ರತೆಯೂ ಅವರ ಅನುಕರಣೆಯಿಂದ ಮಾತ್ರವೇ ಲಭ್ಯವಾಗುವುದು.

# ಅಹ್ಮದಿಯರ ಕುರಿತು ಕೆಲವು ಸಂಶಯ ನಿವಾರಣೆಗಳು

## ಖತಮುನ್ನುಬುವ್ವತಿನ ಕುರಿತು ಅಹ್ಮದಿಯರ ವಿಶ್ವಾಸ:

ಅಹ್ಮದಿಯರಿಗೆ ಖತಮುನ್ನುಬುವ್ವತಿನಲ್ಲಿ ವಿಶ್ವಾಸವಿಲ್ಲವೆಂದೂ ಅವರು ಮುಹಮ್ಮದ್ ಮುಸ್ತಫಾರನ್ನು(ಸ) "ಖಾತಮುನ್ನಬಿಯ್ಯೀನ್" ಆಗಿ ಅಂಗೀಕರಿಸುವುದಿಲ್ಲವೆಂದೂ ಕೆಲವರು ಹೇಳುವುದಿದೆ. ಇದು ಕೇವಲ ತಪ್ಪು ತಿಳುವಳಿಕೆಯ ಮತ್ತು ಅಜ್ಞಾನದ ಫಲವಾಗಿರುವುದು. ಅಹ್ಮದಿಯರು ತಾವು ಮುಸ್ಲಿಮರೆಂದು ಹೇಳಿಕೊಂಡು "ಶಹಾದತ್ ಕಲಿಮ"ದಲ್ಲಿ ದೃಢವಾಗಿ ವಿಶ್ವಾಸವಿಟ್ಟಿರುವಾಗ ಅವರು ಖತಮುನ್ನುಬುವ್ವತಿನ ನಿಷೇಧಿಗಳೂ, ರಸೂಲ್ ಕರೀಮ್‌ರನ್ನು(ಸ) ಖಾತಮುನ್ನಬಿಯ್ಯೀನ್ ಎಂದು ನಂಬದವರೂ ಆಗಿರಲು ಹೇಗೆ ಸಾಧ್ಯ? ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಅಲ್ಲಾಹನು ಪ್ರಸ್ತಾಪಿಸುತ್ತಾನೆ:

مَا كَانَ مُحَمَّدٌ اَبَآ اَحَدٍ مِّنْ رِّجَالِكُمْ وَلٰكِنْ رَّسُوْلَ اللّٰهِ وَخَاتَمَ النَّبِيّٖنَ ؕ

"ಮಾ ಕಾನ ಮುಹಮ್ಮದುನ್ ಅಬಾ ಅಹದಿನ್ ಮಿರ್‍ರಿಜಾಲಿಕುಂ ವಲಾಕಿರ್‍ರಸೂಲಲ್ಲಾಹಿ ವ ಖಾತಮನ್ನಬಿಯ್ಯೀನ" – ಎಂದರೆ "ಮುಹಮ್ಮದ್ ನಿಮ್ಮಲ್ಲಿ ಯಾರೊಬ್ಬ ಪುರುಷನ ಪಿತನೂ ಅಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕ ಮತ್ತು ಖಾತಮುನ್ನಬಿಯ್ಯೀನ್ ಆಗಿರುವರು" (ಪವಿತ್ರ ಖುರ್‌ಆನ್ 33:41) ಪವಿತ್ರ ಖುರ್‌ಆನಿನಲ್ಲಿ ವಿಶ್ವಾಸವಿಡುವ ಒಬ್ಬ ವ್ಯಕ್ತಿಗೆ ಈ ವಾಕ್ಯವನ್ನು ನಿಷೇಧಿಸಲು ಸಾಧ್ಯವೇ? ಆದುದರಿಂದ ಹಝ್ರತ್ ರಸೂಲ್ ಕರೀಮ್(ಸ) "ಖಾತಮುನ್ನಬಿಯ್ಯೀನ್" ಅಲ್ಲವೆಂದು ನಂಬಲು ಅಹ್ಮದಿಯರಿಗೆ ಯಾವತ್ತೂ ಸಾಧ್ಯವಿಲ್ಲ. ಅಹ್ಮದಿಯರು ಹೇಳುವುದೇನೆಂದರೆ, ಖಾತಮುನ್ನಬಿಯ್ಯೀನ್‌ಗೆ ಇಂದಿನ ಇತರ ಮುಸ್ಲಿಮರು ಸಾಮಾನ್ಯವಾಗಿ ಸೂಚಿಸುವ ಅರ್ಥ ವಿವರಣೆಯು ಪವಿತ್ರ ಖುರ್‌ಆನಿನ ಈ ಪದಕ್ಕೆ ಅನುಯೋಜ್ಯವಲ್ಲವೆಂದೂ ನಬಿವರ್ಯರ ಯಾವ ಗುಣ ಮಹಾತ್ಮೆಗಳನ್ನು ಪ್ರತಿಪಾದಿಸಲು ಈ ಪದವು ಪ್ರಯೋಗಿಸಲ್ಪಟ್ಟಿರುವುದೋ ಅದನ್ನು ನಿರೂಪಿಸಲು ಅಪರ್ಯಾಪ್ತವೆಂದೂ ಮಾತ್ರವಾಗಿದೆ. ಅಹ್ಮದಿಯರು ಈ ಪದಕ್ಕೆ ಕೊಡುತ್ತಿರುವ ಅರ್ಥವಾದರೋ, ಸಾಮಾನ್ಯವಾಗಿ ಅರಬಿ ಸಾಹಿತ್ಯಗಳಲ್ಲಿ

ಪ್ರಯೋಗಿಸಲ್ಪಡುವಂಥದ್ದೂ ಹಝ್ರತ್ ಆಯಿಶ ಸಿದ್ದೀಖ(ರ), ಹಝ್ರತ್ ಅಲಿ(ರ) ಮತ್ತು ಇತರ ಸಹಾಬಿಗಳು ಅದಕ್ಕೆ ನೀಡಿರುವ ಅರ್ಥವೂ ಆಗಿದೆ. ಆ ಅರ್ಥಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನ ಮಹಾತ್ಮೆಯು ಅತ್ಯುತ್ಕೃಷ್ಟವಾಗಿ ಶೋಭಿಸುವುದಲ್ಲದೆ ನಬಿವರ್ಯರು ಸರ್ವ ಮಾನವಕುಲಕ್ಕೆ ಶ್ರೇಷ್ಠರೆಂದು ತಿಳಿಸಿ ಕೊಡುವುದು. ಸಂಕ್ಷಿಪ್ತವಾಗಿ, ಅಹ್ಮದಿಯರು ಖತಮುನ್ನುಬುವ್ವತನ್ನು ನಿಷೇಧಿಸುವುದಿಲ್ಲ. ಅದಕ್ಕೆ ಇಂದು ಇತರ ಮುಸ್ಲಿಮರಿಂದ ತಪ್ಪಾಗಿ ನೀಡಲ್ಪಟ್ಟ ಅರ್ಥವನ್ನು ಮಾತ್ರವೇ ನಿಷೇಧಿಸುತ್ತಾರೆ. ಖತಮುನ್ನುಬುವ್ವತನ್ನು ನಿಷೇಧಿಸುವುದು "ಕುಫ್ರ್" ಆಗಿರುವುದು. ಆದರೆ ದೇವಾನುಗ್ರಹದಿಂದ ಅಹ್ಮದಿಯರು ಮುಸ್ಲಿಮರಾಗಿರುವರು. ಇಸ್ಲಾಂ ಧರ್ಮದ ಸಿದ್ಧಾಂತಗಳ ಪ್ರಕಾರ ನಡೆಯುವುದು ಮಾತ್ರವೇ ಮೋಕ್ಷ ಪ್ರಾಪ್ತಿಗಿರುವ ಏಕಮಾರ್ಗವೆಂದು ಅವರು ನಂಬುವವರೂ ಆಗಿದ್ದಾರೆ.

ಅಹ್ಮದಿಯರು ಪವಿತ್ರ ಖುರ್‌ಆನನ್ನು ಸಂಪೂರ್ಣವಾಗಿ ಸ್ವೀಕರಿಸುವುದಿಲ್ಲವೆಂದೂ ಅದರ ಕೆಲವು ಭಾಗಗಳನ್ನು ಮಾತ್ರವೇ ಅವರು ನಂಬುತ್ತಾರೆಂದೂ ಅಹ್ಮದಿಯತಿನ ಕುರಿತು ಅಪರಿಚಿತರಾದ ಕೆಲವರು ಹೇಳುತ್ತಾರೆ. ನಾನು ಒಮ್ಮೆ ಕ್ವೆಟ್ಟಾದಲ್ಲಿದ್ದಾಗ, ಅಹ್ಮದಿಯರು ಪೂರ್ಣ ಖುರ್‌ಆನನ್ನು ಸ್ವೀಕರಿಸುವುದಿಲ್ಲವೆಂದು ತಮ್ಮೊಡನೆ ಕೆಲವು ಧಾರ್ಮಿಕ ಪಂಡಿತರು ಹೇಳಿದರೆಂದು ಕೆಲವು ಸಂದರ್ಶಕರು ನನ್ನೊಡನೆ ಹೇಳಿದರು. ಇದು ಕೂಡ ಅಹ್ಮದಿಯರ ಮೇಲೆ ಅವರ ವಿರೋಧಿಗಳು ಹೊರಿಸುವ ಒಂದು ಆರೋಪವಾಗಿದೆ. ಪವಿತ್ರ ಖುರ್‌ಆನ್ ಎಂದೂ ಮಾರ್ಪಾಟಿಗೆ ಗುರಿಯಾಗದ್ದೂ ಎಂದೆಂದೂ ನೆಲೆಗೊಳ್ಳುವಂಥದ್ದೂ ಆದ ದೇವಗ್ರಂಥವಾಗಿರುವುದೆಂದು ಅಹ್ಮದಿಯರು ನಂಬುತ್ತಾರೆ. ಪವಿತ್ರ ಖುರ್‌ಆನಿನ ಬಿಸ್ಮಿಲ್ಲಾಹಿಯ "ಬ" ಎಂಬ ಅಕ್ಷರದಿಂದ ವನ್ನಾಸ್‌ನ "ಸೀನ್" ವರೆಗೂ ಅದರ ಪ್ರತಿಯೊಂದು ಅಕ್ಷರವೂ ಪದವೂ ಅಲ್ಲಾಹನಿಂದ ಅವತೀರ್ಣಗೊಂಡದ್ದೂ, ಪ್ರಾಯೋಗಿಕವೂ ಆಗಿರುವುದೆಂದು ಅಹ್ಮದಿಯರು ದೃಢವಾಗಿ ನಂಬುತ್ತಾರೆ.

## 'ಮಲಕ್'ಗಳ ಕುರಿತು ಅಹ್ಮದಿಯರ ವಿಶ್ವಾಸ

ಅಹ್ಮದಿಯರು ಮಲಕ್‌ಗಳ ಮತ್ತು ಶೈತಾನನ ಇರುವಿಕೆಯಲ್ಲಿ ವಿಶ್ವಾಸವಿಲ್ಲದವರೆಂದು ಈ ಅಪರಿಚಿತರಲ್ಲಿ ಕೆಲವರು ಹೇಳುತ್ತಾರೆ. ಇದು ಕೂಡ ಒಂದು ಸ್ವಯಂ ಕಲ್ಪಿತ ಆರೋಪವಾಗಿದೆ. ಪವಿತ್ರ ಖುರ್‌ಆನಿನಲ್ಲಿ ಮಲಕ್‌ಗಳ ಕುರಿತು ಹೇಳಲ್ಪಟ್ಟಿದೆ. ಅದೇ ರೀತಿ ಶೈತಾನನ ಕುರಿತೂ ಪವಿತ್ರ ಖುರ್‌ಆನಿನಲ್ಲಿ ವಿವರಿಸಲ್ಪಟ್ಟಿದೆ. ಈ ರೀತಿ ಪವಿತ್ರ ಖುರ್‌ಆನಿನಲ್ಲಿ ವಿವರಿಸಿರುವ ಸಂಗತಿಗಳ ಕುರಿತು, ತಾವು ಪವಿತ್ರ ಖುರ್‌ಆನಿನಲ್ಲಿ ಸಂಪೂರ್ಣವಾಗಿ ನಂಬಿಕೆಯುಳ್ಳವರೆಂದು ವಾದಿಸುತ್ತಾ ಅಹ್ಮದಿಯರಿಗೆ ಅದನ್ನು ನಿಷೇಧಿಸಲು ಸಾಧ್ಯವಾದೀತೇ? ಅಲ್ಲಾಹನ ಅನುಗ್ರಹದಿಂದ ನಾವು ಮಲಕುಗಳಲ್ಲಿ ಪರಿಪೂರ್ಣ ವಿಶ್ವಾಸವುಳ್ಳವರಾಗಿದ್ದೇವೆ. ನಾವು ಮಲಕುಗಳಲ್ಲಿ ಕೇವಲ ವಿಶ್ವಾಸ ಮಾತ್ರವುಳ್ಳವರಾಗಿರದೆ, ಅಹ್ಮದಿಯ್ಯತಿನ ಮೂಲಕ ನಮಗೆ ಲಬ್ಧವಾಗಿರುವ ಅನುಗ್ರಹದ ಕಾರಣದಿಂದಾಗಿ, ಪವಿತ್ರ ಖುರ್‌ಆನಿನ ಮುಖಾಂತರ ಮಲಕುಗಳೊಡನೆ ಸಂಪರ್ಕ ಸ್ಥಾಪಿಸಬಹುದೆಂದೂ ಅವರಿಂದ ಆಧ್ಯಾತ್ಮಿಕ ಜ್ಞಾನವನ್ನು ಪಡೆಯಬಹುದೆಂದೂ ನಾವು ದೃಢವಿಶ್ವಾಸ ಉಳ್ಳವರಾಗಿದ್ದೇವೆ.

ಇದರ ಲೇಖಕನಾದ ನಾನು ಸ್ವತಃ ಹಲವು ಕಾರ್ಯಗಳನ್ನು ಮಲಕ್‌ಗಳ ಮೂಲಕವಾಗಿ ಸಿದ್ಧಿಸಿಕೊಂಡವನಾಗಿರುವೆನು. ಒಮ್ಮೆ (ದಿವ್ಯ ದರ್ಶನದಲ್ಲಿ) ಒಂದು ಮಲಕ್ ನನಗೆ 'ಸೂರಃ ಫಾತಿಹ'ದ ವ್ಯಾಖ್ಯಾನವನ್ನು ಬೋಧಿಸಿ ಕೊಟ್ಟಿತು. ಅಂದಿನಿಂದ ಇಂದಿನವರೆಗೂ "ಸೂರ ಫಾತಿಹ"ದ ಅರ್ಥವೈಶಾಲ್ಯವು ನನಗೆ ಪ್ರಕಟವಾಗುತ್ತಿರುವುದಕ್ಕೆ ಮಿತಿಯೇ ಇಲ್ಲ. ಜಗತ್ತಿನ ಮುಂದೆ ನನ್ನ ಒಂದು ವಾದವೇನೆಂದರೆ, ಯಾವ ವ್ಯಕ್ತಿಗೂ ಆಧ್ಯಾತ್ಮಿಕವಾದ ಯಾವುದೇ ವಿಷಯದ ಕುರಿತು ತನ್ನ ಇಡೀ ಧರ್ಮಗ್ರಂಥದಿಂದ ತೆಗೆದು ತೋರಿಸಲು ಸಾಧ್ಯವಾಗುವುದಕ್ಕಿಂತಲೂ ಹೆಚ್ಚಾಗಿ ಅದೇ ವಿಷಯದ ಕುರಿತು ಕೇವಲ ಸೂರಃ ಫಾತಿಹದಿಂದ ತೆಗೆದು ತೋರಿಸಲು ನಾನು ಸಿದ್ಧನಿರುವೆನು ಎಂಬುದು. ಅಂದಿನಿಂದ ಇಂದಿನವರೆಗೂ ನನ್ನ ಈ ಆಹ್ವಾನವು (Challenge) ಜಗತ್ತಿನ ಮುಂದೆ ಇರುವುದಾದರೂ ಇದುವರೆಗೂ ಯಾರೂ ಈ ಆಹ್ವಾನವನ್ನು ಸ್ವೀಕರಿಸಿ ಮುಂದೆ ಬಂದಿಲ್ಲ.* ದೇವಾಸ್ತಿತ್ವಕ್ಕೆ

* ಪವಿತ್ರ ಖುರ್‌ಆನಿನ ಪ್ರಾರಂಭ ಅಧ್ಯಾಯವಾದ ಸೂರಃ ಫಾತಿಹದ ಜ್ಞಾನ ಗಂಭೀರವೂ

ಸಾಕ್ಷ್ಯಗಳು, ಅವನ ಏಕತ್ವ, ರಿಸಾಲತ್ (ಪ್ರವಾದಿತ್ವ, ದೌತ್ಯ) ಮತ್ತು ಅದರ ಅವಶ್ಯಕತೆ, ಪರಿಪೂರ್ಣ ವೇದಗ್ರಂಥದ ಲಕ್ಷಣಗಳು ಮತ್ತು ಮಾನವಕುಲಕ್ಕೆ ಅದರ ಅಗತ್ಯ, ಪ್ರಾರ್ಥನೆ, ದೇವವಿಧಿ, ವಿಚಾರಣಾ ದಿನ, ಸ್ವರ್ಗ ಮತ್ತು ನರಕ ಇವುಗಳ ಕುರಿತೆಲ್ಲ ಕೇವಲ ಸೂರಃ ಫಾತಿಹದಿಂದ ಪ್ರಕಟವಾಗುವ ಪ್ರಕಾಶವು ಬೇರೆ ಧರ್ಮಗ್ರಂಥಗಳ ಶತಗಟ್ಟಳೆ ಹಾಳೆಗಳಿಂದ ಸಿದ್ಧಿಸಲಾರದು. ಅಂತೂ ಮಲಕುಗಳಲ್ಲಿ ಅಹ್ಮದಿಯರು ವಿಶ್ವಾಸವುಳ್ಳವರಾಗಿರುವರೋ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವರಾದರೆ, ಮಲಕುಗಳಿಂದ ಫಲವನ್ನನುಭವಿಸುವುದಾಗಿ ವಾದಿಸುವವರಾಗಿದ್ದಾರೆ.

"ಶೈತಾನ್" ಕುರಿತು ಹೇಳುವುದಾದರೆ, ಅದೊಂದು ಅಶುದ್ಧ ವಸ್ತುವಾಗಿದೆ. ಅದರಲ್ಲಿ ನಂಬಿಕೆಯಿಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಶೈತಾನ್ ಇದೆಯೆಂದು ಪವಿತ್ರ ಖುರ್‌ಆನಿನಿಂದ ನಮಗೆ ಬೋಧ್ಯವಾಗುತ್ತದೆ. ಅಂತೆಯೇ ಅದರ ಇರುವಿಕೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಅಷ್ಟು ಮಾತ್ರವಲ್ಲ ಶೈತಾನನ ಶಕ್ತಿಯನ್ನೂ ಸ್ವಾಧೀನತೆಯನ್ನೂ ಕುಂದಿಸುವ ಜವಾಬ್ದಾರಿಕೆಯನ್ನು ದೇವನು ನಮ್ಮ ಮೇಲೆ ಹೊರಿಸಿರುವುದಾಗಿಯೂ ನಾವು ನಂಬುತ್ತೇವೆ. ಶೈತಾನನ್ನು ಕೂಡ ನಾನು ಸ್ವಪ್ನದಲ್ಲಿ ಕಂಡಿರುವೆನು. ಒಮ್ಮೆ ಅದರೊಂದಿಗೆ ಕಾದಾಡಿ ಅಲ್ಲಾಹನ ಸಹಾಯದಿಂದಲೂ ಕಲಿಮ ತಅವ್ವುಧಿನ* ಮಹಿಮೆಯಿಂದಲೂ ನಾನದನ್ನು ಪರಾಭವಗೊಳಿಸಿದೆನು. ಒಮ್ಮೆ ಅಲ್ಲಾಹನು ನನಗೆ ಈ ರೀತಿ ತಿಳಿಸಿದನು: ಯಾವ ಕಾರ್ಯಕ್ಕಾಗಿ ನೀನು ನಿಯುಕ್ತನಾಗಿರುವೆಯೋ ಆ ಕಾರ್ಯ

---

ಅರ್ಥಗರ್ಭಿತವೂ ತತ್ವಜ್ಞಾನ ನಿರ್ಭರಿತವೂ ಆದ ಏಳು ಸೂಕ್ತಗಳೊಡನೆ ಮೇಲಾಡುವ ಒಂದು ಅಧ್ಯಾಯವನ್ನೋ ಸೂಕ್ತಗಳನ್ನೋ ಎಪ್ಪತ್ತರಷ್ಟಿರುವ ಕ್ರೈಸ್ತ ಧರ್ಮಗ್ರಂಥಗಳಿಂದ ತೆಗೆದು ತೋರಿಸುವ ಯಾವನಿಗೂ ತಾನು 500 ರೂಪಾಯಿಗಳನ್ನು ಬಹುಮಾನವಾಗಿ ಕೊಡಲು ತಯಾರಿರುವೆನೆಂದು 18ನೇ ಶತಮಾನದ ಕೊನೆಯಲ್ಲಿ ವಾಗ್ದತ್ತ ಮಸೀಹ್ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಆಹ್ವಾನಿಸಿದ್ದರು.

ಇದೇ ಆಹ್ವಾನವನ್ನು ಅಹ್ಮದಿಯಾ ಜಮಾಅತಿನ ಮೂರನೆಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್[ರಹ್] 1967ನೇ ಜುಲೈ 21ರಂದು ಡೆನ್ಮಾರ್ಕಿನ ರಾಜಧಾನಿಯಾದ ಕೋಪನ್ ಹೇಗನ್‌ನಲ್ಲಿ 50,000 ರೂಪಾಯಿಗಳ ಬಹುಮಾನದೊಂದಿಗೆ ಪುನರಾವರ್ತಿಸಿ ಅದಕ್ಕಾಗಿ ಕ್ರೈಸ್ತ ಧರ್ಮ ಪಂಡಿತರನ್ನು ಪ್ರತ್ಯೇಕ ಆಹ್ವಾನಿಸಿದ್ದರು. – ಅನುವಾದಕ

* "ಅಊಧು ಬಿಲ್ಲಾಹಿ ಮಿನಶ್ಶೈತಾನಿರ್ರಜೀಂ" ಎಂಬ ಪ್ರಾರ್ಥನೆ.

ಸಾಧನೆಯ ಮಾರ್ಗದಲ್ಲಿ ಶೈತಾನ್ ಮತ್ತು ಅದರ ಸಂತತಿಗಳು ಹಲವು ತರದ ಅಡ್ಡಿಗಳನ್ನೂ ಆತಂಕಗಳನ್ನೂ ತಂದೊಡ್ಡುವವು. ಆಗ ನೀನು ಅದರ ಅಡ್ಡಿ ಆತಂಕಗಳನ್ನು ಲೆಕ್ಕಿಸದೆ "ಖುದಾಕೆ ಫಝ್ಲ್ ಔರ್ ರಹಮ್ ಕೇ ಸಾಥ್" (ಅಲ್ಲಾಹನ ಅನುಗ್ರಹ ಮತ್ತು ಕರುಣೆಯೊಂದಿಗೆ) ಎಂಬ ವಾಕ್ಯವನ್ನುಚ್ಚರಿಸುತ್ತಾ ಮುನ್ನೇರುತ್ತಿರಬೇಕು. ಹಾಗೆ ಅಲ್ಲಾಹನು ನನ್ನೊಡನೆ ಆಜ್ಞಾಪಿಸಿದ ಆ ಮಾರ್ಗದಲ್ಲಿ ನಾನು ಚಲಿಸುತ್ತಿರುವಾಗ ಶೈತಾನ್ ಮತ್ತು ಅದರ ಸಂತತಿಗಳು ಹಲವು ರೀತಿಯಲ್ಲಿ ನನ್ನನ್ನು ಭಯಪಡಿಸಲು ಪ್ರಯತ್ನಿಸುತ್ತಿರುವುದಾಗಿ ಗೋಚರವಾಯಿತು. ಕೆಲವೊಮ್ಮೆ ಸಿಂಹಗಳಾಗಿಯೂ ಹುಲಿಗಳಾಗಿಯೂ ಎದುರು ಬಂದರೆ ಮತ್ತೆ ಕೆಲವೊಮ್ಮೆ ಅವು ಆನೆಗಳ ರೂಪದಲ್ಲಿ ಪ್ರತ್ಯಕ್ಷಪಟ್ಟವು. ಆ ಸಂದರ್ಭಗಳಲ್ಲೆಲ್ಲ ನಾನವುಗಳನ್ನು ಕಡೆಗಣಿಸಿ ದೇವಾಜ್ಞೆ ಪ್ರಕಾರ "ಖುದಾಕೆ ಫಝ್ಲ್ ಔರ್ ರಹಂ ಕೆ ಸಾಥ್" ಎಂದು ಘೋಷಿಸುತ್ತಾ ಮುನ್ನಡೆದೆನು. ನಾನು ಈ ವಾಕ್ಯವನ್ನು ಉಚ್ಚರಿಸಿದಾಗಲೆಲ್ಲ ಶೈತಾನ್ ಮತ್ತು ಅವನ ಸಂತತಿಗಳು ಓಡಿ ಮರೆಯಾಗುವುದನ್ನೂ ಮಾರ್ಗವು ಸುಗಮಗೊಳ್ಳುತ್ತಿರುವುದನ್ನೂ ಕಂಡೆನು. ಸ್ವಲ್ಪ ಕಾಲದ ನಂತರ ಅವನು ಇನ್ನೊಂದು ಹೊಸ ರೂಪದಲ್ಲಿ ಪ್ರತ್ಯಕ್ಷನಾದನು. ಆಗಲೂ ಇದೇ ಆಯುಧವೇ ನನಗೆ ವಿಜಯವನ್ನು ತಂದಿತು. ಹಾಗೆ ನಾನು ಗಮ್ಯಸ್ಥಾನವನ್ನು ತಲುಪಿದೆನು ಮತ್ತು ಶೈತಾನನ ಗುಂಪು ಪೂರ್ಣವಾದ ಸೋಲನ್ನನುಭವಿಸುತ್ತಾ ರಣರಂಗವನ್ನು ಬಿಟ್ಟು ಪಲಾಯನ ಮಾಡಿತು. ಈ ದಿವ್ಯದರ್ಶನದ ಆಧಾರದಿಂದ ನಾನು ನನ್ನ ಎಲ್ಲ ಲೇಖನಗಳ ಪ್ರಾರಂಭದಲ್ಲೂ "ಖುದಾಕೆ ಫಝ್ಲ್ ಔರ್ ರಹಂ ಕೆ ಸಾಥ್" ಎಂದು ಬರೆಯುತ್ತಿರುವೆನು. ಸಂಕ್ಷಿಪ್ತವಾಗಿ, ಅಹ್ಮದಿಯರಾದ ನಾವು "ಮಲಕು"ಗಳಲ್ಲಿ ವಿಶ್ವಾಸವುಳ್ಳವರೂ ಶೈತಾನನ ಇರುವಿಕೆಯನ್ನು ಅಂಗೀಕರಿಸುವವರೂ ಆಗಿರುವೆವು.

ಅಹ್ಮದಿಯರು "ಮುಅಜಿಝಾತ್"ನ್ನು (ಪವಾಡ, ದಿವ್ಯದೃಷ್ಟಾಂತ) ನಿರಾಕರಿಸುತ್ತಾರೆಂದೂ ಕೆಲವರು ಹೇಳುವುದಿದೆ. ಇದೂ ಸತ್ಯವಿರುದ್ಧವಾದ ಒಂದು ಆರೋಪವಾಗಿದೆ. ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಮುಅಜಿಝಾತ್‌ಗಳನ್ನು ಮಾತ್ರವಲ್ಲ, ಆ ಮಹಾಪುರುಷನ ನಿಜವಾದ ಅನುಯಾಯಿಗಳಿಗೂ ಮುಅಜಿಝಾತುಗಳಿರುವುವೆಂದು ನಾವು ಹೇಳುತ್ತೇವೆ.

ಮುಹಮ್ಮದ್ ಪೈಗಂಬರರ(ಸ) ಮುಅಜಿಝ್ಞಾತ್‌ಗಳಿಂದ ಪವಿತ್ರ ಖುರ್‌ಆನ್ ತುಂಬಿರುವುದು. ಅದನ್ನು ಯಾರಿಗೂ ನಿರಾಕರಿಸಲು ಸಾಧ್ಯವಿಲ್ಲ.

## ಮೋಕ್ಷದ ಕುರಿತು ಅಹ್ಮದಿಯರ ವಿಶ್ವಾಸ

ಅಹ್ಮದಿಯರಲ್ಲದ ಎಲ್ಲರೂ ನರಕವಾಸಿಗಳೆಂದು ಅಹ್ಮದಿಯರು ನಂಬುತ್ತಾರೆ ಎಂಬ ತಪ್ಪಭಿಪ್ರಾಯವನ್ನೂ ಕೆಲವರು ಹೊಂದಿರುವರು. ಇದು ಕೂಡ ಕೇವಲ ಪರಿಚಯಹೀನತೆ ಅಥವಾ ಶತ್ರುತ್ವದ ಪರಿಣಾಮ ಮಾತ್ರವಾಗಿದೆ. ಅಹ್ಮದಿಯರಲ್ಲದ ಎಲ್ಲರೂ ನರಕೀಯರೆಂದು ನಾವು ನಂಬುವುದೇ ಇಲ್ಲ. ನಮ್ಮ ವಿಶ್ವಾಸದ ಪ್ರಕಾರ ಒಬ್ಬ ವ್ಯಕ್ತಿಯು ಅಹ್ಮದಿಯಾಗಿದ್ದು ಕೂಡ ನರಕ ಶಿಕ್ಷೆಗೆ ಗುರಿಯಾಗಬಹುದು. ಅದೇ ರೀತಿ ಅಹ್ಮದಿಯಲ್ಲದ ಒಬ್ಬ ವ್ಯಕ್ತಿಯು ಸ್ವರ್ಗಕ್ಕೆ ಅರ್ಹನಾಗಲೂಬಹುದು. ಏಕೆಂದರೆ ಸ್ವರ್ಗವೆಂಬುದು ಕೇವಲ ನಾಲಗೆಯಿಂದ ಏನಾದರೂ ಹೇಳುವುದರ ಫಲವಾಗಿ ಲಭಿಸುವಂಥದ್ದಲ್ಲ. ಅನೇಕ ಕರ್ತವ್ಯಗಳ ನಿರ್ವಹಣೆಯಿಂದಾಗಿ ಮಾತ್ರವೇ ಸ್ವರ್ಗವು ಲಭ್ಯವಾಗುವುದು. ಅದೇ ರೀತಿಯಲ್ಲಿ ನರಕವೆಂಬುದು ಕೂಡ ನಾಲಗೆಯಿಂದ ಮಾತ್ರ ನಿಷೇಧಿಸುವುದರ ಫಲವಲ್ಲ. ನರಕ ಶಿಕ್ಷೆಗೆ ಈಡಾಗುವುದು ಹಲವು ಕಾರಣಗಳಿಂದಾಗಿವೆ. "ಹುಜ್ಜತ್" ಪೂರ್ತಿಯಾಗದ (ಸತ್ಯ ಧರ್ಮದ ಸರಿಯಾದ ಪರಿಚಯವಾಗದ) ಯಾರೊಬ್ಬರೂ ನರಕಕ್ಕೆ ಹೋಗಲಾರರು – ಅವರು ಎಷ್ಟು ದೊಡ್ಡ ಸತ್ಯದ ನಿಷೇಧಿಯಾದರೂ ಸರಿ. ಈ ವಿಷಯದ ಕುರಿತು ರಸೂಲ್ ಕರೀಂ(ಸ) ಈ ರೀತಿ ಹೇಳಿರುವರು: ಬಾಲ್ಯ ಪ್ರಾಯದಲ್ಲಿ ಮೃತರಾಗುವವರೂ ಪರ್ವತ ಶಿಖರಗಳಲ್ಲಿ ಜೀವಿಸುವವರೂ ದಟ್ಟಡವಿಗಳಲ್ಲಿ ವಾಸಿಸುವವರೂ ಬುದ್ಧಿಮಂದವಾದ ವೃದ್ಧ ಜನರೂ ಬುದ್ಧಿ ಶೂನ್ಯರಾದ ಭ್ರಾಂತರೂ ಶಿಕ್ಷಿಸಲ್ಪಡಲಾರರು. ಆದರೆ, ಪರಲೋಕದಲ್ಲಿ ಅಲ್ಲಾಹನು ಅವರಿಗಾಗಿ ಒಬ್ಬ ಪ್ರವಾದಿಯನ್ನು ನಿಯೋಜಿಸಿ, ಸತ್ಯಾಸತ್ಯಗಳನ್ನು ತಿಳಿದುಕೊಳ್ಳುವ ಏರ್ಪಾಡನ್ನುಂಟುಮಾಡುವನು. ಹಾಗೆ ಸತ್ಯವನ್ನು ಸರಿಯಾಗಿ ಮನಗಂಡ ನಂತರ (ಅತ್‌ಮಾಮೆ ಹುಜ್ಜತ್) ಸತ್ಯವನ್ನು ನಿಷೇಧಿಸುವವರು ನರಕಕ್ಕೂ ಹಿದಾಯತ್ (ಸನ್ಮಾರ್ಗ) ಸ್ವೀಕರಿಸಿದವರು ಸ್ವರ್ಗಕ್ಕೂ ಕಳುಹಿಸಲ್ಪಡುವರು. ಒಟ್ಟಿನಲ್ಲಿ, ಅಹ್ಮದಿಯ್ಯತ್ ಸ್ವೀಕರಿಸದವರೆಲ್ಲರೂ ನರಕೀಯರೆಂದು ಅಹ್ಮದಿಯರು ಭಾವಿಸುತ್ತಾರೆಂಬ ಇವರ ಊಹೆಯು

ತೀರ ಅಸಂಬದ್ಧವಾಗಿದೆ. ಮೋಕ್ಷದ ಕುರಿತಾದ ನಮ್ಮ ವಿಶ್ವಾಸವು ಈ ರೀತಿಯಿದೆ: ಯಾರು ಸತ್ಯವನ್ನು ಸ್ವೀಕರಿಸಬೇಕಾದೀತೆಂಬ ಭಯದಿಂದ ಸತ್ಯದ ಕಡೆ ಅಲಕ್ಷ್ಯರಾಗಿರುವರೋ, ಅಥವಾ ಸತ್ಯದಿಂದ ದೂರವಾಗಿರಲು ಪ್ರಯತ್ನ ಪಡುತ್ತಿರುವರೋ ಮತ್ತು ಹುಜ್ಜತ್ ಪೂರ್ತಿಯಾಗಿದ್ದೂ ಸತ್ಯವನ್ನು ಸ್ವೀಕರಿಸದೆ ಇರುವರೋ ಅಂಥವರು ದೇವಸನ್ನಿಧಿಯಲ್ಲಿ ನರಕಶಿಕ್ಷೆಗೆ ಅರ್ಹರಾಗುವರು. ಆದರೂ ಇಂಥವರನ್ನು ಕೂಡ ಅಲ್ಲಾಹನು ಇಚ್ಛಿಸಿದರೆ ಕ್ಷಮಿಸಬಲ್ಲನು. ಕ್ಷಮಾಶೀಲನಾದ ಅವನ ಕರುಣೆಯ ಹಂಚುವಿಕೆಯು ನಮ್ಮ ಕೈವಶವಿಲ್ಲ. ಒಬ್ಬ ಸೇವಕನಿಗೆ ತನ್ನ ಯಜಮಾನನ ಔದಾರ್ಯವನ್ನು ತಡೆಯಲು ಎಂದಿಗೂ ಸಾಧ್ಯವಿಲ್ಲ. ಅಲ್ಲಾಹನು ನಮ್ಮ ಯಜಮಾನನೂ ಬಾದಶಹನೂ ಆಗಿರುವನು. ಅವನು ನಮ್ಮ ಕರ್ತನೂ ರಕ್ಷಕನೂ ಆಗಿರುವನು. ಅವನು ತನ್ನ ಅಪಾರವಾದ ಬುದ್ಧಿವೈಭವದಿಂದಲೂ ಅಪರಿಮಿತವಾದ ಕರುಣೆಯಿಂದಲೂ – ಯಾವ ವಿಧದಲ್ಲೂ ಕ್ಷಮಿಸಲ್ಪಡುವ ಅರ್ಹತೆ ಇಲ್ಲದವನಾಗಿ ಕಾಣಲ್ಪಡುವ ವ್ಯಕ್ತಿಯನ್ನು ಕೂಡ – ಕ್ಷಮಿಸುವನೆಂದಾದರೆ ಅವನ ಕೈಗಳನ್ನು ತಡೆಯಲು ನಾವು ಯಾರು? ಅನುಗ್ರಹ ನೀಡುವುದರಿಂದ ಅವನನ್ನು ತಡೆದು ನಿಲ್ಲಿಸಲು ನಾವ್ಯಾರು?

"ನಜಾತಿನ" (ಮೋಕ್ಷದ) ಕುರಿತಾದ ಅಹ್ಮದಿಯರ ವಿಶ್ವಾಸವು ಬಹಳ ವಿಶಾಲವಾಗಿದೆ. ಇದನ್ನು ಮಾತ್ರವೇ ಕಾರಣವಾಗಿರಿಸಿಕೊಂಡು ಹಲವು ಮೌಲವಿಗಳು ನಮಗೆ ಕುಫ್ರ್ ಫತ್ವ (ಧರ್ಮಭ್ರಷ್ಟತೆ) ವಿಧಿಸಿರುವರು. ನಮ್ಮ ವಿಶ್ವಾಸವು, ಯಾವ ವ್ಯಕ್ತಿಗೂ – ಅವನು ವಿಶ್ವಾಸಿಯಾಗಿರಲಿ ಅವಿಶ್ವಾಸಿಯಾಗಿರಲಿ– ನರಕ ಶಿಕ್ಷೆಯು ಶಾಶ್ವತವಲ್ಲವೆಂಬುದಾಗಿದೆ. ಏಕೆಂದರೆ, ಪವಿತ್ರ ಖುರ್ಆನಿನಲ್ಲಿ ಅಲ್ಲಾಹನು ಈ ರೀತಿ ಹೇಳುತ್ತಾನೆ:

وَرَحْمَتِىْ وَسِعَتْ كُلَّ شَىْءٍ

"**ರಹ್ಮತೀ ವಸಿಅತ್ ಕುಲ್ಲ ಶೈಇನ್**" ಅಂದರೆ ನನ್ನ ಕಾರುಣ್ಯವು ಸರ್ವ ವಸ್ತುವನ್ನೂ ಆವರಿಸುವಂಥದ್ದಾಗಿದೆ. (7:157)

فَاُمُّهٗ هَاوِيَةٌ

"**ಫ ಉಮ್ಮುಹು ಹಾವಿಯ**" ಅಂದರೆ ತಾಯಿಗೂ ಮಗುವಿಗೂ ತಮ್ಮೊಳಗಿರುವ ಸಂಬಂಧವೇ ಅವಿಶ್ವಾಸಿಗೂ ನರಕಕ್ಕೂ ತಮ್ಮೊಳಗಿರುವುದು. (101:10) ಮತ್ತೂ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಈ ರೀತಿ ಹೇಳುತ್ತಾನೆ:

مَا خَلَقْتُ الْجِنَّ وَالْاِنْسَ اِلَّا لِيَعْبُدُوْنِ

"**ಮಾ ಖಲಖ್‌ತುಲ್ ಜಿನ್ನ ವಲ್ ಇನ್‌ಸ ಇಲ್ಲಾ ಲಿಯಅ್‌ಬುದೂನ್**" ಅಂದರೆ ಎಲ್ಲ "ಜಿನ್ನ್" ಮತ್ತು "ಇನ್‌ಸ್" ಗಳನ್ನೂ ನನ್ನ ಆರಾಧಕರಾಗಿರಲೆಂದಲ್ಲದೆ ನಾನು ಸೃಷ್ಟಿಸಲಿಲ್ಲ. (51:57)

ಇವುಗಳೂ ಇನ್ನೂ ಇಂತಹ ಅನೇಕ ವಚನಗಳೂ ಪವಿತ್ರ ಖುರ್‌ಆನಿನಲ್ಲಿರುವಾಗ, ಅಲ್ಲಾಹನ ಕರುಣೆಯು ಕೊನೆಗೂ ನರಕವಾಸಿಗಳನ್ನು ಆವರಿಸಲಾರದೆಂದೂ ಅವರು ನರಕದ ಉದರದಿಂದ ಎಂದೂ ಹೊರ ಬರಲಾರರೆಂದೂ ತನ್ನ ಆರಾಧಕರಾಗಿರಲೆಂದು ದೇವನಿಂದ ಸೃಷ್ಟಿಸಲ್ಪಟ್ಟ ಮನುಷ್ಯರು ಎಂದೆಂದೂ ಶೈತಾನನ ಆರಾಧಕರೇ ಆಗುವರೆಂದೂ "**ಫದ್‌ಖುಲೀ ಫೀ ಇಬಾಲೀ ವದ್‌ಖುಲೀ ಜನ್ನತೀ**" – ನನ್ನ ದಾಸರೊಂದಿಗೆ ಸೇರಿಕೊಂಡು ನನ್ನ ಸ್ವರ್ಗದಲ್ಲಿ ಪ್ರವೇಶಿಸಿರಿ (89:30,31) – ಎಂಬ ಪ್ರೇಮವಾಕ್ಯದಿಂದ ಅಲ್ಲಾಹನು ಅವರನ್ನು ಸಂಬೋಧಿಸಲಾರನೆಂದೂ ಹೇಳಲು ನಮಗೆ ಹೇಗೆ ಸಾಧ್ಯ?

## ಹದೀಸುಗಳಲ್ಲಿ ಅಹ್ಮದಿಯರಿಗಿರುವ ವಿಶ್ವಾಸ

ಅಹ್ಮದಿಯರು ಹದೀಸುಗಳನ್ನು ಸ್ವೀಕರಿಸುವುದಿಲ್ಲವೆಂದು ಇವರಲ್ಲಿ ಕೆಲವರು ಆಕ್ಷೇಪಿಸುತ್ತಾರೆ. ಇನ್ನು ಕೆಲವರು, ಅವರು ಫುಖಹಾಗಳ (ಕರ್ಮಶಾಸ್ತ್ರ ಪಂಡಿತರ) ಅಭಿಪ್ರಾಯವನ್ನು ಅಂಗೀಕರಿಸುವುದಿಲ್ಲವೆಂದೂ ಆಪಾದಿಸುತ್ತಾರೆ. ಇವೆರಡೂ ತಪ್ಪಾಗಿರುವುದು. ಅಹ್ಮದಿಯರು ತಖ್‌ಲೀದ್ ಕಾರ್ಯಗಳಲ್ಲಿ ಒಂದು ಮಧ್ಯಮ ಮಾರ್ಗವನ್ನು ಸ್ವೀಕರಿಸುತ್ತಾರೆ. ಒಂದು ವಿಷಯವು ಮುಹಮ್ಮದ್ ರಸೂಲುಲ್ಲಾಹರ(ಸ) ವಚನದಿಂದ ರುಜುವಾತಾದ ಮೇಲೆ ಆ ವಿಷಯ ಕುರಿತು ಯಾವ ಮನುಷ್ಯನ ಅಭಿಪ್ರಾಯವನ್ನೂ ಸ್ವೀಕರಿಸಬಾರದೆಂದೂ ಹಾಗೆ ಮಾಡಿದ್ದಲ್ಲಿ ಅದು ಆ ಪುಣ್ಯ ಪ್ರವಾದಿಯವರನ್ನು ಅಪಮಾನಿಸಿದಕ್ಕೆ

ತುಲ್ಯವೆಂದೂ ಅಹ್ಮದಿಯರು ನಂಬುತ್ತಾರೆ. ಯಜಮಾನನ ಹೇಳಿಕೆಗೆ ವಿರುದ್ಧವಾದ ದಾಸರ ಯಾವ ಹೇಳಿಕೆಯೂ ಸ್ವೀಕಾರಯೋಗ್ಯವಾಗಿರಲಾರದು. ಗುರುವರ್ಯರು ಕಲಿಸುತ್ತಿರುವುದಕ್ಕೆ ವಿರುದ್ಧವಾಗಿರುವ ಶಿಷ್ಯನ ಯಾವ ಪಾಠವೂ ಶ್ರದ್ಧಾರ್ಹವಾಗಿರದು. ಫಿಖ್‌ಹ್‌ನ ಪಂಡಿತರು ಎಷ್ಟು ದೊಡ್ಡ ಜ್ಞಾನಿಗಳಾದರೂ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶಿಷ್ಯರೂ ದಾಸರೂ ಮಾತ್ರವೇ ಆಗಿದ್ದಾರೆ. ಅವರ ಆ ಸ್ಥಾನಮಾನಗಳೂ ಯೋಗ್ಯತೆಗಳೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಸರಣೆಯಿಂದಲೂ ದಾಸ್ಯತ್ವ ಸ್ವೀಕಾರದಿಂದಲೂ ಲಭಿಸಿದುದಾಗಿದೆ. ಅಂತೂ ರಸೂಲ್ ಕರೀಮ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಹೇಳಲ್ಪಟ್ಟದ್ದೆಂದು ರುಜುವಾತಾದ ಒಂದು ವಿಷಯವು – ಪವಿತ್ರ ಖುರ್‌ಆನಿಗೆ ಅನುಸಾರವಾಗಿರುವ ಆ ಸಂಗತಿ – ಅಂತಿಮ ತೀರ್ಮಾನವೂ ಅಖಂಡ ವಿಧಿಯೂ ಆಗಿದೆ. ಆ ವಿಧಿಯನ್ನು ರದ್ದುಪಡಿಸಲು ಅಥವಾ ಅದರ ವಿರುದ್ಧ ಉಸಿರೆತ್ತಲು ಯಾವ ವ್ಯಕ್ತಿಯೂ ಅರ್ಹನಾಗಿರುವುದಿಲ್ಲ.

ಆದರೆ, ಹದೀಸಿನ ನಿವೇದಕರೂ ಮನುಷ್ಯರಾಗಿರುವರು. ಅವರಲ್ಲಿ ಒಳ್ಳೆಯವರಿದ್ದಾರೆ, ಕೆಟ್ಟವರಿದ್ದಾರೆ. ಉತ್ತಮ ಗ್ರಹಣ ಶಕ್ತಿಯುಳ್ಳವರಿದ್ದಾರೆ, ಗ್ರಹಣ ಶಕ್ತಿ ಕಡಿಮೆಯಿರುವವರೂ ಇದ್ದಾರೆ. ಉತ್ತಮ ಜ್ಞಾಪಕ ಶಕ್ತಿಯುಳ್ಳವರಿದ್ದಾರೆ, ಅದಿಲ್ಲದವರೂ ಇದ್ದಾರೆ. ಇವರೆಲ್ಲರೂ ನಿವೇದಿಸಿದ ಎಲ್ಲ ಹದೀಸುಗಳೂ ಒಂದೇ ಪ್ರಕಾರ ಸ್ವೀಕಾರಾರ್ಹವೂ ಖಚಿತವೂ ಆಗಿರಲಾರದು. ಅವುಗಳಲ್ಲಿ ಕೆಲವು ಖಚಿತವೂ ಕೆಲವು ಸಂಶಯಾತ್ಮಕವೂ ಮತ್ತೆ ಕೆಲವು ನಿರ್ಮಿತವೂ ಆಗಿರುವುವೆಂದು ಹದೀಸಿನ ಪಂಡಿತರೇ ಒಪ್ಪಿರುವರು. ಆದುದರಿಂದ ಪವಿತ್ರ ಖುರ್‌ಆನಿನ ಅಖಂಡವೂ ಅಸಂದಿಗ್ಧವೂ ಆದ ನಿರ್ದೇಶನಗಳಿಗೆ ವಿರುದ್ಧವಾಗಿ ಕಾಣಲ್ಪಡುವ ಯಾವ ಹದೀಸೂ ಸ್ವೀಕಾರ ಯೋಗ್ಯವಾಗಿರುವುದಿಲ್ಲ. ಅಂತೆಯೇ, ಯಾವುದಾದರೂ ವಿಷಯವು ಪವಿತ್ರ ಖುರ್‌ಆನಿನಿಂದ ವ್ಯಕ್ತವಾಗದೆ, ವಿಶ್ವಾಸಾರ್ಹ ಹದೀಸುಗಳಿಂದಲೂ ರುಜುವಾತಾಗದೆ ಅಥವಾ ಆ ವಿಷಯದ ಕುರಿತಾದ ಹದೀಸಿನ ಹೇಳಿಕೆಗಳು ವಿವಿಧಾರ್ಥ ಉಳ್ಳದ್ದಾಗಿ ಕಾಣಲ್ಪಡುವ ಸಂದರ್ಭಗಳಲ್ಲಿ, ತಮ್ಮ ಇಡೀ ಜೀವನವನ್ನು ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಅಧ್ಯಯನ ನಡೆಸಲು

ವ್ಯಯಿಸಿದ ಆ ಫುಖಹಾಗಳು ತದ್‌ವಿಷಯದಲ್ಲಿ ಆಲೋಚಿಸಿ ಒಂದು ತೀರ್ಮಾನವನ್ನೀಯಲು ಅರ್ಹತೆಯುಳ್ಳವರಾಗಿರುವರು. ಪವಿತ್ರ ಖುರ್‌ಆನಿನ ಮತ್ತು ಹದೀಸ್‌ಗಳ ಅಧ್ಯಯನದಲ್ಲಿ ಎಳ್ಳಷ್ಟು ಸಮಯ ವಿನಿಯಮ ಮಾಡದ ಅಥವಾ ಅದರ ಅಧ್ಯಯನ ನಡೆಸಲು ಸಾಮರ್ಥ್ಯವಿಲ್ಲದ ಯಾವನೇ ಸಾಮಾನ್ಯ ಮುಸ್ಲಿಮನಿಗೂ "ನಾನೂ ಒಬ್ಬ ಮುಸ್ಲಿಮನಾಗಿರುವಾಗ ಇಮಾಂ ಹನಫೀ, ಇಮಾಂ ಅಹ್ಮದ್, ಇಮಾಂ ಶಾಫೀ, ಇಮಾಂ ಮಾಲಿಕ್ ಮತ್ತು ಇನ್ನಿತರ ಇಮಾಮರ ಹೇಳಿಕೆಗಳಿಗೆ ನಾನು ಹೇಳುವುದಕ್ಕಿಂತಲೂ ಬೆಲೆ ಕಲ್ಪಿಸುವುದು ಯಾಕೆ" ಎಂದು ಕೇಳುವ ಅಧಿಕಾರವಿರುವುದಿಲ್ಲ. ಒಂದು ರೋಗದ ಕುರಿತು ಒಬ್ಬ ಡಾಕ್ಟರನ ತೀರ್ಮಾನಕ್ಕೆ ಸಾಮಾನ್ಯನ ತೀರ್ಮಾನಕ್ಕಿಂತಲೂ ಪ್ರಾಧಾನ್ಯತೆ ನೀಡಬೇಕಾಗಿದೆ. ಕಾನೂನು ಪರ ವಿಷಯವಾಗಿದ್ದಲ್ಲಿ ಒಬ್ಬ ಸಾಮಾನ್ಯನ ಅಭಿಪ್ರಾಯಕ್ಕಿಂತಲೂ ಒಬ್ಬ ವಕೀಲನ ಅಭಿಪ್ರಾಯಕ್ಕೆ ಪ್ರಾಮುಖ್ಯತೆ ಕೊಡಲ್ಪಡುವುದು. ಹಾಗಿರುವಾಗ ಆ ಇಮಾಮರಿಗೇಕೆ ಪ್ರಾಧಾನ್ಯತೆ ನೀಡಬಾರದು? ಅವರಾದರೆ ತಮ್ಮ ಆಯುಷ್ಕಾಲವನ್ನೇ ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗಳ ತತ್ವಗ್ರಹಣದಲ್ಲೂ ಚಿಂತನೆಗಳಲ್ಲೂ ವಿನಿಯೋಗಿಸಿದ್ದಾರೆ. ಅವರ ಗ್ರಹಣ ಶಕ್ತಿಯು ಇತರ ಲಕ್ಷಾಂತರ ಮನುಷ್ಯರದಕ್ಕಿಂತ ತೀಕ್ಷ್ಣವೂ ಆಗಿರುವುದು. ಅವರಲ್ಲಿ ಹಲವರ ಭಕ್ತಿಯನ್ನೂ ಪರಿಶುದ್ದತೆಯನ್ನೂ ದೇವನು ತನ್ನ ಅನುಗ್ರಹದಿಂದ ವ್ಯಕ್ತಪಡಿಸಿರುವನು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಅಹ್ಮದಿಯರು ಅಹಲೆ ಹದೀಸ್ ಸಂಘದವರ ಅಭಿಪ್ರಾಯವನ್ನು ಪೂರ್ಣವಾಗಿ ಅನುಮೋದಿಸುವುದಿಲ್ಲ. ಅಂತೆಯೇ ಅಹಲುಲ್ ಮದಾಹಿಬ್ ಸಂಘದವರ (ನಾಲ್ವರು ಇಮಾಮರನ್ನು ಅನುಸರಿಸುವವರ) ಅಭಿಪ್ರಾಯಗಳನ್ನೂ ಪೂರ್ಣವಾಗಿ ಬೆಂಬಲಿಸುವುದಿಲ್ಲ. ಈ ವಿಷಯದಲ್ಲಿ ಅಹ್ಮದಿಯರ ವಿಶ್ವಾಸವು ಅಬೂಹನೀಫಾ ರಹ್ಮಮತುಲ್ಲಾಹ್‌ರ ವಿಶ್ವಾಸದ ಹಾಗೆ ಆಗಿರುವುದು. ಎಂದರೆ, ಮೊದಲ ಪ್ರಮಾಣವು ಪವಿತ್ರ ಖುರ್‌ಆನ್, ಎರಡನೇ ಪ್ರಮಾಣ ಸಹೀಹಾದ ಹದೀಸ್‌ಗಳೂ ಕೊನೆಯದಾಗಿ ಆ ವಿಷಯದ ಕುರಿತಾದ ಧಾರ್ಮಿಕ ಚಿಂತಕರ ಅಭಿಪ್ರಾಯಗಳೂ ಆಗಿವೆ. ಈ ಕಾರಣದಿಂದಲೇ ಅಹ್ಮದಿಯರು ಕೆಲವೊಮ್ಮೆ ತಮ್ಮನ್ನು ಹನಫಿಗಳೆಂದು ಕರೆದುಕೊಳ್ಳುತ್ತಾರೆ. ಇಮಾಂ ಅಬೂ ಹನೀಫರು[ರ] ಧರ್ಮದ ಆಧಾರಗಳಾಗಿ

ಸ್ವೀಕರಿಸಲು ನಿರ್ದೇಶಿಸಿರುವ ಈ ಅಭಿಪ್ರಾಯಗಳೊಂದಿಗೆ ನಾವು ಸಂಪೂರ್ಣ ಸಹಮತವುಳ್ಳವರಾಗಿದ್ದೇವೆ. ಕೆಲವು ಸಂದರ್ಭಗಳಲ್ಲಿ ತಾವು ಅಹಲೆ ಹದೀಸ್ ವಿಶ್ವಾಸಿಗಳೆಂದು ಅಹ್ಮದಿಯರು ಹೇಳುವರು. ಕಾರಣ ರಸೂಲ್ ಕರೀಮ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರಿಂದ ನುಡಿಯಲ್ಪಟ್ಟದ್ದೆಂದು ರುಜುವಾತಾದ ಒಂದು ವಚನಕ್ಕೆ ಮಾನವ ಕುಲವಿಡೀ ಒಟ್ಟಾಗಿ ಹೇಳುವ ಅಭಿಪ್ರಾಯಕ್ಕಿಂತಲೂ ಎಲ್ಲ ಇಮಾಮುಗಳೂ ಒಂದಾಗಿ ಐಕ್ಯಕಂಠವಾಗಿ ಹೇಳಿದ ತೀರ್ಮಾನಕ್ಕಿಂತಲೂ ಹೆಚ್ಚಿನ ಪ್ರಾಧಾನ್ಯತೆಯನ್ನು ಅವರು ಕಲ್ಪಿಸುವರು.

## ತಖ್‌ದೀರ್‌ನ ಕುರಿತು ಅಹ್ಮದಿಯರು ವಿಶ್ವಾಸ

ಅಹ್ಮದಿಯರು ತಖ್‌ದೀರ್ (ದೇವವಿಧಿ)ಯನ್ನು ನಿಷೇಧಿಸುವವರೆಂದು ಇವರಲ್ಲಿ ಕೆಲವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಅಹ್ಮದಿಯರು ಎಂದೂ ತಖ್‌ದೀರನ್ನು ನಿಷೇಧಿಸುವವರಲ್ಲ. ದೇವ ವಿಧಿಯೆಂಬುದು ಈ ಲೋಕದಲ್ಲಿ ಪ್ರವರ್ತಿಸುತ್ತಿದೆಯೆಂದೂ ಅದು ಎಂದೆಂದೂ ಪ್ರವರ್ತನೆಯಲ್ಲೇ ಇರುವುದೆಂದೂ ಆ ವಿಧಿಯನ್ನು ಬದಲಾಯಿಸಲು ಯಾರಿಂದಲೂ ಸಾಧ್ಯವಿಲ್ಲವೆಂದೂ ನಾವು ದೃಢವಾಗಿ ನಂಬುತ್ತೇವೆ. ಆದರೆ, ಕಳ್ಳನು ಕದಿಯುವುದನ್ನೂ ವಂಚಕನು ವಂಚಿಸುವುದನ್ನೂ, ಕೊಲೆಪಾತಕಿ ಕೊಲೆಗೈಯುವುದನ್ನೂ ವ್ಯಭಿಚಾರಿಯು ವ್ಯಭಿಚರಿಸುವುದನ್ನೂ ಎಲ್ಲ ದೇವವಿಧಿಯೆಂದು ಹೇಳುತ್ತಾ ತನ್ನ ಮುಖದ ಮಸಿಯನ್ನು ಅಲ್ಲಾಹನ ಪವಿತ್ರ ಮುಖಕ್ಕೆ ಬಳಿಯುವುದನ್ನು ಮಾತ್ರವೇ ನಾವು ವಿರೋಧಿಸುತ್ತೇವೆ. ನಮ್ಮ ವಿಶ್ವಾಸದ ಪ್ರಕಾರ ಈ ಲೋಕದಲ್ಲಿ ಅಲ್ಲಾಹನು ತಖ್‌ದೀರ್ (ವಿಧಿ) ಎಂದೂ ತದ್‌ಬೀರ್ (ಯತ್ನ) ಎಂದೂ ಎರಡು ಸಮಾನಾಂತರ ಕಾಲುವೆಗಳನ್ನು ಒಂದೇ ಸಮಯದಲ್ಲಿ ಪ್ರವಹಿಸಿರುವನು. "**ಬೈನಹುಮಾ ಬರ್‌ಝುಖುನ್ ಲಾ ಯಬ್‌ಘಿಯಾನ್**"– ಒಂದು ಇನ್ನೊಂದನ್ನು ಅತಿಕ್ರಮಿಸದಿರಲೆಂದು ಅವರೆಡರ ಮಧ್ಯದಲ್ಲಿ ಒಂದು ತಡೆಯಿರುವುದು (55:21) ಎಂದು ಪವಿತ್ರ ಖುರ್‌ಆನ್ ಹೇಳುವಂತೆ ಅವೆರಡರ ಮಧ್ಯದಲ್ಲಿಯೂ ಒಂದು ಬಲವಾದ ಭಿತ್ತಿಯಿರುವುದರಿಂದ ಅವು ಒಂದನ್ನೊಂದು ಸೇರಿಕೊಳ್ಳುವುದಿಲ್ಲ. ಅವೆರಡರ ಪ್ರವರ್ತನ ರಂಗಗಳೂ ಬೇರೆ ಬೇರೆಯಾಗಿವೆ. ಯಾವೆಲ್ಲ ಕಾರ್ಯಗಳಿಗೆ ಅಲ್ಲಾಹನು ತನ್ನ ವಿಧಿಯ

ಪ್ರವರ್ತನೆಯನ್ನು ಆವಶ್ಯವೆಂದು ಇಟ್ಟಿರುವನೋ, ಆ ಕಾರ್ಯಗಳಲ್ಲೆಲ್ಲ ಯತ್ನವು ನಿಷ್ಫಲವಾಗಿದೆ. ಯಾವುದೆಲ್ಲ ಕಾರ್ಯಗಳಿಗೆ ಅಲ್ಲಾಹನು ಯತ್ನದ ಬಾಗಿಲನ್ನು ತೆರೆದಿಟ್ಟಿರುವನೋ ಆ ಕಾರ್ಯಗಳಲ್ಲೆಲ್ಲ ವಿಧಿಯ ಮೇಲೆ ಆಶೆಯರ್ಪಿಸಿಕೊಂಡು ಕಾರ್ಯ ವಿಮುಖನಾಗುವವನು ತನ್ನ ಭವಿಷ್ಯವನ್ನು ತಾನೇ ಹಾಳುಗೆಡಹುವವನು. ಹಾಗೆ ಮನುಷ್ಯನು ತನ್ನ ದುಷ್ಕೃತ್ಯಗಳನ್ನೆಲ್ಲ ವಿಧಿಯ ಮರೆಯಲ್ಲಿ ಅಡಗಿಸಲು ಯತ್ನಿಸುತ್ತಾ ತನ್ನ ಆಲಸ್ಯದ ಫಲವನ್ನೂ ಅಶ್ರದ್ಧೆಯ ಪರಿಣಾಮಗಳನ್ನೂ ನ್ಯಾಯೀಕರಿಸಲು ವಿಧಿಯೆಂಬ ಶಬ್ದವನ್ನು ದುರುಪಯೋಗಪಡಿಸುತ್ತಿರುವುದನ್ನೂ ಅದೇ ರೀತಿ, ಅಲ್ಲಾಹನು ಪ್ರಯತ್ನದ ಮಾರ್ಗವನ್ನು ತೆರೆದಿಟ್ಟಿರುವಲ್ಲೆಲ್ಲ ವಿಧಿಯನ್ನು ಆಶ್ರಯಿಸುತ್ತಾ ಕಾರ್ಯ ವಿಮುಖನಾಗುವುದನ್ನೂ ನಾವು ಪ್ರಬಲವಾಗಿ ವಿರೋಧಿಸುತ್ತೇವೆ. ಯಾಕೆಂದರೆ ಇದರ ಪರಿಣಾಮವು ಯಾವಾಗಲೂ ವಿಪತ್ಕಾರಕವೇ ಆಗಿರುವುದು. ಮುಸ್ಲಿಮರು ದೇವ ವಿಧಿಯನ್ನು ಪ್ರತೀಕ್ಷಿಸುತ್ತಾ, ಸಾಮೂಹಿಕವಾಗಿ ಅತ್ಯಾವಶ್ಯಕವಾದ ಕಾರ್ಯಗಳನ್ನೆಲ್ಲ ಉಪೇಕ್ಷಿಸಿ, ವ್ಯರ್ಥವಾಗಿ ಕಾಲಹರಣ ಮಾಡಿದುದರ ಫಲವಾಗಿ ಅವರಿಗೆ ಧಾರ್ಮಿಕವೂ ಲೌಕಿಕವೂ ಆದ ಅಧಃಪತನವು ಸಂಭವಿಸಿತು. ಯಾವ ಕಾರ್ಯಗಳಲ್ಲೆಲ್ಲ ಅಲ್ಲಾಹನು ಪ್ರಯತ್ನದ ಬಾಗಿಲನ್ನು ತೆರೆದಿಟ್ಟಿರುವನೋ, ಆ ಕಾರ್ಯಗಳಲ್ಲೆಲ್ಲ ವಿಧಿಯನ್ನು ಅವಲಂಬಿಸದೆ ಕರ್ತವ್ಯ ನಿರ್ವಹಣೆಯಲ್ಲಿ ತೊಡಗಿ ಕಾರ್ಯತತ್ಪರರಾಗಿರುತ್ತಿದ್ದರೆ ಅವರಿಗೆ ಇಷ್ಟೊಂದು ಅಧಃಪತನವೂ ಇಂತಹ ಶೋಚ್ಯಾವಸ್ಥೆಯೂ ಉಂಟಾಗುತ್ತಿರಲಿಲ್ಲ.

## ಜಿಹಾದಿನ ಕುರಿತು ಅಹ್ಮದಿಯರ ವಿಶ್ವಾಸ

ಅಹ್ಮದಿಯರ ಕುರಿತು ಇನ್ನೊಂದು ತಪ್ಪಭಿಪ್ರಾಯವು ಅವರು ಜಿಹಾದನ್ನು ನಿಷೇಧಿಸುತ್ತಾರೆಂಬುದಾಗಿದೆ. ಇದೂ ಕೇವಲ ತಪ್ಪಾಗಿರುವುದು. ಅಹ್ಮದಿಯರು ಜಿಹಾದನ್ನು ನಿಷೇಧಿಸುವುದಿಲ್ಲ. ನಮ್ಮ ವಿಶ್ವಾಸ ಪ್ರಕಾರ ಯುದ್ಧಗಳು "ಜಿಹಾದ್ ಯುದ್ಧ"ವೆಂದೂ "ಸಾಮಾನ್ಯ ಯುದ್ಧ"ವೆಂದೂ ಎರಡು ರೀತಿಯಿದೆ. ಖಡ್ಗಬಲದಿಂದ ಧರ್ಮವನ್ನು ನಾಶಪಡಿಸಲಿಕ್ಕೂ ಕಠಾರಿಯ ಮೊನೆಯನ್ನು ತೋರಿಸಿ ವಿಶ್ವಾಸವನ್ನು ಬದಲಿಸಲಿಕ್ಕೂ ಶ್ರಮಿಸುವ ಶತ್ರುಗಳೊಡನೆ, ತಮ್ಮ ಧರ್ಮವನ್ನು ರಕ್ಷಿಸಿಕೊಳ್ಳಲಿಕ್ಕಾಗಿ ಮಾತ್ರ ಮಾಡುವ ಯುದ್ಧವು "ಜಿಹಾದ್

ಯುದ್ಧ"ವಾಗಿದೆ. ಅಂತಹ ಪರಿಸ್ಥಿತಿಯನ್ನು ಎದುರಿಸುವ ಸಂದರ್ಭಗಳಲ್ಲಿ ಮಾತ್ರವೇ ಮುಸ್ಲಿಮರಿಗೆ ಯುದ್ಧವೆಂಬ "ಜಿಹಾದ್" ಅನಿವಾರ್ಯವಾಗುವುದು. ಆ ಕಾಲದ ಇಮಾಮಿನಿಂದಲೇ ಜಿಹಾದ್ ಘೋಷಿಸಲ್ಪಡಬೇಕೆಂಬುದು ಇದರ ಒಂದು ನಿಬಂಧನೆಯಾಗಿದೆ. ಹಾಗಿದ್ದಲ್ಲಿ ಮಾತ್ರವೇ ಮುಸ್ಲಿಮರಲ್ಲಿ ಯಾರೆಲ್ಲ ಯುದ್ಧ ಮಾಡಬೇಕೆಂದೂ ಯಾರೆಲ್ಲ ತಮ್ಮ ಸರದಿಯನ್ನು ಕಾಯುತ್ತಿರಬೇಕೆಂದೂ ಅವರಿಗೆ ತಿಳಿಯುವುದು. ಹಾಗಿಲ್ಲದಿದ್ದಲ್ಲಿ, ಜಿಹಾದಿನ ಸಂದರ್ಭ ಉಂಟಾಗಿಯೂ ಸಹ ಅದರಲ್ಲಿ ಭಾಗವಹಿಸದ ಪ್ರತಿಯೊಬ್ಬ ಮುಸ್ಲಿಮನೂ ಅಪರಾಧಿಯಾಗುತ್ತಾನೆ. ಮುಸ್ಲಿಮರಿಗೆ ಒಬ್ಬ ಇಮಾಂ ಇದ್ದಲ್ಲಿ, ಇಮಾಮಿನ ಆಹ್ವಾನ ಇದ್ದೂ ಜಿಹಾದಿನಲ್ಲಿ ಭಾಗಿಯಾಗದವರು ಮಾತ್ರವೇ ಅಪರಾಧಿಗಳಾಗುತ್ತಾರೆ.

ಬ್ರಿಟಿಷರೊಡನೆ ಜಿಹಾದ್ (ಧರ್ಮಯುದ್ಧ) ಕೂಡದೆಂದು ಅಹ್ಮದಿಯರು ಹೇಳಿರುವುದು, ಬ್ರಿಟಿಷರು ಖಡ್ಗಬಲದಿಂದ ಧರ್ಮ ಪರಿವರ್ತನೆ ಮಾಡಲು ಪ್ರಯತ್ನಿಸಿರಲಿಲ್ಲವೆಂಬ ಕಾರಣದಿಂದಾಗಿದೆ. ಒಂದು ವೇಳೆ ಬ್ರಿಟಿಷರು ಬಲ ಪ್ರಯೋಗದಿಂದ ಧರ್ಮ ಪರಿವರ್ತನೆ ನಡೆಸಿದ್ದರೆ ಅವರೆದುರು "ಜಿಹಾದ್" ಮಾಡುವುದು ಅನಿವಾರ್ಯವೂ ನಿರ್ಬಂಧವೂ ಆಗುತ್ತಿತ್ತು. ಆದರೆ ಅಹ್ಮದಿಯರ ಈ ಧೋರಣೆಯು ತಪ್ಪೆಂದೂ ಬ್ರಿಟಿಷರೊಡನೆ "ಜಿಹಾದ್" ಆವಶ್ಯವೆಂದೂ ಮುಸ್ಲಿಮರು ನಂಬಿದ್ದರೆ, ಅವರಲ್ಲಿ ಪ್ರತಿಯೊಬ್ಬರೂ ಬ್ರಿಟಿಷರೆದುರು ಖಡ್ಗವೆತ್ತಲು ನಿರ್ಬಂಧಿತರಾಗಿರಲಿಲ್ಲವೇ? ಹಾಗಿದ್ದೂ ಮುಸ್ಲಿಮರು ಯಾಕಾಗಿ ಹಾಗೆ ಮಾಡಲಿಲ್ಲ? ನಾವು ಹಾಗೆ ಮಾಡದಿರಲು ಕಾರಣ ಅದಕ್ಕೆ ಪ್ರಾಪ್ತ ಸಮಯ ಬಂದಿಲ್ಲವೆಂಬುದಾಗಿ ತಪ್ಪು ತಿಳಿದುಕೊಂಡೆವೆಂದು ನಾವು ಅಲ್ಲಾಹನೊಡನೆ ಉತ್ತರಿಸಬಹುದು. ಆದರೆ ಅಹ್ಮದಿಯರು ಜಿಹಾದನ್ನು ನಿಷೇಧಿಸುವರೆಂದು ಹೇಳುತ್ತಾ, ನಮ್ಮನ್ನು ಆಕ್ಷೇಪಿಸುವವರಿಗೆ ರಕ್ಷಣೆಗಿರುವ ಮಾರ್ಗವಾದರೂ ಯಾವುದು? "ಪ್ರಭೂ, ಜಿಹಾದಿಗೆ ಸಂದರ್ಭ ಉಂಟಾಯಿತು. ಜಿಹಾದ್ ನಮಗೆ ನಿರ್ಬಂಧವೂ ಆಯಿತು. ಆದರೆ ನಮ್ಮ ಹೃದಯಗಳು ಭಯಭರಿತವಾಗಿದ್ದುದರಿಂದ ನಾವು ಅದಕ್ಕೆ ತಯಾರಾಗಿರಲಿಲ್ಲ. ನಿರ್ಭಯರನ್ನು ನಾವದಕ್ಕೆ ಪ್ರೇರೇಪಿಸಿ ಕಳುಹಿಸಲೂ ಇಲ್ಲ. ಕಾರಣ ಹಾಗೆ ಮಾಡಿದರೆ ಬ್ರಿಟಿಷರು ನಮ್ಮನ್ನು ಹಿಡಿಯುವರು ಎಂದು ನಾವು ನಂಬಿದೆವು"

ಎಂಬಿತ್ಯಾದಿಯಾಗಿರಬಹುದು ದೇವಸನ್ನಿಧಿಯಲ್ಲಿ ಇವರು ಹೇಳುವ ಉತ್ತರ! ಈ ಎರಡು ಉತ್ತರಗಳಲ್ಲಿ ಯಾವ ಉತ್ತರವು ದೇವ ಸನ್ನಿಧಾನದಲ್ಲಿ ಸ್ವೀಕಾರಯೋಗ್ಯವೆಂದು ನೀತಿವಂತರಾದ ವಾಚಕರೇ ತೀರ್ಮಾನಿಸಿಕೊಳ್ಳಲಿ.

ಇದುವರೆಗೂ ನಾನು ಹೇಳಿರುವುದೆಲ್ಲ ಅಹ್ಮದಿಯ್ಯತಿನ ಕುರಿತು ಯಾವ ಜ್ಞಾನವೂ ಇಲ್ಲದೆ ಅದರ ಎದುರಾಳಿಗಳು ಆಪಾದಿಸಿ ಹೇಳುವುದನ್ನು ಆಧಾರವಾಗಿರಿಸಿಯೂ ತಾವೇ ಸ್ವತಃ ಏನೆಲ್ಲ ಊಹಿಸಿ ನಿರ್ಮಿಸಿಕೊಂಡು ಅಹ್ಮದಿಯ್ಯತಿನ ಕುರಿತು ತಪ್ಪು ತಿಳುವಳಿಕೆಗೆ ಗುರಿಯಾಗಿಯೂ ಇರುವವರ ಆ ತಪ್ಪು ಅಭಿಪ್ರಾಯಗಳನ್ನು ನೀಗಿಸಲು ಮಾತ್ರವಾಗಿದೆ. ಇನ್ನು ನಾನು ಸಂಬೋಧಿಸಲಿಚ್ಛಿಸುವುದು ಅಹ್ಮದಿಯತಿನ ಕುರಿತು ಸ್ವಲ್ಪ ಮಟ್ಟಿಗೆ ತಿಳಿದುಕೊಂಡವರನ್ನಾಗಿರುವುದು. ಅಹ್ಮದಿಯರು ಅಲ್ಲಾಹನ ತೌಹೀದಿನಲ್ಲೂ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರ ರಿಸಾಲತ್ತಿನಲ್ಲೂ ಪವಿತ್ರ ಖುರ್‌ಆನಿನಲ್ಲೂ ಹದೀಸುಗಳಲ್ಲೂ ವಿಚಾರಣಾ ದಿನದಲ್ಲೂ ಶಿಕ್ಷಾ ರಕ್ಷೆಗಳಲ್ಲೂ ವಿಶ್ವಾಸವಿರುವವರೆಂದೂ ನಮಾಝ್, ಉಪವಾಸ, ಹಜ್ಜ್, ಝುಕಾತ್, ಮೊದಲಾದ ಕಾರ್ಯಗಳನ್ನು ನಿರ್ವಹಿಸುವವರೆಂದೂ ಅವರು ತಿಳಿದಿರುವರು. ಈ ರೀತಿ ಅಹ್ಮದಿಯರು ಇತರ ಮುಸ್ಲಿಮರಂತೆ ಮುಸ್ಲಿಮರೇ ಆಗಿರುವಾಗ, ಒಂದು ಪ್ರತ್ಯೇಕ ಹೊಸ ಜಮಾಅತಾಗಿ ಬೇರ್ಪಡಿಸಲು ಕಾರಣವೇನೆಂದು ಇವರು ಆಶ್ಚರ್ಯಪಡುತ್ತಾರೆ. ಇವರ ದೃಷ್ಟಿಯಲ್ಲಿ ಅಹ್ಮದಿಯರ ವಿಶ್ವಾಸಗಳೂ ಕರ್ಮಕಾರ್ಯಗಳೂ ಆಕ್ಷೇಪಾರ್ಹವಾಗಿಲ್ಲ. ಆದರೆ ಒಂದು ಹೊಸ ಸಂಘಟನೆಯಾಗಿ ಬೇರ್ಪಟ್ಟುದು ಮಾತ್ರ ಆಕ್ಷೇಪಾರ್ಹವಾಗಿದೆ. ವ್ಯತ್ಯಾಸವಿಲ್ಲದಿರುವಾಗ ವ್ಯತ್ಯಸ್ತರಾದುದೇಕೆಂಬುದೂ ಒಂದೇ ಆಗಿರುವಾಗ ಎರಡಾಗಿ ವಿಂಗಡಿಸಿದ್ದೇಕೆಂಬುದೂ ಇವರ ಮುಂದಿರುವ ಪ್ರಶ್ನೆಯಾಗಿದೆ.

## ಹೊಸ ಜಮಾಅತನ್ನು ನಿರ್ಮಿಸಲು ಕಾರಣ

ಅಹ್ಮದಿಯರು ಒಂದು ಹೊಸ ಜಮಾಅತಾಗಿ ಬೇರ್ಪಡಲು ಕಾರಣವೇನೆಂಬ ಈ ಪ್ರಶ್ನೆಯನ್ನು ಎರಡು ರೀತಿಯಲ್ಲಿ ಉತ್ತರಿಸಬಹುದು. ಒಂದನೆಯದು, ಬುದ್ಧಿಪರವಾಗಿಯೂ ಎರಡನೆಯದು, ಆಧ್ಯಾತ್ಮಿಕವಾಗಿಯೂ. ಬುದ್ಧಿ ಪರವಾಗಿ ಇದಕ್ಕಿರುವ ಉತ್ತರವು ಇದಾಗಿದೆ: 'ಜಮಾಅತ್'

ಎಂಬುದು ಜನರ ಸಂಖ್ಯಾಬಲಕ್ಕಿರುವ ಹೆಸರಲ್ಲ. ಸಾವಿರಗಟ್ಟಲೆ, ಲಕ್ಷಗಟ್ಟಲೆ ಯಾ ಕೋಟಿಗಟ್ಟಲೆ ಜನರು ಸೇರಿಕೊಂಡಿರುವ ಒಂದು ಜನಸಮೂಹವೂ ಜಮಾಅತ್ ಆಗಲಾರದು. ಐಕ್ಯದಿಂದ ಒಂದು ಸಂಯುಕ್ತ ಕಾರ್ಯಕ್ರಮಗಳ ನ್ನನುಸರಿಸುತ್ತಾ ಓರ್ವ ಇಮಾಮಿನ ಕೈಕೆಳಗೆ ಪ್ರವರ್ತಿಸಲು ತೀರ್ಮಾನಿಸಿದ ಒಂದು ಸಮೂಹವನ್ನು ಮಾತ್ರವೇ ಜಮಾಅತೆಂದು ಕರೆಯಬಹುದು. ಆ ರೀತಿ ವ್ಯವಸ್ಥಿತವಾಗಿರುವ ಜಮಾಅತು ಐದೋ, ಆರೋ ವ್ಯಕ್ತಿಗಳನ್ನು ಮಾತ್ರ ಒಳಗೊಂಡಿರುವುದಾದರೂ ಅದು ಜಮಾಅತೇ ಆಗಿರುವುದು. ಇಂತಹ ಸುಸಂಘಟಿತ ವ್ಯವಸ್ಥೆ ಇಲ್ಲದಿರುವ ಕೋಟಿಗಟ್ಟಲೆ ಜನರನ್ನೊಳಗೊಂಡ ಸಮೂಹವು ಜಮಾಅತ್ ಆಗಲಾರದು. ಮಕ್ಕಾ ಕಾಲಘಟ್ಟದ ಆರಂಭದಲ್ಲಿ ರಸೂಲ್ ಕರೀಮರು(ಸ) ನುಬುವ್ವತನ್ನು ವಾದಿಸಿದಾಗ, ಮೊದಲ ದಿನ ನಾಲ್ವರು ಮಾತ್ರವೇ ಅವರನ್ನು ಸ್ವೀಕರಿಸಿದರು. ಐದನೆಯವರು ಅವರೇ ಆಗಿದ್ದರು. ಆದರೂ ಅಂದು ಆ ಐವರು ವ್ಯಕ್ತಿಗಳು ಒಂದು ಜಮಾಅತಾಗಿತ್ತು. ಆದರೆ ಅಂದಿನ ಮಕ್ಕಾ ನಿವಾಸಿಗಳಾದ ಎಂಟೋ ಹತ್ತೋ ಸಹಸ್ರ ಜನರನ್ನೊಳಗೊಂಡ ಸಮೂಹ ಒಂದು ಜಮಾಅತಾಗಿರಲಿಲ್ಲ. ಅರೇಬ್ಯದ ಒಟ್ಟು ಜನಸಂಖ್ಯೆಯೂ ಅಂದು ಜಮಾಅತಾಗಿರಲಿಲ್ಲ. ಕಾರಣ ಅವರೆಲ್ಲರಿಗೂ ಐಕ್ಯವಾಗಿ ಪ್ರವರ್ತಿಸಲು ಯಾವುದೇ ಸಂಯುಕ್ತ ಕಾರ್ಯಕ್ರಮವಿರಲಿಲ್ಲ. ಆದುದರಿಂದ ಅಹ್ಮದಿಯರು ಒಂದು ಪ್ರತ್ಯೇಕ ಜಮಾಅತಾಗಿ ಬೇರ್ಪಟ್ಟಿರಲು ಕಾರಣವೇನೆಂದು ಪ್ರಶ್ನಿಸುವ ಮೊದಲು, ಇಂದು ಮುಸ್ಲಿಮರು ಒಂದು ಜಮಾಅತಾಗಿರುವರೋ ಎಂದು ಆಲೋಚಿಸಬೇಕಾಗಿದೆ. ಏನು, ಲೋಕ ಮುಸ್ಲಿಮರು ಎಲ್ಲ ಕಾರ್ಯಕ್ರಮಗಳನ್ನೂ ಐಕ್ಯದಿಂದ ನಿರ್ವಹಿಸಲು ತೀರ್ಮಾನಿಸಿರುವರೇ? ಅಥವಾ ಅವರಿಗೊಂದು ಸಂಯುಕ್ತ ಕಾರ್ಯಕ್ರಮವಿರುವುದೇ? ಸಹಾನುಭೂತಿಯ ಕುರಿತಾದರೆ ಮುಸ್ಲಿಮರಲ್ಲಿ ಅನ್ಯೋನ್ಯ ಅದು ಇದೆಯೆಂದು ಹೇಳಬಹುದು. ಆದರೂ ಅದು ಕೂಡ ಎಲ್ಲ ಮುಸ್ಲಿಮರಲ್ಲೂ ಇದೆಯೆಂದು ಹೇಳಲು ನಿರ್ವಾಹವಿಲ್ಲ. ಕೆಲವರಲ್ಲಿ ಇದ್ದರೆ ಇನ್ನು ಕೆಲವರಲ್ಲಿ ಇರಲಾರದು. ಅಭಿಪ್ರಾಯ ವ್ಯತ್ಯಾಸವನ್ನು ದೂರೀಕರಿಸುವ ಯಾವುದೇ ಏರ್ಪಾಡೂ ಅವರಲ್ಲಿಲ್ಲ.

ಒಂದು ಜಮಾಅತಿನ ಒಳಗೂ ಅಭಿಪ್ರಾಯ ವ್ಯತ್ಯಾಸಗಳಿರಬಹುದು. ಪ್ರವಾದಿಗಳ ಕಾಲದಲ್ಲೂ ಅವರ ಅನುಯಾಯಿಗಳೊಳಗೆ ಅಭಿಪ್ರಾಯ

ಭಿನ್ನತೆಗಳಿರುತ್ತಿದ್ದವು. ರಸೂಲ್ ಕರೀಮರ(ಸ) ಕಾಲದಲ್ಲಿ ಕೂಡ ಅನ್ಸಾರಿಗಳ ಮತ್ತು ಮುಹಾಜಿರುಗಳೊಳಗೂ ಬೇರೆ ಕೆಲವು ಮುಸ್ಲಿಂ ಗೋತ್ರಗಳೊಳಗೂ ಅಭಿಪ್ರಾಯ ವ್ಯತ್ಯಾಸಗಳುಂಟಾಗುತ್ತಿದ್ದವು. ಆದರೆ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿಸಲ್ಲಮರ ತೀರ್ಮಾನವು ಆ ಭಿನ್ನಾಭಿಪ್ರಾಯಗಳನ್ನು ನೀಗಿಸುತ್ತಿದ್ದವು. ಖಿಲಾಫತ್ ಕಾಲದಲ್ಲೂ ಅಭಿಪ್ರಾಯ ವ್ಯತ್ಯಾಸಗಳುಂಟಾಗುತ್ತಿದ್ದವು. ಆದರೆ, ಖಲೀಫರ ತೀರ್ಮಾನದೊಂದಿಗೆ ಎಲ್ಲ ವ್ಯತ್ಯಸ್ತಾಭಿಪ್ರಾಯಗಳೂ ನಿರ್ಮೂಲನವಾಗುತ್ತಿದ್ದವು. ಖಿಲಾಫತ್ ಕಾಲದ ನಂತರವೂ ಮುಸ್ಲಿಮರು ಒಂದು ಸುಸಂಘಟಿತ ರಾಜ್ಯಾಧಿಕಾರದ ಕೈಕೆಳಗೆ ಒಂದುಗೂಡಿದ್ದರು. ಅವರು ಎಲ್ಲಿ ವಾಸಿಸುತ್ತಿದ್ದರೂ ಒಂದು ವ್ಯವಸ್ಥಿತ ಕಾರ್ಯಕ್ರಮಗಳಲ್ಲಿ ಅಚ್ಚುಕಟ್ಟಾಗಿ ಪ್ರವರ್ತಿಸುತ್ತಿದ್ದರು. ಆ ವ್ಯವಸ್ಥೆಯು ಒಳ್ಳೆಯದೋ ಕೆಟ್ಟದ್ದೋ ಏನೇ ಆಗಿದ್ದರೂ ಅದು ಎಲ್ಲ ಮುಸ್ಲಿಮರನ್ನೂ ಒಂದೇ ದಾರದಲ್ಲಿ ಪೋಣಿಸಲು ಪರ್ಯಾಪ್ತವಾಗಿತ್ತು. ಅದರ ನಂತರ ಮುಸ್ಲಿಮರಲ್ಲಿ ಒಡಕುಂಟಾಗಿ ಅವರು ಎರಡಾಗಿ ವಿಂಗಡಿಸಲ್ಪಟ್ಟರು. ಸ್ಪೇನ್ ಮುಸ್ಲಿಮರು ಒಂದು ಪಕ್ಷವೂ ಲೋಕದ ಇತರ ಮುಸ್ಲಿಮರು ಇನ್ನೊಂದು ಪಕ್ಷವೂ ಆಗಿ ವಿಭಾಗಿಸಲ್ಪಟ್ಟರು. ಇದು ಬಿಕ್ಕಟ್ಟೇ ಆಗಿದ್ದರೂ ಬಹಳ ಪರಿಮಿತವಾಗಿತ್ತು. ಆಗಲೂ ಲೋಕ ಮುಸ್ಲಿಮರ ದೊಡ್ಡ ಭಾಗವು ಒಂದೇ ವ್ಯವಸ್ಥೆಯ ಮತ್ತು ಕಾರ್ಯಕ್ರಮದ ಅಧೀನದಲ್ಲಿತ್ತು. ಆದರೆ, ಮೂರು ಶತಮಾನಗಳ ನಂತರ ಈ ವ್ಯವಸ್ಥೆಯೂ ಅಸ್ತವ್ಯಸ್ತವಾಗಿ ಪರಿಣಮಿಸಿ ಬಿಕ್ಕಟ್ಟು ವಿಪರೀತ ಸ್ಥಿತಿಗೇರಿತು. ಮುಸ್ಲಿಮರು ಭಿನ್ನಾಭಿಪ್ರಾಯವುಳ್ಳವರೂ ವಿಭಿನ್ನ ಪಕ್ಷಗಳೂ ಆಗಿ ಭಿನ್ನ ಭಿನ್ನರಾಗಿ ಪರಿಣಮಿಸಿದರು. ಹಝ್ರತ್ ರಸೂಲ್ ಕರೀಮರ(ಸ) ಭವಿಷ್ಯವಾಣಿಯು ಎಷ್ಟೊಂದು ಆಶ್ಚರ್ಯಕರ ರೂಪದಲ್ಲಿ ಪೂರ್ತಿಗೊಂಡಿತು! ಹಝ್ರತ್ ಪೈಗಂಬರ್(ಸ) ಈ ರೀತಿ ನುಡಿದಿರುವರು:

**"ಖೈರುಲ್ ಖುರೂನಿ ಖರ್‌ನೀ ಸುಮ್ಮಲ್ಲಧೀನ**
**ಯಲೂನಹುಂ ಸುಮ್ಮಲ್ಲಧೀನ ಯಲೂನಹುಂ......"**

"ಶತಮಾನಗಳಲ್ಲಿ ಉತ್ತಮ ನನ್ನ ಶತಮಾನವೂ ಅದರ ನಂತರದ್ದೂ ಅದರ ನಂತರದ್ದೂ ಆಗಿರುವುದು. ಅದರ ನಂತರ ಅರಾಜಕತೆಯು ವ್ಯಾಪಿಸಿ ಅನ್ಯಾಯವೂ ಅಕ್ರಮವೂ ಭಿನ್ನತೆಯೂ ತಲೆದೋರುವುವು." ಹಾಗೆಯೇ

ಸಂಭವಿಸಿತು. ಭಿನ್ನತೆಯು ಮತ್ತೂ ವಿಪರೀತಗೊಳ್ಳುತ್ತಲೇ ಹೋದವು. ಕಳೆದ ಮೂರು ಶತಮಾನಗಳಲ್ಲಂತೂ ಮುಸ್ಲಿಮರು ತಮ್ಮ ಎಲ್ಲ ಶಕ್ತಿಗಳನ್ನೂ ನಿಶ್ಶೇಷವಾಗಿ ಕಳೆದುಕೊಂಡರು. ಒಬ್ಬ ಮುಸ್ಲಿಂ ಬಾದಶಾಹರಿಗೆ ಸಮಸ್ತ ಐರೋಪ್ಯ ಶಕ್ತಿಗಳು ಬೆದರುತ್ತಿದ್ದ ಒಂದು ಕಾಲವಿತ್ತು. ಇಂದಾದರೆ, ಯುರೋಪಿನ ಅಥವಾ ಅಮೇರಿಕಾದ ಒಂದೇ ಒಂದು ಶಕ್ತಿಯನ್ನು ಮಾತ್ರ ಎದುರಿಸುವ ಸಾಮರ್ಥ್ಯವು ಸಮಸ್ತ ಮುಸ್ಲಿಂ ರಾಷ್ಟ್ರಗಳಿಗೆ ಇಲ್ಲದಾಯ್ತು. ಪೆಲೆಸ್ತೀನಿನಲ್ಲಿ ತಲೆಯೆತ್ತಿದ್ದು ಯಹೂದ್ಯರ ಎಷ್ಟೊಂದು ಸಣ್ಣ ರಾಷ್ಟ್ರ! ಸಿರಿಯಾ, ಇರಾನ್, ಲೆಬನಾನ್, ಸೌದಿ ಅರೇಬ್ಯ, ಈಜಿಪ್ಟ್ ಮತ್ತು ಹಿಂದಿನ ಪೆಲೆಸ್ತೀನ್ ರಾಷ್ಟ್ರಗಳ ಸೈನಿಕ ಶಕ್ತಿಯು ಒಟ್ಟಾಗಿ ಆ ಕಿರುರಾಷ್ಟ್ರದೆದುರು ಹೋರಾಡುತ್ತಿದ್ದರೂ ಫಲವೇನಾಯಿತು? ವಿಶ್ವಸಂಸ್ಥೆ ಅವರಿಗೆ ಸಮ್ಮತಿಸಿದ್ದಕ್ಕಿಂತಲೂ ಎಷ್ಟೋ ಹೆಚ್ಚಿಗೆ ಸ್ಥಳವನ್ನು ಯಹೂದ್ಯರು ವಶಪಡಿಸಿಕೊಂಡರು. ಅಮೇರಿಕವೂ ಇಂಗ್ಲೆಂಡೂ ಯಹೂದಿಯರಿಗೆ ಸಹಾಯ ಮಾಡುತ್ತಿರುವುದೆಂಬುದು ನಿಜ. ಆದರೆ, ಇಲ್ಲಿ ಉದ್ಭವಿಸುವ ಪ್ರಶ್ನೆಯು, ಒಂದು ಕಾಲದಲ್ಲಿ ಸಮಸ್ತ ಐರೋಪ್ಯ ಶಕ್ತಿಗಳನ್ನು ಎದುರಿಸಲು ಒಂದು ಮುಸ್ಲಿಂ ರಾಷ್ಟ್ರವು ಶಕ್ತವಾಗಿತ್ತಾದರೆ ಈಗ ಕೆಲವೇ ಪಾಶ್ಚಾತ್ಯ ಶಕ್ತಿಗಳನ್ನಾದರೂ ಎದುರಿಸುವ ಸಾಮರ್ಥ್ಯವು ಸಮಸ್ತ ಮುಸ್ಲಿಂ ರಾಷ್ಟ್ರಗಳಿಗೆ ಇಲ್ಲದಾಗಿ ಭವಿಸಲು ಕಾರಣವೇನು? ಇದು ಹೇಗೆ ಸಂಭವಿಸಿತು?

ಸಂಕ್ಷಿಪ್ತವಾಗಿ ಹೇಳುವುದಾದರೆ, ಜಮಾಅತ್ ಎಂಬ ಅರ್ಥದಲ್ಲಿ ಇಂದಿನ ಮುಸ್ಲಿಮರಿಗೆ ಒಂದು ಜಮಾಅತ್ ಇಲ್ಲ. ಅವರ ಕೈಗಳಲ್ಲಿ ರಾಜ್ಯಗಳೇನೋ ಇವೆ. ಆದರೆ ಇಸ್ಲಾಂ ಎಂಬುದು ಪಾಕಿಸ್ತಾನದ್ದೋ ಈಜಿಪ್ತಿನದ್ದೋ ಸಿರಿಯದ್ದೋ ಹೆಸರಲ್ಲ. ಅದು ಇರಾನಿನದ್ದೋ ಅಫಘಾನಿಸ್ತಾನದ್ದೋ ಸೌದಿ ಅರೇಬ್ಯದ್ದೋ ಹೆಸರೂ ಅಲ್ಲ. ಇಸ್ಲಾಂ ಎಂಬುದು ಸಕಲ ಮುಸ್ಲಿಮರನ್ನೂ ಒಂದಾಗಿ ಪೋಣಿಸಿ ಒಂದುಗೂಡಿಸಿದ್ದ ಆ ವ್ಯವಸ್ಥೆಯ ಹೆಸರಾಗಿರುತ್ತದೆ. ಅಂತಹ ಒಂದು ವ್ಯವಸ್ಥೆಯೂ ಸಂಘಟನೆಯೂ ಇಂದು ಲೋಕದಲ್ಲಿಲ್ಲ. ಪಾಕಿಸ್ತಾನಕ್ಕೆ ಅಫಘಾನಿಸ್ತಾನದ ಮೇಲೂ ಅಫಘಾನಿಸ್ತಾನಕ್ಕೆ ಪಾಕಿಸ್ತಾನದ ಮೇಲೂ ಸಹಾನುಭೂತಿ ಇರಬಹುದು. ಆದರೆ ಪಾಕಿಸ್ತಾನವು ಹೇಳುವ ಎಲ್ಲ ಕಾರ್ಯಗಳನ್ನು ಅಫಘಾನಿಸ್ತಾನವೋ, ಅಫಘಾನಿಸ್ತಾನವು ಹೇಳುವ ಎಲ್ಲ ಕಾರ್ಯಗಳನ್ನು ಪಾಕಿಸ್ತಾನವೋ ಕೇಳಲು ತಯಾರಿಲ್ಲ. ಎರಡು ರಾಷ್ಟ್ರಗಳ

ಸಂವಿಧಾನಗಳೂ ಬೇರೆ ಬೇರೆಯಾಗಿವೆ. ಎರಡು ರಾಷ್ಟ್ರಗಳೂ ತಮ್ಮ ತಮ್ಮ ಆಂತರಿಕ ಕಾರ್ಯಗಳಲ್ಲಿ ಸ್ವತಂತ್ರವಾಗಿವೆ. ಪ್ರಜೆಗಳ ಸ್ಥಿತಿಯೂ ಇದೇ ಆಗಿದೆ. ಇತರ ಮುಸ್ಲಿಂ ರಾಷ್ಟ್ರಗಳ ಅವಸ್ಥೆಯೂ ಇದಕ್ಕಿಂತ ಭಿನ್ನವಲ್ಲ. ಇವರೆಲ್ಲರನ್ನೂ ಒಂದು ದಾರದಲ್ಲಿ ಪೋಣಿಸುವ ಯಾವುದೇ ವ್ಯವಸ್ಥೆಯೂ ಇಂದು ಲೋಕದಲ್ಲಿಲ್ಲ. ಈಗ ಮುಸ್ಲಿಮರೂ ಇದ್ದಾರೆ, ಮುಸ್ಲಿಂ ರಾಷ್ಟ್ರಗಳೂ ಇವೆ. ದೇವಾನುಗ್ರಹದಿಂದ ಕೆಲವು ರಾಷ್ಟ್ರಗಳು ಶಕ್ತಿಹೊಂದುತ್ತಲೂ ಇವೆ. ಹಾಗಿದ್ದರೂ ಇಂದಿನ ಮುಸ್ಲಿಮರು ಒಂದು ಜಮಾಅತಾಗಿ ಇಲ್ಲ. ಉದಾಹರಣೆಗೆ, ಪಾಕಿಸ್ತಾನವು ಹಿಂದೂ ಸಾಗರದಲ್ಲಿಡೀ ಆಧಿಪತ್ಯವನ್ನು ಸ್ಥಾಪಿಸುವಷ್ಟು ನಾವಿಕ ಶಕ್ತಿಯನ್ನೂ ಭಾರತವನ್ನೇ ಬೆದರಿಸುವಷ್ಟು ಸೈನ್ಯಬಲವನ್ನೂ ಲೋಕದ ವಾಣಿಜ್ಯ ಕೇಂದ್ರಗಳನ್ನೆಲ್ಲ ವಶಪಡಿಸಿಕೊಳ್ಳುವಷ್ಟು ಆರ್ಥಿಕ ಸಾಮರ್ಥ್ಯವನ್ನೂ ಹೊಂದಿದೆಯೆಂದು ಸಂಕಲ್ಪಿಸಿರಿ. ಮಾತ್ರವಲ್ಲ, ಪಾಕಿಸ್ತಾನದ ಶಕ್ತಿಯು ಅಮೇರಿಕದಕ್ಕಿಂತಲೂ ಮಿಗಿಲಾದದ್ದೆಂದೂ ಊಹಿಸಿರಿ. ಹಾಗಿದ್ದರೂ ಇರಾನ್, ಸಿರಿಯಾ, ಪೆಲೆಸ್ತೀನ್, ಈಜಿಪ್ತ್ ಮೊದಲಾದ ರಾಷ್ಟ್ರಗಳು ಪಾಕಿಸ್ತಾನದೊಂದಿಗೆ ಸೇರಲು ತಯಾರಿರುವುವೆ? ಇಲ್ಲವೆಂಬುದು ಸ್ಪಷ್ಟ. ಅವುಗಳು ಪಾಕಿಸ್ತಾನದ ಸಾಮರ್ಥ್ಯವನ್ನು ಪ್ರಶಂಸಿಸಲೂ ಅದರೊಂದಿಗೆ ಸಹಾನುಭೂತಿ ತೋರಿಸಲೂ ತಯಾರಿರಬಹುದು. ಆದರೂ ಪಾಕಿಸ್ತಾನದೊಂದಿಗೆ ಸೇರಿಕೊಳ್ಳಲು ಅವುಗಳು ಯಾವತ್ತೂ ತಯಾರಾಗಿರಲಾರವು.

ಹೀಗೆ, ದೇವಕೃಪೆಯಿಂದ ಮುಸ್ಲಿಮರ ರಾಷ್ಟ್ರೀಯ ಸ್ಥಿತಿಯು ಸುಧಾರಿಸುತ್ತಾ ಬರುತ್ತಿದ್ದು, ಕೆಲ ಹೊಸ ರಾಷ್ಟ್ರಗಳೂ ಉದ್ಭವಿಸುತ್ತಿರುವುದಾದರೂ ಇಂದಿನ ಲೋಕ ಮುಸ್ಲಿಮರನ್ನು ಒಂದು ಜಮಾಅತೆಂದು ಹೇಳಲು ಸಾಧ್ಯವಿಲ್ಲ. ಕಾರಣವೇನೆಂದರೆ, ಅವರು ಬೇರೆ ಬೇರೆ ರಾಜ್ಯಗಳಲ್ಲಿ ವಿಭಜಿಸಲ್ಪಟ್ಟು ವಿಭಿನ್ನ ರೀತಿಯ ರಾಜ್ಯಭಾರ ಕ್ರಮಗಳಿಗೆ ವಿಧೇಯರಾಗಿರುವರು. ಅವರೆಲ್ಲರ ಶಬ್ದಗಳನ್ನೂ ಒಂದೇ ಸ್ಥಳದಲ್ಲಿ ಕೇಂದ್ರೀಕರಿಸುವ ಒಂದು ವ್ಯವಸ್ಥೆಯು ಇಂದಿಲ್ಲ. ಇಸ್ಲಾಂ ಎಂಬುದು ಸಾರ್ವಲೌಕಿಕವೆಂದು ಅದು ವಾದಿಸುತ್ತದೆ. ಅದು ಅರೇಬ್ಯದ ಮುಸ್ಲಿಮರದ್ದೋ ಇರಾನಿನ ಮುಸ್ಲಿಮರದ್ದೋ ಸಿರಿಯಾದ ಮುಸ್ಲಿಮರದ್ದೋ ಹೆಸರಲ್ಲ. ಪ್ರಪಂಚದ ಪ್ರತಿ ರಾಜ್ಯದಲ್ಲಿ ವಾಸಿಸುವ ಮುಸ್ಲಿಮರೂ 'ಇಸ್ಲಾಂ' ಎಂಬ ಹೆಸರಿನಲ್ಲಿ ಒಳಪಡುವರು. ಅಂತೆಯೇ ಈ

ಎಲ್ಲ ಮುಸ್ಲಿಮರನ್ನೂ ಏಕೀಕರಿಸುವ ಒಂದು ಸಂಘಟನೆಯು ಮಾತ್ರವೇ ಇಸ್ಲಾಮೀ ಜಮಾಅತಾಗಲು ಸಾಧ್ಯ. ಅಂತಹ ಒಂದು ಸಂಘಟನೆಯು ರೂಪಗೊಳ್ಳುವವರೆಗೂ ಮುಸ್ಲಿಮರಿಗೆ ಶಕ್ತಿ ಸಾಮರ್ಥ್ಯಗಳಿದ್ದರೂ ಸಾಮ್ರಾಜ್ಯಗಳಿದ್ದರೂ ಅವರೊಂದು ಜಮಾಅತಲ್ಲವೆಂದು ಹೇಳಲು ನಾವು ನಿರ್ಬಂಧಿತರಾಗಿದ್ದೇವೆ.

ಒಂದು ಸಂಯುಕ್ತ ಕಾರ್ಯಕ್ರಮದ ಕುರಿತು ಹೇಳುವುದಾದರೂ ಇಂದಿನ ಸಕಲ ಮುಸ್ಲಿಮರನ್ನೂ ಒಂದುಗೂಡಿಸುವ ಯಾವ ವ್ಯವಸ್ಥೆಯೂ ಅವರಿಗೆ ಇಲ್ಲವೆಂಬಂತೆಯೇ ಒಂದು ಸಂಯುಕ್ತ ಕಾರ್ಯಕ್ರಮವೂ ಅವರಿಗಿಲ್ಲ. ರಾಷ್ಟ್ರೀಯವಾಗಿಯೂ ಇಲ್ಲ, ಸಾಂಸ್ಕೃತಿಕವಾಗಿಯೂ ಇಲ್ಲ, ಹಾಗೂ ಧಾರ್ಮಿಕವಾಗಿಯೂ ಇಲ್ಲ. ವೈಯಕ್ತಿಕವಾಗಿ ಎಲ್ಲಾದರೂ ಒಬ್ಬ ಮುಸ್ಲಿಮನು ಇಸ್ಲಾಮಿನ ಶತ್ರುವನ್ನು ಎದುರಿಸಿದನೆಂದಾದರೆ ಅದೊಂದು ರೀತಿ ಬೇರೆ. ಏಕೀಕೃತವಾಗಿ ಒಂದು ಪ್ರತ್ಯೇಕ ವ್ಯವಸ್ಥೆಯ ಮೂಲಕ ಶತ್ರುಗಳ ಆಕ್ರಮಣಗಳನ್ನು ವೀಕ್ಷಿಸಿ ಎದುರಿಸುವ ರೀತಿಯೇ ಬೇರೆ. ಅಂತೂ ಒಂದು ಸಾಮಾನ್ಯ ಕಾರ್ಯಕ್ರಮದ ದೃಷ್ಟಿಯನ್ನು ಮುಂದಿಟ್ಟು ನೋಡುವುದಾದರೂ ಮುಸ್ಲಿಮರು ಒಂದು ಜಮಾಅತಲ್ಲ. ಹಾಗಿರುವಾಗ, ಇಸ್ಲಾಮಿನ ರಕ್ಷಣೆಗೆ ಅಗತ್ಯವಾದ ಒಂದು ಸಂಘಟನೆಯನ್ನೂ ಒಂದು ಸಾಮಾನ್ಯ ಕಾರ್ಯಕ್ರಮವನ್ನೂ ಧ್ಯೇಯವಾಗಿರಿಸಿಕೊಂಡು ಒಂದು ಜಮಾಅತು ಸ್ಥಾಪಿಸಲ್ಪಡುವುದಾದರೆ ಅದರ ಕುರಿತು ಅದೊಂದು ಹೊಸ ಜಮಾಅತೆಂದು ಆಕ್ಷೇಪಿಸಲಾಗದು. ಬದಲಾಗಿ ಮೊದಲು ಅಂತಹ ಒಂದು ಜಮಾಅತು ಇರಲಿಲ್ಲವೆಂದೂ ಈಗ ಒಂದು ಜಮಾಅತು ಸ್ಥಾಪಿತವಾಯಿತೆಂದೂ ಹೇಳಬೇಕಾಗಿದೆ. ಪ್ರಾರ್ಥನೆ, ಖಿಬ್‌ಲ, ಖುರ್‌ಆನ್, ಪ್ರವಾದಿ ಇವೆಲ್ಲವೂ ಒಂದೇ ಆಗಿರುವಾಗ ಅಹ್ಮದಿಯರು ಒಂದು ಪ್ರತ್ಯೇಕ ಜಮಾಅತಾಗಿ ಬೇರ್ಪಡಲು ಕಾರಣವೇನೆಂದು ಶಂಕಿಸುವ ಸಹೋದರರೊಡನೆ ನನಗೆ ಹೇಳಲಿರುವುದು, ಇಸ್ಲಾಮಿನ ಉತ್ಥಾನಕ್ಕಾಗಿ ಶ್ರಮಿಸುವ ಒಂದು ಜಮಾಅತನ್ನು ರೂಪೀಕರಿಸಬೇಕಾದ ಕಾಲವು ಸನ್ನಿಹಿತವಾಗಿರುವುದೆಂದೂ ಅದಕ್ಕಾಗಿ ಇನ್ನು ಎಷ್ಟರವರೆಗೆ ಕಾಯಬೇಕೆಂಬ ವಿಷಯದಲ್ಲಿ ಅವರು ತುಸು ಆಲೋಚಿಸಲಿ ಎಂದೂ ಆಗಿದೆ. ಇಂದು ಹಲವು ಮುಸ್ಲಿಂ ರಾಷ್ಟ್ರಗಳಿವೆ. ಅವರವರ ಕಾರ್ಯಲಾಭಗಳನ್ನು ಮಾತ್ರವೇ

ಪ್ರತೀಕ್ಷಿಸುತ್ತಿರುವ ಈ ಸಾಮ್ರಾಜ್ಯಗಳೆಲ್ಲ ಇದ್ದರೂ, ಇನ್ನೂ "ಒಂದು ಕೊರತೆ" ಇದೆ. ಯಾವುದೋ ಒಂದು ನ್ಯೂನತೆಯಿದೆ. ಆ ಕೊರತೆಯನ್ನು ಪೂರ್ತಿಗೊಳಿಸುವ ಸಲುವಾಗಿಯೂ ಆ ನ್ಯೂನತೆಯನ್ನು ಹೋಗಲಾಡಿಸುವ ಸಲುವಾಗಿಯೂ ಅಹ್ಮದಿಯಾ ಜಮಾಅತ್ ಸ್ಥಾಪಿಸಲ್ಪಟ್ಟಿರುವುದು.

ತುರ್ಕಿಯರು "ತುರ್ಕಿ ಖಿಲಾಫತ್"ನ್ನು ಕೊನೆಗೊಳಿಸಿದಾಗ ಈಜಿಪ್ತಿನ ಕೆಲ ಪಂಡಿತರಿಂದ ಒಂದು ಖಿಲಾಫತ್ ಸಂಘಟನೆಯು ರೂಪಿಸಲ್ಪಟ್ಟಿತು. (ರಹಸ್ಯವನ್ನು ತಿಳಿದ ಕೆಲವರು ಈಜಿಪ್ತಿನ ರಾಜನೇ ಅದರ ಸ್ಥಾಪಕನೆಂದು ಅಭಿಪ್ರಾಯಪಡುತ್ತಾರೆ). ಇದರಿಂದಾಗಿ ಲೋಕ ಮುಸ್ಲಿಮರು ಈಜಿಪ್ತಿನ ರಾಜನನ್ನು "ಖಲೀಫ" ಎಂದು ಸ್ವೀಕರಿಸುವುದರಿಂದ ಈಜಿಪ್ತಿಗೆ ಒಂದು ಹಿರಿಮೆ ದೊರಕುವುದೆಂದು ಇದರ ಸಂಘಟಕರು ಅಭಿಪ್ರಾಯಪಟ್ಟರು. ಆದರೆ, ಸೌದಿ ಅರೇಬ್ಯವು ಇದನ್ನು ವಿರೋಧಿಸಿತು. ಈಜಿಪ್ತಿನ ಈ ಸಂಘಟನೆಯು ಬ್ರಿಟಿಷರ ಸೃಷ್ಟಿಯೆಂದೂ ಖಿಲಾಫತಿನ ನಿಜವಾದ ಅರ್ಹತೆಯು ಸೌದಿ ಅರೇಬ್ಯದ ರಾಜನಿಗೆ ಮಾತ್ರವೇ ಇರುವುದೆಂದೂ ಅವರು ಪ್ರಚಾರಪಡಿಸಿದರು. ಖಿಲಾಫತಿನ ಕುರಿತು ಹೇಳುವುದಾದರೆ, ಅದು ಲೋಕದ ಎಲ್ಲ ಮುಸ್ಲಿಮರನ್ನೂ ಒಂದಾಗಿ ಪೋಣಿಸಲು ಪರ್ಯಾಪ್ತವಾದ ಒಂದು ದಾರವಾಗಿರಬೇಕು. ಆದರೆ, ಆ ಖಿಲಾಫತನ್ನು ಒಂದು ಪ್ರತ್ಯೇಕ ರಾಜ್ಯದ ರಾಜನೊಡನೆ ಸಂಬಂಧಪಡಿಸಿದಾಗ ಇತರ ರಾಜರುಗಳು ಅದನ್ನು ಭಯಭೀತಿಯಿಂದ ವೀಕ್ಷಿಸುತ್ತಾ ಅದನ್ನು ನಾಶಪಡಿಸುವ ಕಾರ್ಯತಂತ್ರಗಳಲ್ಲಿ ಏರ್ಪಟ್ಟರು. ಹೀಗೆ ಸಕಲ ಮುಸ್ಲಿಮರನ್ನೂ ಒಂದುಗೂಡಿಸಲು ಪರ್ಯಾಪ್ತವಾಗಿರಬೇಕಾಗಿದ್ದ ಖಿಲಾಫತ್ ಯೋಜನೆಯು ತನ್ನ ಕಾರ್ಯದಲ್ಲಿ ವಿಫಲವಾಗಿ ಪರಿಣಮಿಸಿತು. ಆದರೆ ಈ ಸಂಘಟನೆಯು ಸಿಂಹಾಸನಗಳಿಂದ ಉದ್ಭವಿಸುವುದರ ಬದಲು, ಸಾಮಾನ್ಯ ಜನರಿಂದ ಉದ್ಭವಿಸಿ, ಧಾರ್ಮಿಕವಾದ ಲಕ್ಷ್ಯವನ್ನು ಮುಂದಿಟ್ಟು ಪ್ರವರ್ತಿಸಿದರೆ ರಾಷ್ಟ್ರೀಯ ಪೈಪೋಟಿಗಳು ಇದರ ಮಾರ್ಗದಲ್ಲಿ ತಡೆಯಾಗಿ ಪರಿಣಮಿಸಲಾರದು. ಕೇವಲ ಅದೊಂದು ಪ್ರತ್ಯೇಕ ಜಮಾಅತೆಂಬ ಆಪಾದನೆ ಮಾತ್ರವೇ ಅದರೆದುರು ಹೊರಟು ಬರುವುದು. ಒಂದು ಸಿಂಹಾಸನದೊಂದಿಗೆ ಖಿಲಾಫತನ್ನು ಹೊಂದಿಸಿ ಪ್ರಾರಂಭಿಸುವುದಾದರೆ, ಅದು ಅ ಸಿಂಹಾಸನದ ಅಧೀನದಲ್ಲಿ ವಾಸಿಸುವವರಿಗೆ ಮಾತ್ರವೇ ಅನ್ವಯಿಸುವುದು. ಬೇರೆ

ರಾಜ್ಯಗಳಲ್ಲಿ ವಾಸಿಸುವ ಜನರಿಗೆ ಅದು ಯಾವತ್ತೂ ಫಲಕಾರಿಯಾಗಿರದು. ಬದಲಾಗಿ, ಅದು ಸಾಮಾನ್ಯರಿಂದ ಉದ್ಭವಿಸಿ, ರಾಷ್ಟ್ರೀಯವಾಗಿರದೆ, ಕೇವಲ ಧಾರ್ಮಿಕವಾಗಿದ್ದಲ್ಲಿ ಒಂದು ಹೊಸ ಜಮಾಅತೆಂಬ ಆಕ್ಷೇಪದ ಹೊರತು ರಾಷ್ಟ್ರೀಯವಾದ ಯಾವ ಸ್ಪರ್ಧೆಯೂ ಅದರೆದುರು ತಲೆಯೆತ್ತಲಾರದು. ಹಾಗೆ ಅದು ಒಂದೇ ರಾಜ್ಯದಲ್ಲಿ ಮಾತ್ರವಲ್ಲದೆ ಎಲ್ಲ ರಾಜ್ಯಗಳಲ್ಲೂ ವ್ಯಾಪಿಸಿ ಬೇರೂರಲು ಸಾಧ್ಯವಾಗುವುದು. ಮುಸ್ಲಿಂ ರಾಷ್ಟ್ರಗಳಲ್ಲಿ ಮಾತ್ರವಲ್ಲ ಮುಸ್ಲಿಮೇತರ ರಾಷ್ಟ್ರಗಳಲ್ಲೂ ಅದು ಪ್ರವೇಶಿಸಿ ಕಾರ್ಯಪ್ರವರ್ತನೆಯಲ್ಲಿ ತೊಡಗಬಹುದು. ಏಕೆಂದರೆ ಅದೊಂದು ರಾಷ್ಟ್ರೀಯ ಸ್ಥಾಪನೆಯಲ್ಲದ ಕಾರಣದಿಂದ ಯಾವ ಸರಕಾರವೂ ರಾಜರೂ ಅದನ್ನು ವಿರೋಧಿಸಲಿಕ್ಕೂ ಎದುರಿಸಲಿಕ್ಕೂ ಮುಂದಾಗಲಾರರು. ಇದಕ್ಕೆ ಅಹ್ಮದಿಯಾ ಸಂಘಟನೆಯ ಚರಿತ್ರೆಯೇ ಸಾಕ್ಷಿಯಾಗಿದೆ.

ಅಹ್ಮದಿಯಾ ಸಂಘಟನೆಯ ಲಕ್ಷ್ಯವು ಮುಸ್ಲಿಮರನ್ನು ಒಂದುಗೂಡಿಸುವುದಾಗಿತ್ತು. ರಾಜತ್ವವನ್ನೋ, ರಾಜ್ಯಾಧಿಕಾರವನ್ನೋ ಅದು ಆಶಿಸಲಿಲ್ಲ. ಹೀಗೆ ಅಹ್ಮದಿಯಾ ಸಂಘಟನೆಯು ಕೇವಲ ಒಂದು ಧಾರ್ಮಿಕ ಸ್ಥಾಪನೆಯಾದ ಕಾರಣದಿಂದಲೇ ಕೆಲವೆಡೆ ಬ್ರಿಟಿಷರು ಅದಕ್ಕೆ ಕಷ್ಟಕೊಟ್ಟರೂ ಬಹಿರಂಗವಾಗಿ ಅದನ್ನು ವಿರೋಧಿಸುವುದು ಅಗತ್ಯವೆಂದು ಅವರು ಭಾವಿಸಿರಲಿಲ್ಲ. ಅಫಘಾನಿಸ್ತಾನದಲ್ಲಿ ಅಲ್ಲಿಯ ಮುಲ್ಲಾಗಳಿಗೆ ಭಯಪಟ್ಟು ಬಾದಶಹರು ಅಹ್ಮದಿಯರೊಂದಿಗೆ ಕ್ರೂರವಾಗಿ ವರ್ತಿಸಿದ್ದರೂ ಖಾಸಗಿಯಾಗಿ ಅವರು ತಮ್ಮ ದೌರ್ಬಲ್ಯಕ್ಕೂ ದುಷ್ಕೃತ್ಯಗಳಿಗೂ ಖೇದ ಪ್ರಕಟಿಸುತ್ತಿದ್ದರು. ಇದೇ ರೀತಿ ಇತರ ಮುಸ್ಲಿಂ ರಾಷ್ಟ್ರಗಳಲ್ಲಿಯೂ ಅಲ್ಲಿಯ ಜನಸಾಮಾನ್ಯರೂ ಧರ್ಮ ಪಂಡಿತರೂ ಅಹ್ಮದಿಯ್ಯತನ್ನು ವಿರೋಧಿಸಿದರು. ಅವರಿಗೆ ಹೆದರಿ ಅಲ್ಲಿಯ ಸರಕಾರಗಳೂ ಅಹ್ಮದಿಯರ ಪ್ರವರ್ತನ ಮಾರ್ಗಗಳಲ್ಲಿ ಅನೇಕ ತಡೆಗಳನ್ನುಂಟುಮಾಡಿದವು. ಆದರೆ ಯಾವ ಸರಕಾರವೂ ಈ ಸಂಘಟನೆಯನ್ನು, ತಮ್ಮ ಸರಕಾರವನ್ನು ಉರುಳಿಸುವ ಒಂದು ಪಿತೂರಿಯಾಗಿ ಕಂಡಿರಲಿಲ್ಲ. ಅವರ ಈ ಅಭಿಪ್ರಾಯವು ಸಂಪೂರ್ಣ ಸತ್ಯವೂ ಆಗಿತ್ತು. ಅಹ್ಮದಿಯ್ಯತಿಗೆ ರಾಜಕಾರಣದೊಂದಿಗೆ ಯಾವ ಸಂಬಂಧವೂ ಇಲ್ಲ.

ಮುಸ್ಲಿಮರ ಧಾರ್ಮಿಕ ಅವಸ್ಥೆಯನ್ನು ಸುಧಾರಿಸಿ, ಅವರನ್ನು

ಒಂದುಗೂಡಿಸುತ್ತಾ ಆಧ್ಯಾತ್ಮಿಕವೂ ಧಾರ್ಮಿಕವೂ ಆದ ಆಯುಧಗಳಿಂದ ಇಸ್ಲಾಮಿನ ಶತ್ರುಗಳೊಡನೆ ಹೋರಾಡಲು ಅವರನ್ನು ಸಜ್ಜುಗೊಳಿಸುವುದಕ್ಕಾಗಿ ಮಾತ್ರವೇ ಅಹ್ಮದಿಯತ್ ನೆಲೆಗೊಂಡಿದೆ. ಈ ಧ್ಯೇಯವನ್ನು ಮುಂದಿಟ್ಟುಕೊಂಡೇ ಅಮೇರಿಕಕ್ಕೆ ಅಹ್ಮದಿಯಾ ಮಿಶನರಿಗಳು ಹೋದರು. ಅಮೇರಿಕನರು ಎಲ್ಲ ಏಷ್ಯನರನ್ನು ವಿರೋಧಿಸುವ ರೀತಿಯಲ್ಲಿ ಇವರನ್ನೂ ಎದುರಿಸಿದರಾದರೂ ಧಾರ್ಮಿಕವಾಗಿ ಅವರು ಅಹ್ಮದಿಯರನ್ನು ವಿರೋಧಿಸಲಿಲ್ಲ. ಇಂಡೋನೇಶ್ಯಾದಲ್ಲಿ ಅಧಿಕಾರ ನಡೆಸುತ್ತಿದ್ದ ಡಚ್ ಸರಕಾರವೂ ಇದೇ ರೀತಿ ಅಹ್ಮದಿಯರನ್ನು ಮೊದಲು ವೀಕ್ಷಿಸಿತು. ನಂತರ ತಮ್ಮ ರಾಜ್ಯಾಡಳಿತ ಕಾರ್ಯಗಳಲ್ಲಿ ಪ್ರವೇಶಿಸುವ ಯಾವ ಉದ್ದೇಶವೂ ಇವರಿಗಿಲ್ಲವೆಂದು ತಿಳಿದು, ರಹಸ್ಯವಾಗಿ ಅಹ್ಮದಿಯರ ಪ್ರವರ್ತನದ ಮೇಲೆ ಕಣ್ಣಿಟ್ಟರೂ, ಅವರ ಹಕ್ಕುಗಳನ್ನು ಕೆಲವೊಮ್ಮೆ ಕಡೆಗಣಿಸಿದರೂ ಬಹಿರಂಗವಾಗಿ ಇವರನ್ನು ಎದುರಿಸುವ ಅಗತ್ಯವಿಲ್ಲವೆಂದು ಆ ಸರಕಾರವು ತಿಳಿದುಕೊಂಡಿತು. ಅವರ ಆ ಅಭಿಪ್ರಾಯವು ಸರಿಯಾದುದಾಗಿತ್ತು. ನಾವು ಅವರ ಧಾರ್ಮಿಕ ವಿಶ್ವಾಸಕ್ಕೆ ಎದುರಾಗಿಯೇ ಪ್ರಬೋಧನೆ ನಡೆಸಿದೆವು. ನಾವು ಅವರ ಯಾವ ತರಹದ ಸಹಾನುಭೂತಿಯನ್ನೂ ಕಾಂಕ್ಷಿಸಲಿಲ್ಲ. ನಾವು ಅವರ ರಾಷ್ಟ್ರೀಯ ಕಾರ್ಯಗಳಲ್ಲಿ ಕೈಹಾಕಲೂ ಇಲ್ಲ. ಆದಕಾರಣ ನಮ್ಮ ಕಾರ್ಯಗಳಿಗೆ ಯಾವ ರೀತಿಯ ತಡೆಯನ್ನೂ ಅವರು ತಂದೊಡ್ಡಲಿಲ್ಲ.

ಹೀಗೆ ಅಹ್ಮದಿಯತ್ ಒಂದು ರಾಜಕೀಯ ಸಂಘಟನೆಯಾಗಿರದೆ, ಕೇವಲ ಧಾರ್ಮಿಕ ಸಂಘಟನೆಯಾಗಿದ್ದ ಕಾರಣದಿಂದ ಅದು ಇಂದು ಎಲ್ಲ ರಾಷ್ಟ್ರಗಳಲ್ಲಿಯೂ ನೆಲೆಯೂರಿಕೊಂಡಿದೆ. ಭಾರತ, ಅಫಘಾನಿಸ್ತಾನ, ಇರಾನ್, ಸಿರಿಯಾ, ಪೆಲೆಸ್ತೀನ್, ಈಜಿಪ್ತ್, ಇಟಲಿ, ಸ್ವಿಟ್ಜರ್‌ಲೇಂಡ್, ಜರ್ಮನಿ, ಇಂಗ್ಲೆಂಡ್, ಅಮೇರಿಕಾ, ಇಂಡೋನೇಷ್ಯಾ, ಮಲಯ, ಪೂರ್ವ ಆಫ್ರಿಕಾ, ಪಶ್ಚಿಮ ಆಫ್ರಿಕಾ, ಅಬಿಸ್ಸೀನಿಯಾ, ಅರ್ಜೆಂಟೀನಾ, ಮೊದಲಾದ ಎಲ್ಲ ರಾಜ್ಯಗಳಲ್ಲಿಯೂ ಕಡಿಮೆ ಸಂಖ್ಯೆಯಲ್ಲೂ ಅಧಿಕ ಸಂಖ್ಯೆಯಲ್ಲೂ ಅಹ್ಮದಿಯಾ ಜಮಾಅತ್ ನೆಲೆಗೊಂಡಿರುವುದು. ಆ ರಾಷ್ಟ್ರದ ಪ್ರಜೆಗಳಿಂದಲೇ ಜಮಾಅತ್ ಸ್ಥಾಪಿತವಾಗಿದೆ. ಅವರು ಇಂಡಿಯಾದವರೋ ಪಂಜಾಬಿಗಳೋ ಅಲ್ಲ, ತಮ್ಮ ಜೀವನವನ್ನೇ ಇಸ್ಲಾಮಿನ ಸೇವೆಗಾಗಿ ಅರ್ಪಿಸಿದ ಹಲವು ಭಕ್ತದಾಸರೂ ಅಲ್ಲಿರುವರು. ಆಂಗ್ಲೇಯರಾದ ಒಬ್ಬ ಲೆಫ್ಟಿನೆಂಟ್ ತನ್ನ ಜೀವನಕಾಲವಿಡೀ

ಇಸ್ಲಾಮಿಗೆ ಸೇವೆ ಸಲ್ಲಿಸಲಿಕ್ಕಾಗಿ ಅರ್ಪಣೆಗೈದು, ಈಗ ಒಬ್ಬ ಮುಸ್ಲಿಂ ಮಿಶನರಿಯಾಗಿ ದುಡಿಯುತ್ತಿರುವರು. ಅವರು ತಮ್ಮ ಪ್ರಾರ್ಥನೆಗಳನ್ನು ನಿಷ್ಠೆಯಿಂದಲೂ ತಪ್ಪದೆಯೂ ನಿರ್ವಹಿಸುತ್ತಿದ್ದಾರೆ. ಮದ್ಯ ಮೊದಲಾದವುಗಳನ್ನು ಸಮೀಸುವುದು ಕೂಡ ಇಲ್ಲ. ಸ್ವಂತ ಕಷ್ಟಪಟ್ಟು ದುಡಿದ ಹಣದಿಂದ ಖರ್ಚು ಮಾಡುತ್ತಾ ಇಸ್ಲಾಮಿಕ ಕಿರು ಲೇಖನಗಳನ್ನು ಮುದ್ರಿಸಿ ಪ್ರಚರಿಸುತ್ತಲೂ ಸಭೆಗಳನ್ನು ಕರೆದು ಸೇರಿಸಿ ಇಸ್ಲಾಂ ಧರ್ಮವನ್ನು ಪ್ರಭೋಧಿಸುತ್ತಲೂ ಇರುವರು. ನಾವು ಅವರಿಗೆ ನೀಡುತ್ತಿರುವ ಗೌರವ ಧನವಾದರೋ ಇಂಗ್ಲೆಂಡಿನ ಅತ್ಯಂತ ಬಡ ಕೂಲಿಗಾರನಿಗೆ ಲಭಿಸುವುದಕ್ಕಿಂತಲೂ ಎಷ್ಟೋ ಕನಿಷ್ಠ.

ಇದೇ ರೀತಿ ಒಬ್ಬ ಜರ್ಮನ್ ನಿವಾಸಿಯೂ ಇಸ್ಲಾಮಿಗಾಗಿ ತನ್ನ ಜೀವನವನ್ನು ಮೀಸಲಾಗಿರಿಸಿರುವರು. ಅವರು ಕೂಡ ಸೈನ್ಯದ ಒಬ್ಬ ನಿವೃತ್ತ ಅಧಿಕಾರಿಯಾಗಿದ್ದಾರೆ. ಬಹಳ ಕಷ್ಟ ಕ್ಲೇಶಗಳನ್ನು ಅನುಭವಿಸಿದ ನಂತರವೇ ಅವರಿಗೆ ಜರ್ಮನಿಯಿಂದ ಹೊರಬರಲು ಸಾಧ್ಯವಾಯಿತು. ಈಗ ಸ್ವಿಟ್ಜರ್‌ಲೇಂಡಿನಲ್ಲಿ ಇರುವರೆಂದು ವಾರ್ತೆಯಿದೆ. ಅಹ್ಮದಿಯಾ ಕೇಂದ್ರಕ್ಕಾಗಮಿಸಲು "ವಿಸಾ"ಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಯುವ ಪ್ರಾಯದ ಆ ಜರ್ಮನ್ ಭಕ್ತನಿಗೆ ಇಸ್ಲಾಮಿನ ಸೇವೆಯಲ್ಲಿ ಅಮಿತವಾದ ಆಕಾಂಕ್ಷೆಯಿದೆ. ಇಸ್ಲಾಮಿನ ಅಧ್ಯಾಪನೆಗಳನ್ನು ಉತ್ತಮ ರೀತಿಯಲ್ಲಿ ಅಭ್ಯಸಿಸಿ ಯಾವುದೇ ವಿದೇಶ ರಾಜ್ಯದಲ್ಲಿ ಇಸ್ಲಾಂ ಧರ್ಮವನ್ನು ಪ್ರಭೋಧಿಸಬೇಕೆಂಬ ಉದ್ದೇಶದಲ್ಲಿ ಅವರು ಪಾಕಿಸ್ತಾನಕ್ಕೆ ಬರಲಿರುವರು*. ಇದೇ ರೀತಿ ಇನ್ನೊಬ್ಬ ಉತ್ತಮ ಲೇಖಕನಾದ ಜರ್ಮನ್ ನಿವಾಸಿಯು ತನ್ನ ಭಕ್ತೆಯಾದ ಪತ್ನಿ ಸಮೇತ ಇಸ್ಲಾಂ ಧರ್ಮ ಸೇವೆಗಾಗಿ ಜೀವಿತಾರ್ಪಣೆಗೈಯುವ ಆಶೆ ಪ್ರಕಟಿಸಿದ್ದಾರೆ. ಒಂದು ವೇಳೆ ಅವರೂ ಇಸ್ಲಾಮಿಕ ಅಧ್ಯಾಪನೆಗಳ ಅಭ್ಯಾಸಾರ್ಥ ಪಾಕಿಸ್ತಾನಕ್ಕೆ ಆಗಮಿಸುವರು. ಹಾಗೆಯೇ ಹಾಲೇಂಡಿನ ಒಬ್ಬ ಯುವಕನೂ ಇಸ್ಲಾಂ ಧರ್ಮದ ಸೇವೆಗಾಗಿ ಸ್ವಜೀವಿತವನ್ನರ್ಪಿಸುವ ಇಚ್ಛೆ ಪ್ರಕಟಿಸಿರುವರು. ಶೀಘ್ರವೇ ಅವರು ಯಾವುದಾದರೂ ವಿದೇಶ ರಾಜ್ಯದಲ್ಲಿ ಮಿಶನರಿಯಾಗಿ ನೇಮಿಸಲ್ಪಡುವರು.

ನಿಜವಾಗಿಯೂ ಅಹ್ಮದಿಯಾ ಜಮಾಅತ್ ಒಂದು ಕಿರು

* ಅನಂತರ ಅವರು ಒಬ್ಬ ಮುಸ್ಲಿಂ ಮಿಶನರಿಯಾದರು – ಅನುವಾದಕ

ಸಂಘಟನೆಯಾಗಿದೆ. ಆದರೆ ಅದರ ಮುಖಾಂತರ ಇಸ್ಲಾಮಿಕ ಜಮಾಅತ್ ಸ್ಥಾಪಿಸಲ್ಪಡುವುದೋ ಎಂದು ನೋಡಬೇಕಾಗಿದೆ. ಎಲ್ಲ ರಾಷ್ಟ್ರಗಳಲ್ಲೂ ಜನರು ಅದಕ್ಕೆ ಸದಸ್ಯರಾಗಿ ಸೇರುತ್ತಾ ಇಸ್ಲಾಮಿನ ಸಾರ್ವಲೌಕಿಕವಾದ ಐಕ್ಯತೆಗೆ ತಳಹದಿಯನ್ನು ಹಾಕುತ್ತಿರುವರು. ಎಲ್ಲ ರಾಷ್ಟ್ರಗಳ ರಾಷ್ಟ್ರೀಯ ವ್ಯಕ್ತಿಗಳೂ ಇದರಲ್ಲಿ ಪ್ರವೇಶಿಸತೊಡಗಿರುವರು. ಇಂತಹ ಸಂಘಟನೆಗಳು ಬಹಳ ಚಿಕ್ಕದಾಗಿಯೇ ಪ್ರಾರಂಭಗೊಳ್ಳುತ್ತವೆ. ಆದರೆ ಒಂದು ನಿರ್ದಿಷ್ಟ ಕಾಲದಲ್ಲಿ ಒಮ್ಮಿಂದೊಮ್ಮೆಲೇ ಅದು ಶಕ್ತವೂ ಬಲಿಷ್ಠವೂ ಆಗುವುದು. ಕೆಲವು ದಿವಸಗಳಲ್ಲೇ ಐಕ್ಯದ ಮತ್ತು ಭ್ರಾತೃತ್ವದ ಬೀಜವನ್ನು ಬಿತ್ತುವುದರಲ್ಲಿ ಅದು ಜಯಶಾಲಿಯಾಗುವುದು. ರಾಷ್ಟ್ರೀಯ ಶಕ್ತಿಗಳಿಗೆ ರಾಷ್ಟ್ರೀಯ ಸಂಘಟನೆಯ ಅಗತ್ಯವಿರುವಂತೆ ಧಾರ್ಮಿಕವೂ ನೈತಿಕವೂ ಆದ ಶಕ್ತಿಗಳಿಗೆ ಧಾರ್ಮಿಕವೂ ನೈತಿಕವೂ ಆದ ಸಂಘಟನೆಯ ಆವಶ್ಯಕತೆಯೂ ಇದೆ. ರಾಷ್ಟ್ರೀಯ ವ್ಯವಹಾರಗಳಿಂದ ಅಹ್ಮದಿಯಾ ಸಂಘಟನೆಯು ಬೇರ್ಪಟ್ಟಿರಲು ಕಾರಣ ಆ ಕಾರ್ಯಗಳಲ್ಲಿ ಪ್ರವೇಶಿಸಿದರೆ ತಮ್ಮ ಸ್ವಂತ ಕಾರ್ಯಗಳಿಂದ ವಿಮುಖರಾಗುವರೆಂಬುದೇ ಆಗಿದೆ.

## ಅಹ್ಮದಿಯಾ ಜಮಾಅತಿನ ಕಾರ್ಯಕ್ರಮ

ಇನ್ನು ಉಳಿದಿರುವ ಪ್ರಶ್ನೆಯು ಕಾರ್ಯಕ್ರಮದ ಕುರಿತಾಗಿದೆ. ಈ ವಿಷಯವನ್ನು ಮುಂದಿಟ್ಟು ನೋಡುವುದಾದರೂ ಅಹ್ಮದಿಯಾ ಜಮಾಅತಿನ ಹೊರತು ಬೇರೆ ಯಾವ ಮುಸ್ಲಿಂ ಪಕ್ಷಗಳಿಗೂ ಒಂದು ಸಾರ್ವಲೌಕಿಕವೂ ಸಂಯುಕ್ತವೂ ಆದ ಕಾರ್ಯಕ್ರಮವಿಲ್ಲ. ಇಸ್ಲಾಂ ಧರ್ಮದ ಮೇಲೆ ಕ್ರೈಸ್ತರು ನಡೆಸುತ್ತಿರುವ ಆಕ್ರಮಣಗಳನ್ನು ಅಹ್ಮದಿಯಾ ಜಮಾಅತ್ ಪೂರ್ಣವಾಗಿ ಮನಗಂಡು ಎಲ್ಲ ರಾಜ್ಯಗಳಲ್ಲೂ ಅದನ್ನು ಸಮರ್ಥವಾಗಿ ಎದುರಿಸುತ್ತಲಿದೆ. ಇಂದು ಪ್ರಪಂಚದ ಅತ್ಯಂತ ಬಲಹೀನವೂ, ಆದರೆ ಕೆಲವು ಕಾರಣಗಳಿಂದ ಅತ್ಯಂತ ಬಲಶಾಲಿಯೂ ಆದ ಭೂಖಂಡವಾಗಿದೆ ಆಫ್ರಿಕ. ಇಂದು ಕ್ರೈಸ್ತ ಧರ್ಮವು ತನ್ನ ಸಂಪೂರ್ಣ ಶಕ್ತಿಯೊಂದಿಗೆ ಆಫ್ರಿಕಕ್ಕೆ ಮುನ್ನುಗ್ಗಿ ಅಲ್ಲಿ ಪ್ರವರ್ತಿಸತೊಡಗಿರುವುದು. ಈಗ ಅದು ತನ್ನ ಈ ಉದ್ದೇಶವನ್ನು ಬಹಿರಂಗವಾಗಿಯೂ ಪ್ರಕಟಿಸುತ್ತಲಿದೆ. ಮೊದಲು ಪಾದ್ರಿಗಳ ಗಮನ ಮಾತ್ರವೇ

ಆ ಕಡೆ ತಿರುಗಿತ್ತು. ಅನಂತರ ಇಂಗ್ಲೆಂಡಿನ ಕನ್ಸರ್‌ವೇಟಿವ್ ಪಕ್ಷದ ಗಮನವೂ ಆ ಭೂಖಂಡದತ್ತ ಹರಿಯಿತು. ಯುರೋಪಿನ ಏಳಿಗೆಯು ಆಫ್ರಿಕದ ಜನರ ಸಂಘಟನೆಯನ್ನೂ ಅವರ ಅಭಿವೃದ್ಧಿಯನ್ನೂ ಅವಲಂಬಿಸಿದೆಯೆಂದು ಈಗ ಅದು ಪ್ರಖ್ಯಾಪಿಸತೊಡಗಿದೆ. ಈ ರೀತಿ ಕತ್ತಲೆಯ ಭೂಖಂಡವೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಆಫ್ರಿಕದತ್ತ ಯುರೋಪಿನ ರಾಷ್ಟ್ರಗಳು ಗಮನ ಹರಿಸುತ್ತಾ ಅವರ ಏಳಿಗೆಯಲ್ಲೂ ಅಭಿವೃದ್ಧಿಯಲ್ಲೂ ತೊಡಗಿ ಯುರೋಪಿನ ಕ್ಷೇಮವು ಆಫ್ರಿಕದ ಜನರ ಸಂಘಟನೆಯನ್ನು ಅವಲಂಬಿಸಿರುವುದೆಂದೂ, ಅವರೆಲ್ಲರೂ ಕ್ರೈಸ್ತರರಾಗುವುದು ತಮಗೆ ಹಿತಕರವೂ ಲಾಭದಾಯಕವೂ ಆಗಿರುವುದೆಂದೂ ಯುರೋಪಿನ ರಾಷ್ಟ್ರಗಳು ಮನಗಂಡವು. ಆದರೆ ಇಂದಿಗೆ 24 ವರ್ಷಗಳ ಮೊದಲೇ* ಅಹ್ಮದಿಯರು ಈ ರಹಸ್ಯವನ್ನು ತಿಳಿದುಕೊಂಡು ಆಗಲೇ ಅಲ್ಲಿಗೆ ತಮ್ಮ ಪ್ರಚಾರಕರನ್ನು ಕಳುಹಿಸಿದರು. ಇದರ ಫಲವಾಗಿ ಸಹಸ್ರಾರು ಜನರು ಕ್ರೈಸ್ತ ಧರ್ಮವನ್ನು ತ್ಯಜಿಸಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಇಂದು ಆಫ್ರಿಕದಲ್ಲಿ ಅತ್ಯಂತ ಸುಸಂಘಟಿತವಾಗಿ ಪ್ರವರ್ತಿಸುವ ಇಸ್ಲಾಮಿನ ಏಕಮಾತ್ರ ಜಮಾಅತ್ ಅಹ್ಮದಿಯಾ ಜಮಾಅತಾಗಿದೆ. ಅಹ್ಮದಿಯರನ್ನು ಎದುರಿಸುವುದರಲ್ಲಿ ಕ್ರೈಸ್ತ ಮಿಶನರಿಗಳು ವಿಫಲರಾಗಿ ಹಿಂಜರಿಯತೊಡಗಿರುವರು. ಕ್ರೈಸ್ತ ಮಿಶನರಿಗಳ ಪ್ರಯತ್ನಗಳೆಲ್ಲ ಅಹ್ಮದಿಯಾ ಸಂಘದ ಪರಿಶ್ರಮದ ಫಲವಾಗಿ ವಿಫಲಗೊಂಡಿರುವುದೆಂದು ಅವರ ಪ್ರಕಟಣೆಗಳೆಲ್ಲ ವರದಿ ಮಾಡತೊಡಗಿವೆ. ಅಹ್ಮದಿಯಾ ಜಮಾಅತಿನ ಈ ಇಸ್ಲಾಂ ಧರ್ಮ ಪ್ರಚಾರ ಕಾರ್ಯವು ಇತ್ತೀಚೆಗೆ ಪೂರ್ವ ಆಫ್ರಿಕದಲ್ಲೂ ಪ್ರಾರಂಭಿಸಲ್ಪಟ್ಟಿದೆ. ಈಗ ಅದು ಆರಂಭ ದೆಶೆಯಲ್ಲಿರುವುದರಿಂದ ಪಶ್ಚಿಮ ಆಫ್ರಿಕದಷ್ಟು ವಿಜಯ ಗಳಿಸಿಲ್ಲವಾದರೂ ನಿಧಾನವಾಗಿ ಕ್ರೈಸ್ತರು ಇಸ್ಲಾಂ ಧರ್ಮವನ್ನು ಸ್ವೀಕರಿಸಲು ತೊಡಗಿರುವರು. ಕೆಲವು ವರ್ಷಗಳ ನಂತರ ಅಲ್ಲಿಯೂ ನಮ್ಮ ಮಿಶನರಿಗಳ ಪ್ರವರ್ತನ ಫಲವಾಗಿ ಉತ್ತಮ ಪರಿಣಾಮವುಂಟಾಗಬಹುದು. ಇಂಡೋನೇಶ್ಯಾದಲ್ಲಿಯೂ ಮಲಯದಲ್ಲಿಯೂ ಹಲವು ವರ್ಷಗಳ ಮೊದಲೇ ನಮ್ಮ ಮಿಶನರಿ ಕೇಂದ್ರಗಳು ಸ್ಥಾಪಿತವಾಗಿವೆ. ಅಲ್ಲಿ ಇಸ್ಲಾಮಿನಿಂದ ಪಲಾಯನ ಗೈಯುವವರನ್ನು ಹಿಡಿದು ನಿಲ್ಲಿಸಿ, ಅವರನ್ನು ಸಂಘಟಿಸಿ, ಅವರನ್ನೇ ಶತ್ರುಗಳೆದುರು ಹೋರಾಡುವಂತೆ

* ಇದು 1948ರಲ್ಲಿ ರಚಿಸಿದ ಲೇಖನವಾಗಿದೆ – ಅನುವಾದಕ.

ಅಣಿಗೊಳಿಸುವ ಪ್ರಯತ್ನವು ನಡೆಯುತ್ತಲಿದೆ.

ಇಂದು ಕ್ರೈಸ್ತರ ಅತ್ಯಂತ ದೊಡ್ಡ ಶಕ್ತಿಯು ಅಮೇರಿಕದ ಸಂಯುಕ್ತ ಸಂಸ್ಥಾನವಾಗಿರುವುದಷ್ಟೆ. ಅಲ್ಲಿಯೂ 24 ವರ್ಷಗಳಿಂದ ಅಹ್ಮದಿಯಾ ಮಿಶನ್ ಕಾರ್ಯ ನಿರ್ವಹಿಸುತ್ತಾ ಬರುತ್ತಿದೆ.* ಸಹಸ್ರಗಟ್ಟಲೆ ಅಮೇರಿಕನರು ಇಸ್ಲಾಂ ಧರ್ಮವನ್ನು ಸ್ವೀಕರಿಸಿರುವರು. ಸಾವಿರಾರು ರೂಪಾಯಿಗಳು ಅಲ್ಲಿ ಇಸ್ಲಾಮಿನ ಪ್ರಚಾರ ಕಾರ್ಯಕ್ಕಾಗಿ ವ್ಯಯಿಸಲ್ಪಡುತ್ತಿವೆ. ಅಮೇರಿಕದ ಆರ್ಥಿಕ ವ್ಯವಸ್ಥೆಯೊಡನೆ ಹೋಲಿಸುವುದಾದರೆ ಈ ಸಂಖ್ಯೆಯು ಅತ್ಯಂತ ಕನಿಷ್ಠವೂ, ಅಲ್ಲಿಯ ಪಾದ್ರಿಗಳ ಪ್ರಯತ್ನಗಳೆದುರು ನಮ್ಮ ಈ ಪ್ರಯತ್ನವು ನಗಣ್ಯವೂ ಆಗಿರುವುದು. ಆದರೂ ಅಲ್ಲಿಯೂ ಹೋರಾಟವು ತೊಡಗಿರುವುದೆಂಬುದೂ ಮತ್ತು ವಿಜಯವು ನಮ್ಮ ಕಡೆಗೇ ಇರುವುದೆಂಬುದೂ ಗಮನಾರ್ಹವಾಗಿದೆ. ನಾವು ಕ್ರೈಸ್ತ ಧರ್ಮದವರನ್ನು ಇಸ್ಲಾಮಿನೆಡೆಗೆ ಆಕರ್ಷಿಸಿ ಅವರನ್ನು ಮುಸ್ಲಿಮರನ್ನಾಗಿ ಮಾಡುವುದರಲ್ಲಿ ಯಶಸ್ವಿಯಾಗಿದ್ದೇವೆ. ಆದರೆ, ನಮ್ಮ ಜನರನ್ನು ಅವರು ತಮ್ಮತ್ತ ತಿರುಗಿಸುವುದರಲ್ಲಿ ಅಶಕ್ತರಾಗಿರುವರು. ಸಂಕ್ಷಿಪ್ತವಾಗಿ, ಅಹ್ಮದಿಯಾ ಜಮಾಅತ್ ಎಂಬ ಒಂದು ಹೊಸ ಸಂಘವು ಯಾಕೆ ಸ್ಥಾಪಿತವಾಯಿತು ಎಂದು ಕೇಳುವುದು ಯುಕ್ತವಲ್ಲ. ಬದಲಾಗಿ, ಮುಸ್ಲಿಮರೆಡೆಯಲ್ಲಿ ಒಂದೇ ಒಂದು ಜಮಾಅತ್ ಸಹ ಇಲ್ಲದಿದ್ದಾಗ 'ಅಹ್ಮದಿಯಾ ಜಮಾಅತ್' ಎಂಬ ಹೆಸರಿನಲ್ಲಿ ಒಂದು ಜಮಾಅತ್ ಸ್ಥಾಪಿತವಾಯಿತು ಎಂದು ಹೇಳಬೇಕಾಗಿದೆ. ಇದು ಆಕ್ಷೇಪಾರ್ಹವೋ ಅಥವಾ ಶ್ಲಾಘನೀಯವೋ?

## ಅಹ್ಮದಿಯರು ಇತರ ಸಂಘಟನೆಗಳಿಂದ ಪ್ರತ್ಯೇಕವಾಗಿರಲು ಕಾರಣ

ಹೀಗಿದ್ದರೂ ಇಂತಹ ಒಂದು ಪ್ರತ್ಯೇಕ ಜಮಾಅತನ್ನು ಸ್ಥಾಪಿಸುವ ಅಗತ್ಯವೇನು? ಇದೇ ವಿಷಯಗಳನ್ನು ಇತರ ಮುಸ್ಲಿಮರಿಗೆ ಬೋಧಿಸಿದರೆ ಸಾಲದೇ? ಎಂದೂ ಕೆಲವರು ಹೇಳುವುದಿದೆ. ಇದಕ್ಕಿರುವ ಯೋಗ್ಯ ಉತ್ತರವು ಇದಾಗಿದೆ: ಒಬ್ಬ ಸೇನಾನಿಗೆ ಸೈನ್ಯಕ್ಕೆ ಸೇರಿದ ವ್ಯಕ್ತಿಗಳನ್ನು ಮಾತ್ರವೇ ಯುದ್ಧರಂಗಕ್ಕೆ ಕಳುಹಿಸಲು ಸಾಧ್ಯವಾಗುವುದು. ಸೈನ್ಯಕ್ಕೆ ಸೇರದವರನ್ನು ಯುದ್ಧರಂಗಕ್ಕೆ ಕಳುಹಿಸಲು ಆ ಸೇನಾನಿಗೆ ಹೇಗೆ ತಾನೆ ಸಾಧ್ಯ? ಒಂದು ಪ್ರತ್ಯೇಕ

* ಇದು 1948ರಲ್ಲಿ ರಚಿಸಿದ ಲೇಖನವಾಗಿದೆ – ಅನುವಾದಕ.

ಜಮಾಅತನ್ನು ರೂಪಿಸದೆ ಅಹ್ಮದಿಯಾ ಸ್ಥಾಪಕರು ಯಾರ ಮುಖಾಂತರ ಕಾರ್ಯ ನಿರ್ವಹಿಸಬೇಕು? ಮತ್ತು ಯಾರೊಡನೆ ಆಜ್ಞಾಪಿಸಬೇಕು? ಅದೇ ರೀತಿ ಅವರ ಖಲೀಫರೂ ಯಾರ ಮೂಲಕ ಕಾರ್ಯ ನಿರ್ವಹಿಸಬೇಕು? ಮತ್ತು ಅದಕ್ಕಾಗಿ ಯಾರೊಡನೆ ಆಜ್ಞಾಪಿಸಬೇಕು? ಅವರು ಪೇಟೆಗಳಲ್ಲಿ ಸಂಚರಿಸುತ್ತಾ ಕಣ್ಣಿಗೆ ಬಿದ್ದ ಪ್ರತಿ ಮುಸ್ಲಿಮನೊಡನೆ "ಇಂತಿಂತಹ ಸ್ಥಳದಲ್ಲಿ ಇಸ್ಲಾಮಿನ ಸೇವೆಗೆ ಜನರ ಅಗತ್ಯವಿದೆ, ನೀವು ಅಲ್ಲಿಗೆ ಹೋಗಬೇಕು" ಎಂದು ಆಜ್ಞಾಪಿಸಿದರೆ, ಅದನ್ನು ಕೇಳಿದ ಆ ವ್ಯಕ್ತಿಗಳಲ್ಲಿ ಪ್ರತಿಯೋರ್ವನೂ "ನಿಮ್ಮ ಮಾತನ್ನು ಕೇಳಲು ನಾನು ತಯಾರಿಲ್ಲ"ವೆಂದು ಉತ್ತರಿಸುತ್ತಾ ಮುಂದುವರಿದರೆ ಕಾರ್ಯ ನಿರ್ವಹಣೆ ಹೇಗೆ ನಡೆಯುವುದು? ಯಾವುದೇ ವ್ಯವಸ್ಥಿತ ಕಾರ್ಯಗಳ ನಿರ್ವಹಣೆಗೂ ಒಂದು ಸುಸಂಘಟಿತವಾದ ಸಂಘದ ಆವಶ್ಯಕತೆಯಿರುವುದೆಂಬುದು ಸರ್ವಸಮ್ಮತವಾದ ಒಂದು ತತ್ವವಾಗಿದೆ. ಸುಸ್ಥಾಪಿತವಾದ ಒಂದು ಜಮಾಅತ್ ಇಲ್ಲವಾದರೆ ವ್ಯವಸ್ಥಿತವಾದ ಯಾವ ಕಾರ್ಯವನ್ನೂ ನಿರ್ವಹಿಸಲು ಸಾಧ್ಯವಿಲ್ಲ.

ಸಂಘವು ಇರಲೇಬೇಕೆಂದಾದರೂ ಇತರರೊಡನೆ ಬೆರೆತು ಅವರೊಂದಿಗೆ ಪ್ರವರ್ತಿಸಬಾರದೇ ಎಂದು ಯಾರಾದರೂ ಕೇಳಬಹುದು. ಜೀವನವನ್ನೇ ಅಪಾಯಕೊಡ್ಡುವ ಈ ಕಾರ್ಯಕ್ಕೆ ಎಲ್ಲರೂ ತಯಾರಾಗುವರೇ? ಉನ್ಮತ್ತರಂತೆ ವರ್ತಿಸಲು ತಯಾರಿರುವವರು ಮಾತ್ರವೇ ಇಂತಹ ಕಾರ್ಯಗಳನ್ನು ಮಾಡುವರು. ಇಂತಹ ಉನ್ಮತ್ತರನ್ನು ಬುದ್ಧಿವಂತರಿಂದ ಪ್ರತ್ಯೇಕವಿಡುವುದು ಅತ್ಯಂತ ಅಗತ್ಯವಾಗಿದೆ. ಸ್ವತಃ ಬುದ್ಧಿವಂತರೆಂದು ನಟಿಸುವ ಇವರು ತಮ್ಮಂತೆಯೇ ಈ ಉತ್ಸುಕರನ್ನೂ ಮಾರ್ಪಡಿಸಿದಲ್ಲಿ ಇಸ್ಲಾಮಿಗಾಗಿ ಇಷ್ಟೆಲ್ಲ ಕಾರ್ಯಗಳನ್ನು ಮಾಡುವವರಾದರೂ ಯಾರು? ಅದೂ ಅಲ್ಲದೆ, ಅಹ್ಮದಿಯರು ಇತರರಿಂದ ಪ್ರತ್ಯೇಕವಾಗಿರಲು ಇನ್ನೊಂದು ಕಾರಣ, ಅದರಿಂದ ಇತರರ ಹೃದಯದಲ್ಲಿ ಒಂದು ತರದ ಕುತೂಹಲವುಂಟಾಗಿ ಅವರು ಇದರ ಕುರಿತು ಅನ್ವೇಷಣೆಯಲ್ಲಿ ತೊಡಗುವರು. ಹಾಗೆ ಅದನ್ನು ನಾಶಪಡಿಸಲು ಶ್ರಮಿಸುವವರು ಕೂಡ ಒಂದು ದಿನ ಅದರ ಯಥಾರ್ಥತೆಯನ್ನು ತಿಳಿಯುವರು. ಒಟ್ಟಿನಲ್ಲಿ, ಇಂತಹ ಅಪಾದನೆಗಳೆಲ್ಲವೂ ವಿವೇಚನಾ ಶೂನ್ಯದ ಫಲ ಮಾತ್ರವಾಗಿದೆ. ಬುದ್ಧಿಯನ್ನು ಉಪಯೋಗಿಸಿ ಆಲೋಚಿಸಿದಲ್ಲಿ ಅಹ್ಮದಿಯರು ಸ್ವೀಕರಿಸುವ

ಮಾರ್ಗವೇ ಸರಿಯಾದುದೆಂದು ಸುಲಭದಲ್ಲಿಯೇ ತಿಳಿದುಕೊಳ್ಳಬಹುದು. ಈ ವಿಧಾನದಿಂದ ಮಾತ್ರವೇ ಇಸ್ಲಾಮಿಗಾಗಿ ಸರ್ವತ್ಯಾಗ ಮಾಡಲು ಸಿದ್ಧವಾಗಿರುವ ಒಂದು ಜಮಾಅತನ್ನು ರೂಪೀಕರಿಸಲು ಸಾಧ್ಯವಾಗಬಹುದು. ಈ ವಿಧಾನದಲ್ಲಿ ಕಾರ್ಯ ನಿರ್ವಸಹಿಸಿದರೆ ಮಾತ್ರವೇ ಅದರ ಸಂಖ್ಯಾಬಲವು ದಿನೇ ದಿನೇ ವರ್ಧಿಸುವುದು. ಕೊನೆಗೆ, ಅದೋ! ಇಸ್ಲಾಂ ಸುಶಕ್ತವಾಯಿತೆಂದು "ಕುಫ್ರ್"ಗೆ ಬೋಧ್ಯವಾಗುವುದು. ಆಗ ಅದು ತನ್ನ ಸಂಪೂರ್ಣ ಶಕ್ತಿಯೊಂದಿಗೆ ಇಸ್ಲಾಮಿಗೆದುರಾಗಿ ಹೋರಾಡಲು ಮುಂದೆ ಬರುವುದು. ಆದರೆ ಅಂದು ಹೋರಾಟಕ್ಕೆ ಅವರಿಗೆ ಕಾಲವು ಯೋಗ್ಯವಾಗಿರದು. ರಣಾಂಗಣವು ಇಸ್ಲಾಮಿನ ಕೈವಶವಾಗಿ "ಕುಫ್ರ್" ಪರಾಭವಗೊಳ್ಳುವುದು.

ರಾಷ್ಟ್ರೀಯ ಹೋರಾಟಗಾರರಿಗೂ ನಾವು ತಡೆಯನ್ನುಂಟು ಮಾಡುವುದಿಲ್ಲ. "ನಮ್ಮ ವರ್ತನೆಗಳು ನಿಮಗೆ ಅರ್ಥವಾಗುವುದಿಲ್ಲವೆಂದಾದರೆ ನಿಮ್ಮ ಕಾರ್ಯಗಳನ್ನು ನೀವು ಮುಂದುವರಿಸಿರಿ. ಆದರೆ ನಮ್ಮ ಮಾರ್ಗದಲ್ಲಿ ಆತಂಕಗಳನ್ನು ಮಾತ್ರ ಉಂಟುಮಾಡದಿರಿ." ಎಂದಷ್ಟೆ ನಮಗೆ ಹೇಳಲಿರುವುದು. ಯಾರಿಗೆ ಅವರ ಪ್ರವೃತ್ತಿಯೂ ಕಾರ್ಯಕ್ರಮಗಳೂ ಒಳ್ಳೆಯದೆಂದು ತೋರುವುದೋ ಅವರು ರಾಜಕೀಯ ಮುಂದಾಳುಗಳನ್ನನುಸರಿಸಲಿ. ಯಾರಿಗೆ ನಮ್ಮ ಪ್ರವೃತ್ತಿಯೂ ನಮ್ಮ ಕಾರ್ಯಕ್ರಮಗಳೂ ಒಳ್ಳೆಯದೆಂದು ತೋರುವುದೋ ಅವರು ನಮ್ಮೊಡನೆ ಬರಲಿ. ರಾಜಕೀಯ ಪ್ರವರ್ತಕರ ಮಾರ್ಗದಲ್ಲಾದರೆ ತ್ಯಾಗ ಕಡಿಮೆಯೂ ಕೀರ್ತಿ ಅಧಿಕವೂ ಆಗಿದೆ. ಆದರೆ ನಮ್ಮ ಮಾರ್ಗದಲ್ಲಿ ತ್ಯಾಗ ಅಧಿಕವೂ ಕೀರ್ತಿ ಕಡಿಮೆಯೂ ಇದೆ. ಅವರಿಗೆ ಅವರ ದುಡಿಮೆಯ ಪ್ರತಿಫಲವೂ ನಮಗೆ ನಮ್ಮ ದುಡಿಮೆಯ ಪ್ರತಿಫಲವೂ ಲಭಿಸುವುದು. ಯಾರ ಬುದ್ಧಿಗೆ ಇಸ್ಲಾಮಿನ ತಿರುಳು ಮತ್ತು ಅದರ ನೈಜತೆ ಅಗತ್ಯವೆಂದು ತೋರುವುದೋ ಅವರು ನಮ್ಮೊಡನೆ ಬಂದು ಸೇರುವರು. ಬಾಹ್ಯವಾದ ರಾಜ್ಯಾಧಿಕಾರವೂ ಕೀರ್ತಿಯೂ ಅಗತ್ಯವೆಂದು ತೀರ್ಮಾನಿಸುವವರೆಲ್ಲ ಅವರೊಡನೆ ಸೇರಿಕೊಳ್ಳುವರು. ಅಂತಿರುವಾಗ ನಾವೇಕೆ ಪರಸ್ಪರ ಕಾದಾಡಿಕೊಳ್ಳಬೇಕು. ಎರಡು ಪಕ್ಷಗಳೂ ಇಸ್ಲಾಮಿಗಾಗಿ ದುಃಖಿಸುತ್ತಾ ಶ್ರಮಿಸುತ್ತಿರುವೆವು. ವೇದನೆ ಮಾತ್ರ ವಿವಿಧ ಅಂಗಗಳಲ್ಲಿ ಅನುಭವವಾಗುತ್ತಿದೆ. ಅವರಿಗೆ ನೋವು ತಲೆಯಲ್ಲಾದರೆ ನಮಗೆ ನೋವು ಹೃದಯದಲ್ಲಿ.

## ಆಧ್ಯಾತ್ಮಿಕ ದೃಷ್ಟಿಕೋನ

ಒಂದು ಹೊಸ ಜಮಾಅತ್ ಸ್ಥಾಪಿಸಲು ಕಾರಣವೇನೆಂಬ ವಿಷಯದ ಕುರಿತು ಇದುವರೆಗೂ ನಾನು ಕೇವಲ ಬುದ್ಧಿಪರವಾದ ಉತ್ತರವನ್ನು ಮಾತ್ರವೇ ಹೇಳಿರುವೆನು. ಇನ್ನು ಆಧ್ಯಾತ್ಮಿಕವಾಗಿ ಇದರ ಉತ್ತರವನ್ನು ಹೇಳುವೆನು. ನನ್ನ ಅಭಿಪ್ರಾಯದ ಪ್ರಕಾರ ಈ ವೀಕ್ಷಣೆಯೇ ಸರಿಯೂ ಯಥಾರ್ಥವೂ ಆಗಿರುವುದು.

ಆಧ್ಯಾತ್ಮಿಕ ದೃಷ್ಟಿಕೋನದಲ್ಲಿ ನನಗೆ ಹೇಳಲಿರುವ ಉತ್ತರವು ಇದಾಗಿದೆ: ಲೋಕದಲ್ಲಿ ಅಧರ್ಮವು ವ್ಯಾಪಿಸಿ ಧಾರ್ಮಿಕತೆ ಅಂತರ್ಧಾನವಾದಾಗಲೆಲ್ಲ, ಜನರು ಐಹಿಕ ಕಾರ್ಯಗಳಿಗೆ ಪಾರಮಾರ್ಥಿಕ ತತ್ವಗಳಿಗಿಂತ ಪ್ರಾಮುಖ್ಯತೆಯನ್ನೀಯಲು ಪ್ರಾರಂಭಿಸಿದಾಗಲೆಲ್ಲ ಅವರಿಗೆ ಆಧ್ಯಾತ್ಮಿಕ ಪ್ರಕಾಶವನ್ನಿತ್ತು ಅವರನ್ನು ಸನ್ಮಾರ್ಗಕ್ಕೊಯ್ಯಲು ದೇವನು ಒಬ್ಬ ದೂತನನ್ನು ನಿಯೋಗಿಸುವನು ಎಂಬುದು ಶಾಶ್ವತವಾದ ಅವನ ಒಂದು ನಿಯಮವಾಗಿದೆ. ಹೀಗೆ ನಿಯೋಗಿಸಲ್ಪಡುವ ಪ್ರವಾದಿಗಳಲ್ಲಿ ಕೆಲವರು ಹೊಸ ನ್ಯಾಯಪ್ರಮಾಣ ಗ್ರಂಥವನ್ನು ತರುವವರೂ, ಇನ್ನು ಕೆಲವರು ನೆಲೆಸಿರುವ ಪೂರ್ವ ಧರ್ಮ ಗ್ರಂಥವನ್ನೇ ಪ್ರಭೋದಿಸಲಿಕ್ಕಾಗಿ ನಿಯೋಗಿಸಲ್ಪಡುವವರೂ ಆಗಿರುತ್ತಾರೆ. ಅಲ್ಲಾಹನ ಈ ನಿಯಮದ ಕುರಿತು ಪವಿತ್ರ ಖುರ್‌ಆನಿನ ಹಲವೆಡೆಗಳಲ್ಲಿ ವಿವಿಧ ರೀತಿಯಲ್ಲಿ ವಿವರಿಸಲ್ಪಟ್ಟಿದೆ. ಅಲ್ಲಾಹನು ತನ್ನ ಈ ಅನುಗ್ರಹದ ಕುರಿತು ಆ ಪವಿತ್ರ ಗ್ರಂಥದಲ್ಲಿ ಹಲವು ಸಾರಿ ಮನುಷ್ಯರಿಗೆ ನೆನಪಿಸಿ ಕೊಟ್ಟಿರುವನು. ಅಲ್ಲಾಹನು ಮಹೋನ್ನತನೂ ಅತ್ಯಂತ ಶಕ್ತಿಶಾಲಿಯೂ ಆಗಿರುವನು. ಅವನೆದುರು ಮನುಷ್ಯರು ಒಂದು ಕೀಟವೆಂದಲ್ಲ, ಅದಕ್ಕಿಂತಲೂ ತುಚ್ಛವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಅಲ್ಲಾಹನ ಪ್ರತಿಯೊಂದು ಕಾರ್ಯವೂ ಅವನ ಅಪಾರವಾದ ಬುದ್ಧಿವೈಭವವನ್ನು ಪ್ರಕಟಪಡಿಸುವುದೆಂಬುದರಲ್ಲಿಯೂ ಸಂಶಯವಿಲ್ಲ. ಉದ್ದೇಶ ರಹಿತವೂ ಪ್ರಯೋಜನಶೂನ್ಯವೂ ಆದ ಯಾವ ಕಾರ್ಯವನ್ನೂ ಅವನು ಮಾಡುವುದಿಲ್ಲ. ಪವಿತ್ರ ಖುರ್‌ಆನಿನಲ್ಲಿ ಅವನು  ರೀತಿ ಹೇಳಿರುವನು:

وَمَا خَلَقْنَا السَّمٰوٰتِ وَالْاَرْضَ وَمَا بَيْنَهُمَا لٰعِبِيْنَ

"ಆಕಾಶಗಳನ್ನೂ ಭೂಮಿಯನ್ನೂ ಅವುಗಳ ಮಧ್ಯದಲ್ಲಿರುವ ಎಲ್ಲವನ್ನೂ

ವಿನೋದಕ್ಕಾಗಿ ನಾವು ಸೃಷ್ಟಿಸಿಲ್ಲ" (44:39). ಅವುಗಳ ನಿರ್ಮಾಣದಲ್ಲಿ ಮಹತ್ತಾದ ಉದ್ದೇಶಗಳು ಅಡಕವಾಗಿವೆ. ಮನುಷ್ಯನು ಅಲ್ಲಾಹನ ಗುಣಗಳನ್ನು ಪ್ರತ್ಯಕ್ಷಗೊಳಿಸಿ ಅವನ ಒಂದು ಪ್ರತಿರೂಪವಾಗಿ ಮಾರ್ಪಡುತ್ತಾ ಆಧ್ಯಾತ್ಮಿಕವಾಗಿ ಮೇಲೇರಲು ಅಶಕ್ತರಾದವರಿಗೆ ಅಲ್ಲಾಹನ ಕುರಿತಾದ ಜ್ಞಾನ ಪ್ರಕಾಶವನ್ನೀಯುವುದೇ ಈ ಸೃಷ್ಟಿಯ ಉದ್ದೇಶವಾಗಿದೆ.

ಮನುಷ್ಯ ಸೃಷ್ಟಿಯ ಪ್ರಾರಂಭದ ಮೊದಲ್ಗೊಂಡು ಇಂದಿನವರೆಗೂ ಅಲ್ಲಾಹನ ಈ ನಿಯಮವು ಜಾರಿಯಲ್ಲಿದೆ. ವಿವಿಧ ಕಾಲಗಳಲ್ಲಿ ಅಲ್ಲಾಹನ ಇಂತಹ ಪ್ರತಿ ಪುರುಷರು ವಿವಿಧ ರೂಪಗಳಲ್ಲಿ ಆವಿರ್ಭವಿಸಿರುವರು. ಒಮ್ಮೆ ಅವನ ಆ ಗುಣವು ಆದಮರ(ಅ) ಮುಖಾಂತರ ಪ್ರತ್ಯಕ್ಷವಾದರೆ, ಮತ್ತೊಮ್ಮೆ ಅದು ನೂಹರ(ಅ) ಮೂಲಕ ಪ್ರತ್ಯಕ್ಷಪಟ್ಟಿತು. ಒಮ್ಮೆ ಇಬ್ರಾಹೀಮರ(ಅ) ಮೂಲಕ ಅದು ಪ್ರಕಾಶಿತವಾದರೆ, ಇನ್ನೊಮ್ಮೆ ಮೂಸಾ(ಅ) ಮೂಲಕ ಅದು ಗೋಚರವಾಯಿತು. ಒಮ್ಮೆ ದಾವೂದ್(ಅ) ದೇವನ ಮುಖವನ್ನು ಮನುಷ್ಯರಿಗೆ ತೋರಿಸಿಕೊಟ್ಟರೆ ಇನ್ನೊಮ್ಮೆ ಈಸಾ(ಅ) ಅಲ್ಲಾಹನ ಈ ಪ್ರಕಾಶವನ್ನು ತನ್ನಲ್ಲಿ ತೋರಿಸಿಕೊಟ್ಟರು. ಕೊನೆಗೆ ಅವರೆಲ್ಲರಿಗಿಂತಲೂ ಉನ್ನತವೂ ಸಂಪೂರ್ಣವೂ ಆದ ರೀತಿಯಲ್ಲಿ ಅಲ್ಲಾಹನ ಈ ಉತ್ಕೃಷ್ಟ ಗುಣಮಹಾತ್ಮೆಗಳನ್ನು ಮುಹಮ್ಮದ್ ಪೈಗಂಬರರು(ಸ) ಪ್ರಕಾಶಮಾನವಾಗಿ ತೋರಿಸಿಕೊಟ್ಟರು. ಸಂಕ್ಷಿಪ್ತವೂ ಸವಿಸ್ತಾರವೂ ವೈಯಕ್ತಿಕವೂ ಸಾಮೂಹಿವೂ ಆದ ರೀತಿಯಲ್ಲಿ ಅ ಮಹಾ ಪುರುಷರಿಂದ ಅದು ಪ್ರತ್ಯಕ್ಷವಾಯಿತು. ಸೂರ್ಯ ಸಮಾನವಾದ ಆ ಪ್ರಕಾಶದ ಮುಂದೆ ಇತರ ಪ್ರವಾದಿಗಳೆಲ್ಲರೂ ನಕ್ಷತ್ರಗಳಂತೆ ಆದರು. ರಸೂಲ್ ಕರೀಮರ(ಸ) ಆವಿರ್ಭಾವದೊಂದಿಗೆ ಮೊದಲಿನ ಎಲ್ಲ ಶರೀಅತ್ (ಧರ್ಮಶಾಸ್ತ್ರ)ಗಳೂ ಕೊನೆಗೊಂಡವು. ಧರ್ಮಶಾಸ್ತ್ರದೊಂದಿಗೆ ಅವತರಿಸುವ ಪ್ರವಾದಿಗಳ ಅವತಾರವೂ ನಿಲ್ಲಿಸಲ್ಪಟ್ಟಿತು. ಪಕ್ಷಪಾತವೋ ವ್ಯಕ್ತಿ ಗೌರವವೋ ಇದಕ್ಕೆ ಕಾರಣವಲ್ಲ. ಹಝ್ರತ್ ಪೈಗಂಬರ್(ಸ) ತಂದ ಧರ್ಮಶಾಸನವು ಸಕಲ ಮಾನವ ಕುಲದ ಎಲ್ಲ ಆವಶ್ಯಕತೆಗಳನ್ನೂ ಪೂರೈಸಲು ಪರ್ಯಾಪ್ತವೂ ಸ್ಥೂಲವೂ ಸೂಕ್ಷ್ಮವೂ ಆದ ಸಕಲ ವಿಷಯಗಳನ್ನು ಒಳಗೊಂಡುದೂ ಆಗಿರುವುದೇ ಇದಕ್ಕೆ ಕಾರಣವಾಗಿದೆ. ಹೀಗೆ ಅಲ್ಲಾಹನಿಂದ ಬರಬೇಕಾದ ಶರೀಅತ್ ನಿಯಮವು ಸಂಪೂರ್ಣ

ರೂಪದಲ್ಲಿಯೇ ಅವತೀರ್ಣಗೊಂಡಿತಾದರೂ ಮನುಷ್ಯರ ಕುರಿತು, ಅವರು ಸನ್ಮಾರ್ಗದಿಂದ ದೂರವಾಗಲಾರರೆಂದೂ ಅವರು ನಿಜವಾದ ಧರ್ಮ ನಿಯಮಗಳನ್ನು ಉಪೇಕ್ಷಿಸಲಾರರೆಂದೂ ಗ್ರಹಿಸತಕ್ಕ ಯಾವ ಭರವಸೆಯೂ ನೀಡಲ್ಪಟ್ಟಿಲ್ಲ. ಬದಲು, ಈ ಸಂಬಂಧವಾಗಿ ಪವಿತ್ರ ಖುರ್‌ಆನಿನಲ್ಲಿ ಈ ರೀತಿ ಪ್ರತಿಪಾದಿಸಲ್ಪಟ್ಟಿದೆ: **ಯುದಬ್ಬಿರುಲ್ ಅಮ್‌ರ ಮಿನಸ್ಸಮಾಇ ಇಲಲ್ ಅರ್‌ಝಿ ಸುಮ್ಮ ಯಅ್‌ರುಜು ಇಲೈಹಿ ಫೀ ಯೌಮಿನ್ ಕಾನ ಮಿಖ್‌ದಾರುಹು ಅಲ್‌ಫ ಸನತಿನ್ ಮಿಮ್ಮಾ ತಉದ್ದೂನ್**. "ಆಕಾಶದಿಂದ ತನ್ನ ಈ ಶರೀಅತನ್ನು ಅಲ್ಲಾಹನು ಭೂಮಿಯಲ್ಲಿ ಸ್ಥಾಪಿಸುವನು. ಜನವಿರೋಧವು ಅದರ ಮಾರ್ಗದಲ್ಲಿ ತಡೆಯಾಗಲಾರದು. ಆದರೆ, ಕಾಲಕ್ರಮೇಣ ಅದು ಆಕಾಶದೆಡೆಗೆಯೇ ಏರತೊಡಗಿ ಒಂದು ಸಾವಿರ ವರ್ಷಗಳಲ್ಲಿ ಸಂಪೂರ್ಣ ನಿರ್ಗಮಿಸುವುದು." (32:6)

ಧರ್ಮವು ಸುಸ್ಥಾಪಿತವಾಗಿ ನೆಲೆಗೊಳ್ಳುವ ಕಾಲ ಮುನ್ನೂರು ವರ್ಷಗಳೆಂದು ಹಝ್ರತ್ ಪೈಗಂಬರರ(ಸ) ಹದೀಸಿನಿಂದ ಮನವರಿಕೆಯಾಗುತ್ತದೆ. ನಾನು ಆ ಹದೀಸನ್ನು ಮೊದಲೊಮ್ಮೆ ಉದಾಹರಿಸಿರುವೆನು. ಪವಿತ್ರ ಖುರ್‌ಆನ್ ಕೂಡ ಆ ಕಾಲ ನಿರ್ಣಯವನ್ನು – **ಅಲಿಫ್ ಲಾಮ್ ಮೀಮ್ ರಾ** – ಎಂಬ ಅಕ್ಷರ ಸಮುಚ್ಚಯದ ಮೂಲಕ 271ವರ್ಷಗಳೆಂದು ತಿಳಿಸಿಕೊಟ್ಟಿದೆ. ಇಸ್ಲಾಂ ಧರ್ಮವು ಸ್ಥಾಪಿತವಾಗಿ ನೆಲೆನಿಂತ ಈ 271ವರ್ಷಗಳನ್ನೂ ಅನಂತರ ಅದು ಆಕಾಶಕ್ಕೆತ್ತಲ್ಪಡಲು ಬೇಕಾಗಿರುವ 1000ವರ್ಷಗಳನ್ನೂ ಕೂಡಿಸಿದಲ್ಲಿ ಇಸ್ಲಾಮಿನ ಆಂತರಿಕ ಚೈತನ್ಯವು ಸಂಪೂರ್ಣ ನಿರ್ನಾಮವಾಗುವ ಕಾಲವು ಪವಿತ್ರ ಖುರ್‌ಆನಿನ ಹೇಳಿಕೆ ಪ್ರಕಾರ 1271 ವರ್ಷಗಳೆಂದು ಅಥವಾ ಇಸ್ಲಾಮಿ ಶಕ 13ನೇ ಶತಮಾನದ ಅಂತ್ಯಭಾಗವೆಂದು ಗ್ರಾಹ್ಯವಾಗುತ್ತದೆ*. ಅಂತಹ ಆಪತ್ಕಾಲದಲ್ಲಿ ಪ್ರಪಂಚವನ್ನು ಶೈತಾನೀ ಶಕ್ತಿಯಿಂದ ರಕ್ಷಿಸಲಿಕ್ಕೂ ಅಲ್ಲಾಹನ

* ಇಸ್ಲಾಂ ಧರ್ಮದ ಆಧ್ಯಾತ್ಮಿಕ ಚೈತನ್ಯವು ಅಂತರ್ಧಾನವಾದಾಗ ಅದರ ಪುನರುಜ್ಜೀವನಕ್ಕಾಗಿ ಇಮಾಂ ಮಹ್‌ದಿಯನ್ನು ಅಲ್ಲಾಹನು ನಿಯೋಜಿಸುವನೆಂದೂ ಅದು ಹಿಜರಿ ಶಕೆ 1240ರ ನಂತರವಾಗಿರುವುದೆಂದೂ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹೇಳಿರುವ ಒಂದು ಹದೀಸನ್ನು ಹುಸೈಫತಿಬ್ನು ಯಮಾನ್ ಈ ರೀತಿ ವರದಿ ಮಾಡಿರುವರು: "ಒಂದು ಸಾವಿರದ ಇನ್ನೂರ ನಲ್ವತ್ತು ವರ್ಷಗಳ ನಂತರ ಅಲ್ಲಾಹನು ಇಮಾಂ ಮಹ್‌ದಿಯನ್ನು ನಿಯೋಜಿಸುವನು." (ಅನ್ನಜ್‌ಮುಸ್ಸಾಖಿಬ್ ಸಂಪುಟ – 2, ಪುಟ 209) – ಅನುವಾದಕ

ಅಧಿಕಾರವನ್ನು ಭೂಮಿಯಲ್ಲಿ ನೆಲೆನಿಲ್ಲಿಸಲಿಕ್ಕೂ ಅವನ ನಿಯಮದ ಪ್ರಕಾರ ಒಬ್ಬ ಪ್ರವಾದಿಯು ಖಂಡಿತವಾಗಿಯೂ ಕಳುಹಿಸಲ್ಪಡಬೇಕಾಗಿದೆ. ಅಲ್ಲಾಹನ ಕಡೆಯಿಂದ ಒಬ್ಬರು ಈ ಕಾಲದಲ್ಲಿ ಬರಬೇಕಾದುದು, ಬರುವ ವ್ಯಕ್ತಿಯು ಯಾರಾದರೂ, ಆವಶ್ಯವೂ ಅತ್ಯಗತ್ಯವೂ ಆಗಿದೆ.

ಹಝ್ರತ್ ಆದಮರ(ಅ) ಅನುಯಾಯಿಗಳು ಮಾರ್ಗಭ್ರಷ್ಟರಾದಾಗ ಅವರನ್ನೂ, ಹಝ್ರತ್ ನೂಹರ(ಅ) ಅನುಯಾಯಿಗಳು ಸನ್ಮಾರ್ಗದಿಂದ ದೂರವಾದಾಗ ಅವರನ್ನೂ, ಹಝ್ರತ್ ಇಬ್ರಾಹೀಮರ(ಅ) ಅನುಚರರು ದುರ್ಮಾರ್ಗಿಗಳಾದಾಗ ಅವರನ್ನೂ, ಹಝ್ರತ್ ಮೂಸಾರ(ಅ) ಅನುಚರರು ಸನ್ಮಾರ್ಗ ವಿಮುಖರಾದಾಗ ಅವರನ್ನೂ, ಹಝ್ರತ್ ಈಸಾರ(ಅ) ಅನುಯಾಯಿಗಳು ಮಾರ್ಗಭ್ರಷ್ಟರಾದಾಗ ಅವರನ್ನೂ ಅಲ್ಲಾಹನು ಜ್ಞಾಪಿಸಿಕೊಂಡು ಅವರಿಗೆಲ್ಲ ಸನ್ಮಾರ್ಗಕ್ಕಿರುವ ಏರ್ಪಾಡನ್ನುಂಟು ಮಾಡಿದನು. ಹಾಗಿರುವಾಗ ನಬಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಉಮ್ಮತಿಗಳು ಮಾರ್ಗಭ್ರಷ್ಟರಾದಾಗ ಅಲ್ಲಾಹನು ಅವರನ್ನು ಮರೆತನೆಂದೂ, ಅವರ ಸನ್ಮಾರ್ಗಕ್ಕೆ ಯಾವ ಏರ್ಪಾಡನ್ನೂ ಉಂಟುಮಾಡಲಾರನೆಂದೂ ಗ್ರಹಿಸುವುದಾದರೂ ಹೇಗೆ? ಸಯ್ಯದುನಾ ಹಝ್ರತ್ ಮುಹಮ್ಮದ್ ಮುಸ್ತಫಾರ(ಸ) ಅನುಯಾಯಿಗಳ ಕುರಿತು, ಅವರಲ್ಲಿ ತಲೆದೋರುವ ಸಣ್ಣಪುಟ್ಟ ದೋಷಗಳನ್ನು ಕೂಡ ನಿವಾರಿಸಲಿಕ್ಕಾಗಿ ಪ್ರತಿ ಶತಮಾನಗಳ ಆದಿಭಾಗದಲ್ಲೂ ಮುಜದ್ದಿದ್‌ಗಳು (ಧರ್ಮೋದ್ಧಾರಕರು) ನಿಯೋಗಿಸಲ್ಪಡುವರೆಂದು ಕೂಡ ಭವಿಷ್ಯ ನುಡಿಯಲ್ಪಟ್ಟಿದೆ. ನೋಡಿರಿ, ರಸೂಲ್ ಕರೀಂ(ಸ) ಈ ರೀತಿ ಹೇಳಿರುವರು: "**ಇನ್ನಲ್ಲಾಹ ಯಬ್‌ಅಸು ಲಿಹಾಧಿಹಿಲ್ ಉಮ್ಮತಿ ಅಲಾ ರಅ್‌ಸಿ ಕುಲ್ಲಿ ಮಿಅತಿ ಸನತಿನ್ ಮನ್ ಯುಜದ್ದಿದು ಲಹಾ ದೀನಹಾ**" ಅಂದರೆ, "ಖಂಡಿತವಾಗಿಯೂ ಈ ಸಮುದಾಯದಲ್ಲಿ ಪ್ರತಿ ಶತಮಾನದ ಆದಿಯಲ್ಲೂ ಅವರ ಧರ್ಮವನ್ನು ಸುಧಾರಿಸಲಿಕ್ಕಾಗಿ ಮುಜದ್ದಿದ್‌ಗಳನ್ನು ಅಲ್ಲಾಹನು ನಿಯೋಗಿಸುವನು." (ಅಬೂದಾವೂದ್).

ಹೀಗೆ ಸಣ್ಣಪುಟ್ಟ ದೋಷಗಳನ್ನು ಕೂಡ ನಿವಾರಿಸಲಿಕ್ಕಾಗಿ ಈ ಸಮುದಾಯದಲ್ಲಿ ಮುಜದ್ದಿದ್‌ಗಳು ಅಲ್ಲಾಹನಿಂದ ನಿಯೋಗಿಸಲ್ಪಡುವ ರೆಂದಿರುವಾಗ, ಲೋಕಾ ರಂಭದಿಂದ ಅವತರಿಸಿದ ಎಲ್ಲ ಪ್ರವಾದಿಗಳೂ

ಎಚ್ಚರಿಕೆ ನೀಡಿರುವರೆಂದು ಪವಿತ್ರ ನಬಿಯವರು(ಸ) ಹೇಳಿರುವ ಆ ಭಯಂಕರ ವಿಪತ್ತಿನ ಕಾಲದಲ್ಲಿ ಅಲ್ಲಾಹನ ಒಬ್ಬ ಮಾರ್ಗದರ್ಶಕನು ಬರಲಾರನೆಂದೂ ಅವರನ್ನು ಸನ್ಮಾರ್ಗಕ್ಕೊಯ್ಯುವ ಯಾವ ಏರ್ಪಾಡೂ ಇರಲಾರದೆಂದೂ ಮುಸ್ಲಿಮರನ್ನು ಇಸ್ಲಾಮಿನ ಪತಾಕೆಯ ನೆರಳಿನಲ್ಲಿ ಒಟ್ಟುಗೂಡಿಸುವ ಒಂದು ಶಬ್ದವು ಅವನಿಂದ ಹೊರಟು ಬರಲಾರದೆಂದೂ ಊಹಿಸುವುದಾದರೂ ಹೇಗೆ? ಆ ಸಂದರ್ಭದಲ್ಲಿ ಅವರನ್ನು ಅಂಧಕಾರದಿಂದ ರಕ್ಷಿಸಲು ಆಕಾಶದಿಂದ ಒಂದು ಹಗ್ಗವು ಇಳಿದು ಬರಲಾರದೆಂದು ಹೇಳುವುದು ಬುದ್ಧಿ ಸಮ್ಮತವಾಗಿರುವುದೇ? ಸೃಷ್ಟ್ಯಾರಂಭದಿಂದಲೇ ದಯೆಯನ್ನೂ ಅನುಗ್ರಹವನ್ನೂ ಕರುಣಿಸುತ್ತಿದ್ದ ಅಲ್ಲಾಹನ ಆ ಕರುಣೆಯ ಸಾಗರದಲ್ಲಿ ಪವಿತ್ರ ನಬಿಯವರ(ಸ) ಬರುವಿಕೆಯ ನಂತರ ಪೂರ್ವಾಧಿಕ ಶಕ್ತಿ ಸಂಪನ್ನವಾದ ತೆರೆಮಾಲೆಗಳು ಉಂಟಾಗಬೇಕಲ್ಲದೆ, ಅವನ ದಯೆಯೂ ಅನುಗ್ರಹವೂ ಬತ್ತಿ ಹೋಗಲು ಎಂದಿಗೂ ಸಾಧ್ಯವಿಲ್ಲ. ಅಲ್ಲಾಹನು ಯಾವುದೇ ಜನಾಂಗದ ಮೇಲೆ ತನ್ನ ಅನುಗ್ರಹವನ್ನು ಕರುಣಿಸಿದ್ದರೆ, ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜನಾಂಗಕ್ಕೆ ಅದಕ್ಕಿಂತಲೂ ಹೆಚ್ಚಾಗಿ ಅನುಗ್ರಹವನ್ನು ಕರುಣಿಸಬೇಕಾಗಿದೆ. ಅವನು ಯಾವುದೇ ಜನಾಂಗದ ಮೇಲೆ ತನ್ನ ದಯೆಯನ್ನು ತೋರಿಸಿದ್ದರೆ, ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜನಾಂಗಕ್ಕೆ ಅದಕ್ಕಿಂತಲೂ ಅಧಿಕ ದಯೆಯನ್ನು ತೋರಿಸಬೇಕಾಗಿದೆ.

ಖಂಡಿತವಾಗಿಯೂ ಅದು ಆ ರೀತಿಯಲ್ಲೇ ಸಂಭವಿಸುತ್ತಲೂ ಇದೆ. ಪವಿತ್ರ ನಬಿಯವರ(ಸ) ಜನಾಂಗದಲ್ಲಿ ನ್ಯೂನತೆಗಳು ತಲೆದೋರುವಾಗಲೆಲ್ಲ ಅಲ್ಲಾಹನು ತನ್ನ ಕಡೆಯಿಂದ ಸುಧಾರಕರನ್ನು ಕಳುಹಿಸುತ್ತಲಿರುವನೆಂಬುದೂ, ವಿಶೇಷತಃ "ದಜ್ಜಾಲ್" ಆಕ್ರಮಣವು ಪ್ರತ್ಯಕ್ಷವಾಗಿ, ಕ್ರೈಸ್ತಧರ್ಮವು ಪ್ರಚಂಡ ವಿಜಯವನ್ನು ಗಳಿಸಿದಾಗ, ಮುಸ್ಲಿಮರು ಬಾಹ್ಯವಾಗಿ ಸಂಪೂರ್ಣ ಪರಾಭವ ಗೊಂಡು, ಅವರು ಇಸ್ಲಾಮನ್ನು ತ್ಯಜಿಸಿ ಅನ್ಯಧರ್ಮೀಯರ ಆಚಾರಗಳನ್ನು ಸ್ವೀಕರಿಸುವ ಈ ಅಂತ್ಯ ಕಾಲದಲ್ಲಿ ಪವಿತ್ರ ನಬಿಯವರ(ಸ) ಓರ್ವ ಪರಿಪೂರ್ಣ ಪ್ರತಿಪುರುಷ ಜನಿಸಿ ಪ್ರಪಂಚವನ್ನು ಉದ್ಧರಿಸಲಿರುವರೆಂದೂ ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗಳು ಏಕರೂಪದಲ್ಲಿ ಘೋಷಿಸುತ್ತವೆ. ಆ ಕಾಲದ ಕುರಿತು ನಬಿಶ್ರೇಷ್ಠರು(ಸ) ಈ ರೀತಿ ಹೇಳಿರುವರು:

**"ಲಾ ಯಬ್‌ಖಾ ಮಿನಲ್ ಇಸ್ಲಾಮಿ ಇಲ್ಲಾ ಇಸ್‌ಮುಹು**

**ವಲಾ ಯಬ್‌ಖಾ ಮಿನಲ್ ಖುರ್‌ಆನಿ ಇಲ್ಲಾ ರಸ್‌ಮುಹು"**

"ಇಸ್ಲಾಮಿನಲ್ಲಿ ಅದರ ನಾಮವೂ ಪವಿತ್ರ ಖುರ್‌ಆನಿನಲ್ಲಿ ಅದರ ಲಿಪಿಯೂ ಅಲ್ಲದೆ ಬೇರೇನೂ ಉಳಿಯಲಾರದು" (ಮಿಶ್‌ಕಾತ್). ಎಂದರೆ ಆ ಕಾಲದಲ್ಲಿ ಇಸ್ಲಾಮಿನ ನಿಜರೂಪವು ಎಲ್ಲೂ ಕಾಣಿಸಲಾರದು ಮತ್ತು ಪವಿತ್ರ ಖುರ್‌ಆನಿನ ಆಂತರಿಕ ಜ್ಞಾನವು ಯಾರಿಗೂ ಲಭಿಸಲಾರದು ಎಂದರ್ಥ.

ಪ್ರಿಯ ಮಿತ್ರರೇ, ಅಹ್ಮದಿಯಾ ಜಮಾಅತ್ ಅಲ್ಲಾಹನ ಆ ಪುರಾತನ ನಿಯಮವನ್ನು ಅನುಸರಿಸಿಯೂ ಹಝ್ರತ್ ಪೈಗಂಬರ್[ಸ] ಹಾಗೂ ಅವರಿಗೆ ಮೊದಲು ಅವತರಿಸಿದ ಪ್ರವಾದಿಗಳು ನುಡಿದ ಭವಿಷ್ಯವಾಣಿಯ ಪ್ರಕಾರವೂ ಸ್ಥಾಪಿತವಾಗಿದೆ. ಅದಕ್ಕಾಗಿ ಅಲ್ಲಾಹನು ಹಝ್ರತ್ ಮಿರ್ಝಾ ಗ್ಹುಲಾಂ ಅಹ್ಮದ್ ಸಾಹೇಬರನ್ನು ನಿಯೋಗಿಸಿದ್ದು ಸರಿಯಲ್ಲವೆಂದಾದರೆ, ಇದು ಅಲ್ಲಾಹನ ಮೇಲೊಂದು ಆಪಾದನೆಯಾಗುವುದು. ಅದರಲ್ಲಿ ಮಿರ್ಝಾ ಸಾಹೇಬರ ತಪ್ಪಾದರೂ ಏನಿದೆ? ಆದರೆ ಅಲ್ಲಾಹನು ನಿಗೂಢಜ್ಞನೂ ಸಕಲ ಕಾರ್ಯಗಳನ್ನು ತಿಳಿದುಕೊಳ್ಳುವವನೂ ಅವನ ಎಲ್ಲ ಪ್ರವೃತ್ತಿಗಳು ಅಪಾರವಾದ ಅವನ ಬುದ್ಧಿ ವೈಭವಗಳನ್ನೊಳಗೊಂಡುದೂ ಆಗಿರುವು ದೆಂದಾದರೆ, ಹಝ್ರತ್ ಮಿರ್ಝಾ ಗ್ಹುಲಾಂ ಅಹ್ಮದ್‌ರನ್ನು ಅವನು ನಿಯೋಗಿಸಿ ಕಳುಹಿಸಿದ್ದು ಖಂಡಿತವಾಗಿಯೂ ಸರಿಯಾದ ನೇಮಕವೇ ಆಗಿರುವುದೆಂದು ತಿಳಿದುಕೊಳ್ಳಬೇಕಾಗಿದೆ. ಅವರಲ್ಲಿ ವಿಶ್ವಾಸವಿಡುವುದರಲ್ಲೇ ಮುಸ್ಲಿಮರ ಮತ್ತು ಸರ್ವ ಜಗತ್ತಿನ ಕ್ಷೇಮಾಭಿವೃದ್ಧಿಯು ಅವಲಂಬಿಸಿದೆ ಎಂದು ಸಮ್ಮತಿಸಬೇಕಾಗಿದೆ.

ಅವರು ಹೊಸತಾಗಿ ಯಾವ ಸಂದೇಶವನ್ನೂ ಶರೀಅತನ್ನೂ ತಂದಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಪಂಚಕ್ಕೆ ತಿಳಿಸಿದ್ದೂ, ಆದರೆ ಪ್ರಪಂಚವು ಅನಂತರ ಪರಿತ್ಯಜಿಸಿದ್ದೂ, ಪವಿತ್ರ ಖುರ್‌ಆನ್ ಲೋಕ ಸಮಕ್ಷಮ ಮುಂದಿಟ್ಟದ್ದೂ, ಆದರೆ ಲೋಕವು ಕಾಲಕ್ರಮೇಣ ಮುಖ ತಿರುಗಿಸಿದ್ದೂ ಆದ ಆ ದಿವ್ಯ ಸಂದೇಶವನ್ನು ಬೋಧಿಸಲೆಂದೇ ಅವರು ನಿಯುಕ್ತರಾದರು.

ಆ ಸಂದೇಶವು, ಸರ್ವ ಲೋಕಗಳಿಗೂ ಸೃಷ್ಟಿಕರ್ತನಾಗಿ ಒಬ್ಬ ದೇವನಿರುವನು, ಅವನೊಡನೆ ಸ್ನೇಹ ಬಾಂಧವ್ಯವನ್ನು ಸ್ಥಾಪಿಸಲಿಕ್ಕಾಗಿಯೇ ಅವನು ಮನುಷ್ಯರನ್ನು ಸೃಷ್ಟಿಸಿರುವನು, ಅವನ ಗುಣ ಮಹಾತ್ಮೆಗಳನ್ನು ತಮ್ಮಲ್ಲಿ ಪ್ರತಿಬಿಂಬಿಸಿ ತೋರಿಸುವುದೇ ಮನುಷ್ಯ ಸೃಷ್ಟಿಯ ಉದ್ದೇಶವೆಂಬುದೂ ಆಗಿದೆ. ಪವಿತ್ರ ಖುರ್‌ಆನಿನಲ್ಲಿ ಮನುಷ್ಯ ಸೃಷ್ಟಿಯ ಕುರಿತು ಅಲ್ಲಾಹನು ಈ ರೀತಿ ಹೇಳಿರುವನು:

وَإِذْ قَالَ رَبُّكَ لِلْمَلٰٓئِكَةِ إِنِّي جَاعِلٌ فِي الْأَرْضِ خَلِيفَةً

"ಖಂಡಿತವಾಗಿಯೂ ನಾನು ಭೂಮಿಯ ಮೇಲೆ ಒಬ್ಬ ಖಲೀಫನನ್ನು (ಪ್ರತಿನಿಧಿ) ಉಂಟುಮಾಡಲಿರುವೆನೆಂದು ಮಲಕುಗಳೊಡನೆ ನಿನ್ನ ಪ್ರಭು ಹೇಳಿದುದನ್ನು ಜ್ಞಾಪಿಸು" (2:31). ಹೀಗೆ ಆದಂ ಮತ್ತು ಅವರ ಸಂತತಿಗಳು ಅಲ್ಲಾಹನ ಖ಼ಲೀಫ ಅಥವಾ ಪ್ರತಿನಿಧಿಗಳು ಎಂದೂ, ಅವನ ಉತ್ಕೃಷ್ಟ ಗುಣ ಮಹಾತ್ಮೆಗಳನ್ನು ಲೋಕಕ್ಕೆ ತೋರಿಸಲಿಕ್ಕಾಗಿ ಸೃಷ್ಟಿಸಲ್ಪಟ್ಟವರೆಂದೂ ಇದರಿಂದ ಗ್ರಹಿಸಬಹುದು. ಆದುದರಿಂದ, ಒಬ್ಬ ಪ್ರತಿನಿಧಿಯು ತಾನು ಪ್ರತಿನಿಧೀಕರಿಸುವ ವ್ಯಕ್ತಿಯ ಇಂಗಿತವನ್ನರಿತು ವರ್ತಿಸುವಂತೆಯೂ, ಒಬ್ಬ ದಾಸನು ತನ್ನ ಪ್ರತಿಯೊಂದು ಹೆಜ್ಜೆಯನ್ನೂ ಯಜಮಾನನ ಹಿತಾನುಸಾರ ಇಡುವಂತೆಯೂ ಮನುಷ್ಯರು ಸದಾ ತಮ್ಮ ಎಲ್ಲ ಆವಶ್ಯಕತೆಗಳಿಗೂ ದೇವನನ್ನೇ ಅವಲಂಬಿಸುತ್ತಾ ಅವನನ್ನೇ ತಮ್ಮ ಸರ್ವೋನ್ನತ ಮಿತ್ರನನ್ನಾಗಿ ಭಾವಿಸಿಕೊಂಡು, ಅವನೊಡನೆ ಸುದೃಢವಾದ ಬಾಂಧವ್ಯವನ್ನಿಟ್ಟುಕೊಂಡು, ಅವನ ಮಹತ್ ಗುಣಗಳನ್ನು ತಮ್ಮ ಜೀವನದಲ್ಲಿ ಪ್ರತಿಫಲಿಸಿ ತೋರಿಸಿಕೊಡಬೇಕಾದುದು ಮನುಷ್ಯರ ಅನಿವಾರ್ಯ ಕರ್ತವ್ಯವಾಗಿದೆ. ಈ ಕರ್ತವ್ಯಗಳನ್ನು ಅವರಿಂದ ಪೂರ್ತಿ ಮಾಡಿಸಲಿಕ್ಕಾಗಿಯೇ ಹಝ಼್ರತ್ ಮಸೀಹ್ ಮೌಊದ್[ಅ] ಅವತರಿಸಿದರು. ಭೌತಿಕವಾದ ಸುಖಾನುಭವದ ಜೀವನದಲ್ಲಿ ಮುಳುಗಿರುವವರನ್ನು ದೇವಭಕ್ತರನ್ನಾಗಿ ಮಾರ್ಪಡಿಸಲಿಕ್ಕಾಗಿಯೂ, ಇಸ್ಲಾಮಿನ ಅಧ್ಯಾಪನಗಳನ್ನು ಜನಹೃದಯಗಳಲ್ಲಿ ಸ್ಥಾಪಿಸಲಿಕ್ಕಾಗಿಯೂ ಅವರು ನಿಯೋಗಿಸಲ್ಪಟ್ಟರು. ಹಝ಼್ರತ್ ಮುಹಮ್ಮದ್ ಪೈಗಂಬರರನ್ನು[ಸ] ಯಾವ ಆಧ್ಯಾತ್ಮಿಕ ಸಿಂಹಾಸನದಿಂದ ಕೆಳಗಿಳಿಸಲಿಕ್ಕಾಗಿ ಪೈಶಾಚಿಕ ಶಕ್ತಿಗಳು ಆಂತರಿಕವಾಗಿಯೂ ಬಾಹ್ಯವಾಗಿಯೂ ಆಕ್ರಮಣ

ನಡೆಸುತ್ತಿರುವುವೋ ಅದೇ ಆಧ್ಯಾತ್ಮಿಕ ಸಿಂಹಾಸನದಲ್ಲಿ ಆ ಆಧ್ಯಾತ್ಮಿಕ ಸಾಮ್ರಾಟರನ್ನು ಕುಳ್ಳಿರಿಸಲಿಕ್ಕಾಗಿಯೇ ಅವರು ಆಗಮಿಸಿದರು.

ಈ ಉದ್ದೇಶಪ್ರಾಪ್ತಿಗಾಗಿ ಹಝ್ರತ್ ಅಹ್ಮದ್(ಅ) ಪ್ರಥಮವಾಗಿ ಮಾಡಿದ ಕಾರ್ಯವು ಇದಾಗಿತ್ತು: ಮುಸ್ಲಿಮರ ಶ್ರದ್ಧೆಯನ್ನು ಇಸ್ಲಾಮಿನ ಸಿಪ್ಪೆಯ ಕಡೆಯಿಂದ ಅದರ ತಿರುಳಿನತ್ತ ಅವರು ತಿರುಗಿಸಿದರು. ಬಾಹ್ಯವಾದ ಧರ್ಮಾಚರಣೆಗಳು ಅಗತ್ಯವಾದರೂ ಅವುಗಳ ಆಂತರ್ಯದ ಕಡೆಗೆ ಗಮನ ಹರಿಸದಿದ್ದರೆ ಅಭಿವೃದ್ಧಿಯು ಅಸಾಧ್ಯವೆಂದು ಅವರು ಒತ್ತಿ ಹೇಳಿದರು. ಹಾಗೆ ಅವರು ಒಂದು ಜಮಾಅತನ್ನು ಸಂಘಟಿಸಿದರು. ತನ್ನ ಜಮಾಅತಿನಲ್ಲಿ ಪ್ರವೇಶಿಸುವವರಿಂದ "ಐಹಿಕ ಕಾರ್ಯಗಳಿಗಿಂತಲೂ ಧಾರ್ಮಿಕ ಕಾರ್ಯಗಳಿಗೆ ಪ್ರಾಧಾನ್ಯತೆ ಕೊಡುವೆನು" ಎಂಬ ಪ್ರತಿಜ್ಞೆಯನ್ನು ಸ್ವೀಕರಿಸುವುದು ಒಂದು ಪ್ರಧಾನ ಶರತ್ತನ್ನಾಗಿ ಮಾಡಿದರು. ನಿಜವಾಗಿಯೂ ಧಾರ್ಮಿಕತೆಗಿಂತಲೂ ಐಹಿಕತೆಗೆ ಪ್ರಾಧಾನ್ಯತೆ ಕೊಡುವ ಮನೋಭಾವನೆಯೇ ಮುಸ್ಲಿಮರನ್ನು ಇಂದು ಇಂತಹ ಘೋರ ಅಧಃಪತನಕ್ಕಿಳಿಸಿದೆ. ಇಂದಿನ ಮುಸ್ಲಿಮರನ್ನು ಐಹಿಕ ಸಂಪತ್ತು ಕೈಬಿಟ್ಟು ದೂರ ಹೋಗಿದ್ದರೂ ಅವರು ಅದನ್ನು ಹಿಂಬಾಲಿಸಿಯೇ ನಡೆದರು. ಅವರ ದೃಷ್ಟಿಯಲ್ಲಿ ಇಸ್ಲಾಮಿನ ಅಭಿವೃದ್ಧಿಯೆಂದರೆ ರಾಜ್ಯಾಧಿಕಾರ ಸಿದ್ಧಿಸುವುದು ಮಾತ್ರವಾಗಿತ್ತು. ಅವರ ದೃಷ್ಟಿಯಲ್ಲಿ ಇಸ್ಲಾಮಿನ ವಿಜಯವೆಂದರೆ ಮುಸ್ಲಿಮರೆಂದು ಕರೆಯಲ್ಪಡುವವರು ವಿದ್ಯಾಭ್ಯಾಸದಲ್ಲೂ ವ್ಯಾಪಾರದಲ್ಲೂ ಮುನ್ನೇರುವುದು ಮಾತ್ರವೇ ಆಗಿತ್ತು. ಆದರೆ, ರಸೂಲ್ ಕರೀಂ(ಸ) ಅವತರಿಸಿದ್ದು ಜನರು ಮುಸ್ಲಿಮರೆಂದು ಕರೆಯಲ್ಪಡಲಿ ಎಂಬ ಉದ್ದೇಶಕ್ಕಾಗಿ ಅಲ್ಲ. ಅವರು ಬಂದುದು ಜನರನ್ನು ಯಥಾರ್ಥ ಮುಸ್ಲಿಮರನ್ನಾಗಿ ಮಾಡಲಿಕ್ಕಾಗಿದೆ. ಪವಿತ್ರ ಖುರ್‌ಆನಿನ ದೃಷ್ಟಿಯಲ್ಲಿ ಒಬ್ಬ ಯಥಾರ್ಥ ಮುಸ್ಲಿಮನ ವರ್ಣನೆ ಹೀಗಿದೆ: **ಮನ್ ಅಸ್‌ಲಮ ವಜ್‌ಹಹು ಲಿಲ್ಲಾಹ್** – "ಯಾರು ತನ್ನನ್ನು ತಾನೇ ಅಲ್ಲಾಹನಿಗಾಗಿ ಅರ್ಪಿಸಿ ತನ್ನ ಭೌತಿಕ ಅವಶ್ಯಕತೆಗಳನ್ನು ಧಾರ್ಮಿಕ ಅವಶ್ಯಕತೆಗಳಿಗೆ ವಿಧೇಯಪಡಿಸುವನೋ ಅವನು" (2:113).

ಬಾಹ್ಯವಾಗಿ ಇದೊಂದು ಪ್ರಧಾನ ವಿಷಯವೆಂದು ತೋರದಿದ್ದರೂ ಯಥಾರ್ಥದಲ್ಲಿ ಇಸ್ಲಾಮಿಗೂ ಇತರ ಧರ್ಮಗಳಿಗೂ ಇರುವ ವ್ಯತ್ಯಾಸ ಇದೇ ಆಗಿದೆ. ನೀವು ವಿದ್ಯಾಭ್ಯಾಸ ಗಳಿಸಬಾರದೆಂದೋ,

ವ್ಯಾಪಾರ ಮಾಡಬಾರದೆಂದೋ, ಕೈಗಾರಿಕೆಗಳಲ್ಲೂ ವ್ಯವಸಾಯಗಳಲ್ಲೂ ಏರ್ಪಡಬಾರದೆಂದೋ, ಸ್ವಂತ ರಾಜ್ಯಾಡಳಿತವನ್ನು ಶಕ್ತಿಪಡಿಸಬಾರದೆಂದೋ ಇಸ್ಲಾಂ ನಿರ್ದೇಶಿಸುವುದಿಲ್ಲ. ಈ ಎಲ್ಲ ವಿಷಯಗಳಲ್ಲಿ ಮನುಷ್ಯರ ದೃಷ್ಟಿಕೋನವನ್ನು ಬದಲಿಸಲು ಮಾತ್ರವೇ ಅದು ನಿರ್ದೇಶಿಸುತ್ತದೆ. ಪ್ರಪಂಚದಲ್ಲಿ ಎಲ್ಲ ವಿಷಯಗಳಿಗೂ ಎರಡು ರೀತಿಯ ದೃಷ್ಟಿಕೋನಗಳಿವೆ. ಒಂದನೆಯದು ಸಿಪ್ಪೆಯಿಂದ ತಿರುಳನ್ನು ಪಡೆಯುವ ದೃಷ್ಟಿಕೋನ. ಎರಡನೆಯದು ತಿರುಳಿನಿಂದ ಸಿಪ್ಪೆಯನ್ನು ಗಳಿಸುವ ದೃಷ್ಟಿಕೋನವಾಗಿದೆ. ಸಿಪ್ಪೆಯಿಂದ ತಿರುಳನ್ನು ಪಡೆಯಲು ಯತ್ನಿಸುವವರು ತಮ್ಮ ಕಾರ್ಯದಲ್ಲಿ ವಿಜಯಿಗಳೇ ಆಗಬೇಕೆಂದಿಲ್ಲ. ಹೆಚ್ಚಾಗಿ ಅವರಿಗೆ ಅಪಜಯವೇ ಉಂಟಾಗುವುದು. ಆದರೆ ತಿರುಳನ್ನು ಪಡೆದವನಿಗೆ ಅದರೊಂದಿಗೆ ಸಿಪ್ಪೆಯೂ ದೊರೆಯುತ್ತದೆ. ರಸೂಲ್ ಕರೀಮರ[ಸ] ಮತ್ತು ಅವರ ಶಿಷ್ಯಗಣದ ಸಂಪೂರ್ಣ ಪ್ರಯತ್ನವು ಧಾರ್ಮಿಕವೂ ಆಧ್ಯಾತ್ಮಿಕವೂ ಆಗಿತ್ತು. ಹಾಗಿದ್ದರೂ, ಲೌಕಿಕ ಸಂಪತ್ತುಗಳೂ ಭೌತಿಕ ಸುಖಾನುಭವಗಳೂ ಅವರಿಗೆ ಸಿದ್ಧಿಸದಿರಲಿಲ್ಲ. ಧರ್ಮವು ಯಾರಿಗೆ ಲಭಿಸಿತ್ತೋ ಅವರನ್ನು ಪ್ರಪಂಚದ ಸುಖಾನುಭವಗಳು ಒಬ್ಬ ದಾಸಿಯಂತೆ ಹಿಂಬಾಲಿಸುತ್ತದೆಯೆಂಬುದು ಒಂದು ಸಹಜ ಸತ್ಯವಾಗಿದೆ. ಆದರೆ ಪ್ರಪಂಚದ ಸುಖಾನುಭವಗಳು ಲಭಿಸಿದ ಒಬ್ಬನಿಗೆ ಧಾರ್ಮಿಕತೆಯು ಲಭಿಸಬೇಕೆಂದಿಲ್ಲ. ಹೆಚ್ಚಿನಂಶವೂ ಅದು ದುರ್ಲಭವೇ ಆಗುವುದು. ಕೆಲವು ಸಾರಿ ಇದ್ದ ಅತ್ಯಲ್ಪ ಧಾರ್ಮಿಕತೆಯೂ ಕೈಬಿಟ್ಟು ಹೋಗುವುದು. ಒಟ್ಟಿನಲ್ಲಿ, ಮಸೀಹ್ ಮೌಊದ್[ಅ] ಕೂಡ ಪ್ರವಾದಿಗಳ ಚರ್ಯೆಯಂತೆ ಅಲ್ಲಾಹನ ಆಜ್ಞೆಯನ್ನನುಸರಿಸಿ ತಮ್ಮ ಸಂಪೂರ್ಣ ಶಕ್ತಿಯನ್ನು ಜನರ ದೃಷ್ಟಿಯು ಧಾರ್ಮಿಕ ಕಾರ್ಯಗಳ ಮೇಲೆ ಬೀಳುವಂತೆ ಮಾಡಲು ಉಪಯೋಗಿಸಿದರು. ಅವರ ಆಗಮನ ಕಾಲದಲ್ಲಿ ಮುಸ್ಲಿಮರ ಮುಂದೆ ಎರಡು ರೀತಿಯ ಅಭಿವೃದ್ಧಿ ಯೋಜನೆಗಳಿದ್ದವು. ಒಂದು, ಮುಸ್ಲಿಮರು ಭೌತಿಕವಾಗಿ ಬಹಳ ನಿಶ್ಶಕ್ತರಾಗಿರುವರೆಂದೂ ಆದುದರಿಂದ ಲೌಕಿಕ ಶಕ್ತಿಗಳನ್ನು ಹೆಚ್ಚಿಸಿಕೊಳ್ಳಬೇಕೆಂಬುದೂ ಆಗಿತ್ತು. ಇನ್ನೊಂದು, ಮಸೀಹ್ ಮೌಊದ್[ಅ] ನಿರ್ದೇಶಿಸಿದ ಅಭಿವೃದ್ಧಿ ಯೋಜನೆ. ಅಂದರೆ, ಧರ್ಮದ ಕಡೆಗೆ ಮುಸ್ಲಿಮರು ಗಮನವನ್ನು ಹರಿಯಿಸಿದರೆ ದೇವನು ಲೌಕಿಕ ಸಂಪತ್ತನ್ನು ತಾನಾಗಿಯೇ ದಯಪಾಲಿಸುವನು ಎಂಬ ತತ್ವ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಸಂಘಟನೆಯನ್ನು ಕೆಲವರು ಇಂದಿನ ಸೂಫಿಗಳೇ ಮೊದಲಾದವರ ಯೋಜನೆಯಂತಹ ಒಂದಾಗಿರಬಹುದೆಂದು ತಪ್ಪು ತಿಳಿದುಕೊಂಡರು. ಈ ಸೂಫಿಗಳಾದರೋ ಬಾಹ್ಯವಾದ ಪ್ರಾರ್ಥನೆ, ಉಪವಾಸಗಳ ಕುರಿತು ಮಾತ್ರ ಪ್ರಬೋಧಿಸುತ್ತಾ ಮೇಧಾವಿಗಳಾದ ಜನರನ್ನು ಮೂಲೆಗಳಲ್ಲಿ ಕುಳ್ಳಿರಿಸಿ ಪರದಾ ಸ್ತ್ರೀಯರಂತೆ ಮಾಡುತ್ತಿದ್ದರು. ಹಝ್ರತ್ ಮಸೀಹ್ ಮೌಊದ್[ಅ] ಕೂಡ ಇದೇ ರೀತಿಯ ಉಪದೇಶಗಳನ್ನೇ ಮಾಡುತ್ತಿದ್ದರೆ ಅವರು ಸಹ ಆಂತರ್ಯವನ್ನ ಬಿಟ್ಟು ಕೇವಲ ಬಾಹ್ಯವನ್ನು ಗಳಿಸಲು ಪ್ರಬೋಧಿಸುವ ಒಬ್ಬ ವ್ಯಕ್ತಿಯಾಗುತ್ತಿದ್ದರು. ಆದರೆ ಅವರು ಮಾಡಿದ್ದು ಅದಾಗಿರಲಿಲ್ಲ. ಧರ್ಮವಿಧಿಗಳನ್ನನುಸರಿಸಿ ಪ್ರವರ್ತಿಸಬೇಕೆಂದು ಶಕ್ತಿಯುತವಾಗಿ ಉಪದೇಶಿಸುವುದರೊಂದಿಗೇನೇ, ಧರ್ಮವು ಅಲ್ಲಾಹನ ಕಡೆಯಿಂದ ಬರುವುದು ಮನುಷ್ಯನ ತಿಳುವಳಿಕೆಗೆ ಪ್ರಕಾಶ ನೀಡಲಿಕ್ಕಾಗಿಯೂ ಅವನ ಮೆದುಳನ್ನು ಪ್ರಕಾಶಮಾನವನ್ನಾಗಿ ಮಾಡಿ ಬುದ್ಧಿಯನ್ನು ಹರಿತಗೊಳಿಸಲಿಕ್ಕಾಗಿಯೂ ಎಂದು ಅವರು ಸ್ಪಷ್ಟವಾಗಿ ಹೇಳಿದರು. ಕಾಪಟ್ಯವಿಲ್ಲದೆ ಶುದ್ಧ ಹೃದಯದಿಂದ ಧಾರ್ಮಿಕ ಕರ್ಮಗಳನ್ನು ನಿರ್ವಹಿಸುವ ವ್ಯಕ್ತಿಯಲ್ಲಿ ಧರ್ಮವು ಉತ್ಕೃಷ್ಟವಾದ ಸ್ವಭಾವ ಗುಣಗಳನ್ನೂ ಕರ್ತವ್ಯ ನಿಷ್ಠೆಯನ್ನೂ ತ್ಯಾಗಶೀಲವನ್ನೂ ಉಂಟು ಮಾಡುವುದೆಂದು ಅವರು ಕಲಿಸಿದರು. ನಿಜವಾದ ಧರ್ಮದೆಡೆಗೆ ಅವರು ಜನರ ಗಮನವನ್ನು ಸೆಳೆದರು. ಅವರು ಹೇಳಿದರು:

"ನೀವು ಪ್ರಾರ್ಥನೆಗಳನ್ನೂ ವ್ರತಾನುಷ್ಠಾನಗಳನ್ನೂ ತಪ್ಪದೆ ಪಾಲಿಸಿರಿ. ಹಜ್ಜ್ ಯಾತ್ರೆ ಮಾಡಿರಿ ಮತ್ತು ಝಕಾತ್ ಕೊಡಿರಿ. ಆದರೆ ನಿಮ್ಮ ಈ ಕರ್ಮಗಳೆಲ್ಲವೂ ಪವಿತ್ರ ಖುರ್‌ಆನಿನಲ್ಲಿ ವಿವರಿಸಿದ ರೀತಿಯಲ್ಲೇ ಆಗಿರಲಿ. ಆ ಪವಿತ್ರ ಗ್ರಂಥವು ನಿಮ್ಮೊಡನೆ ಕೇವಲ ಉಠಕ್ ಬೈಠಕ್ ರೂಪದ ಪ್ರಾರ್ಥನೆಯನ್ನಾಗಲೀ ಹಸಿವೆಯಿಂದಿರುವ ಉಪವಾಸವನ್ನಾಗಲೀ ಯಾವುದೇ ಧಾರ್ಮಿಕ ಲಾಭವಿಲ್ಲದ ತಿರುಗಾಟ ರೂಪದ ಹಜ್ಜನ್ನಾಗಲೀ ಕೇವಲ ಧನವ್ಯಯ ರೂಪದ ಝಕಾತನ್ನಾಗಲೀ ಆಜ್ಞಾಪಿಸುವುದಿಲ್ಲ. ನಮಾಝ್ ಕುರಿತು ಆ ಪವಿತ್ರ ಗ್ರಂಥವು ಈ ರೀತಿ ಹೇಳಿದೆ:

إِنَّ الصَّلٰوةَ تَنْهٰى عَنِ الْفَحْشَآءِ وَالْمُنْكَرِ

"ನಿಶ್ಚಯವಾಗಿಯೂ ಪ್ರಾರ್ಥನೆಯು ಲಜ್ಜಾತ್ಮಕ ಕಾರ್ಯಗಳಿಂದಲೂ ನಿಷಿದ್ಧ ಕ್ರಿಯೆಗಳಿಂದಲೂ ನಿಮ್ಮನ್ನು ತಡೆಹಿಡಿಯುವುದು." (29:46). ಆದುದರಿಂದ ನಮಾಝಿನ ಕುರಿತು ಪವಿತ್ರ ಖುರ್‌ಆನಿನಲ್ಲಿ ಹೇಳಿರುವ ಈ ಫಲವು ನಿಮ್ಮಲ್ಲಿ ಉಂಟಾಗದಿದ್ದರೆ ನಿಮ್ಮ ಪ್ರಾರ್ಥನೆಯು ಪ್ರಾರ್ಥನೆಯಲ್ಲ. ಉಪವಾಸದ ಕುರಿತು ಪವಿತ್ರ ಖುರ್‌ಆನ್ ಈ ರೀತಿ ಹೇಳಿರುತ್ತದೆ: **'ಲಅಲ್ಲಕುಂ ತತ್ತಖೂನ್'** ಅಂದರೆ ಅದು ನಿಮ್ಮಲ್ಲಿ ಭಕ್ತಿಯನ್ನೂ ಉತ್ಕೃಷ್ಟ ಗುಣಗಳನ್ನೂ ಉಂಟುಮಾಡುತ್ತದೆ (2:184). ನೀವು ಉಪವಾಸವನ್ನಾಚರಿಸಿಯೂ ಪವಿತ್ರ ಖುರ್‌ಆನ್ ಹೇಳುತ್ತಿರುವ ಈ ಫಲಗಳು ನಿಮ್ಮಲ್ಲಿ ಉಂಟಾಗದಿದ್ದರೆ, ನಿಮ್ಮ ಮಾನಸಿಕ ನೆಲೆಯು ಇನ್ನೂ ಸರಿಯಾಗಿಲ್ಲವೆಂದೂ ನೀವು ಮಾಡಿದ್ದು ಸರಿಯಾದ ಉಪವಾಸವಲ್ಲವೆಂದೂ ಬದಲಿಗೆ ಹಸಿವೆಯಿಂದ ಬಳಲಿದ್ದು ಮಾತ್ರವೆಂದೂ ವ್ಯಕ್ತವಾಗುತ್ತದೆ. ನೀವು ಕೇವಲ ಹಸಿವೆಯಿಂದ ಬಳಲಬೇಕೆಂಬುದು ಅಲ್ಲಾಹನ ಉದ್ದೇಶವಲ್ಲ. ಹಜ್ಜ್ ಕರ್ಮದ ಕುರಿತು, ಅದು ನಿಮ್ಮ ದುರ್ವಿಕಾರಗಳನ್ನು ತಡೆಯುವುದೆಂದೂ ಪರಸ್ಪರ ವೈಮನಸ್ಯಗಳನ್ನು ನೀಗಿಸುವುದೆಂದೂ ಆ ಪವಿತ್ರ ಗ್ರಂಥವು ಹೇಳುತ್ತದೆ. (2:198). ಹೀಗೆ ಹಜ್ಜ್ ಕರ್ಮದ ಫಲವಾಗಿ ಅಸಭ್ಯತೆ, ಅಕ್ರಮ, ಗಲಭೆ, ಮೊದಲಾದವುಗಳಿಂದ ಒಬ್ಬ ವ್ಯಕ್ತಿಯು ದೂರವಾಗುವುದಿಲ್ಲವೆಂದಾದರೆ ಅವನ ಹಜ್ಜ್ ಕರ್ಮವು ಯಥಾರ್ಥದ್ದಾಗಿರಲಿಲ್ಲವೆಂದು ತಿಳಿಯಬೇಕಾಗಿದೆ. ಇದೇ ರೀತಿ ಝುಕಾತಿನ ಕುರಿತು ಆ ಪವಿತ್ರ ಗ್ರಂಥವು ಈ ರೀತಿ ಹೇಳುತ್ತದೆ: "ಅವರ ಸಂಪತ್ತಿನಿಂದ **'ಝುಕಾತ್'** ತೆಗೆದುಕೊಂಡು ಅವರನ್ನು ಶುದ್ಧೀಕರಿಸಿ ಪವಿತ್ರರನ್ನಾಗಿ ಮಾಡು" (9:103). ಹೀಗೆ "ಝುಕಾತ್" ಎಂಬುದು ವ್ಯಕ್ತಿಯನ್ನೂ ಸಮೂಹವನ್ನೂ ಶುದ್ಧೀಕರಿಸಲಿಕ್ಕಾಗಿಯೂ ಅವರ ಆತ್ಮವನ್ನೂ ಆಲೋಚನೆಗಳನ್ನೂ ಪವಿತ್ರಗೊಳಿಸಲಿಕ್ಕಾಗಿಯೂ ನಿರ್ದೇಶಿಸಲ್ಪಟ್ಟಿದೆ. ಆದುದರಿಂದ ಈ ಫಲಗಳು ಸಿದ್ಧಿಸದ ಕಾಲದವರೆಗೂ ನಿಮ್ಮ ಹಜ್ಜ್ ಮತ್ತು ಝುಕಾತ್‌ಗಳು ಕೇವಲ ಬಾಹ್ಯ ಪ್ರದರ್ಶನ ಮಾತ್ರವೇ ಆಗಿರುವುದು. ನೀವು ಪ್ರಾರ್ಥಿಸುತ್ತಲೂ ವ್ರತಾನುಷ್ಠಾನ ಮಾಡುತ್ತಲೂ, ಝುಕಾತ್ ಕೊಡುತ್ತಲೂ ಹಜ್ಜ್ ನಿರ್ವಹಿಸುತ್ತಲೂ ಇರಿ;

ಆದರೆ ಪವಿತ್ರ ಖುರ್‌ಆನಿನಲ್ಲಿ ಹೇಳಲ್ಪಟ್ಟಿರುವ ಈ ಫಲಗಳು ನಿಮ್ಮಲ್ಲಿ ಗೋಚರವಾಗದಿದ್ದರೆ ಆ ಕರ್ಮಗಳನ್ನು ಮಾಡಿದವರಾಗಿ ನಿಮ್ಮನ್ನು ನಾನು ಗಣಿಸಲಾರೆ. ಈ ಫಲಗಳೆಲ್ಲ ನಿಮ್ಮಲ್ಲಿ ಉಂಟಾಗಿ, ನೀವು ಲಜ್ಜಾತ್ಮಕ ಕಾರ್ಯಗಳಿಂದಲೂ, ನಿಷಿದ್ಧ ಕರ್ಮಗಳಿಂದಲೂ ದೂರವಾಗಿ, ನಿಮ್ಮಲ್ಲಿ ಭಕ್ತಿಯು ಉತ್ಪನ್ನವಾಗಿ, ಅಸಭ್ಯವೂ ಅಶ್ಲೀಲವೂ ಆದ ಸಕಲ ಕಾರ್ಯಗಳಿಂದಲೂ ನೀವು ಸಂಪೂರ್ಣ ಶುದ್ಧರಾಗಿ, ವ್ಯಕ್ತಿಪರವೂ ಸಾಮೂಹಿಕವೂ ಆದ ಔನ್ನತ್ಯವನ್ನೂ ಪರಿಶುದ್ಧತೆಯನ್ನೂ ಗಳಿಸಿ ನಿಮ್ಮ ವಿಚಾರಗಳೂ ಭಾವನೆಗಳೂ ಪವಿತ್ರವೂ ಆಗಿರಬೇಕು. ಯಾರಲ್ಲಿ ಈ ಲಕ್ಷಣಗಳು ಗೋಚರವಾಗುವುದಿಲ್ಲವೋ ಅವರನ್ನು ನನ್ನ ಜಮಾಅತಿನ ವ್ಯಕ್ತಿಗಳೆಂದು ನಾನು ಗಣಿಸಲಾರೆ. ಯಾಕೆಂದರೆ, ಅವರು ಆಂತರಿಕ ಪರಿಶುದ್ಧತೆಯನ್ನು ಗಳಿಸುವುದರ ಬದಲು ಕೇವಲ ಬಾಹ್ಯವನ್ನೇ ಅವಲಂಬಿಸಿದರು. ಆದರೆ ಅಲ್ಲಾಹನ ಉದ್ದೇಶವು ಕೇವಲ ಬಾಹ್ಯ ಪ್ರಾಪ್ತಿಯಲ್ಲ."

ಇದೇ ರೀತಿ ಎಲ್ಲ ಆರಾಧನಾ ಕರ್ಮಗಳ ಕುರಿತೂ ಅದರ ಬಾಹ್ಯ ಸಿಪ್ಪೆಯನ್ನಲ್ಲ, ಅದರ ಆಂತರಿಕ ತಿರುಳನ್ನರಿತು ಆರಾಧಿಸಬೇಕೆಂದು ಹಝ್ರತ್ ಅಹ್ಮದ್[ಅ] ಬೋಧಿಸಿದರು. ಇಸ್ಲಾಮಿನ ಯಾವುದೇ ಆಜ್ಞೆಯೂ ಅನಾವಶ್ಯಕವೂ ಉದ್ದೇಶ ರಹಿತವೂ ಆಗಿಲ್ಲವೆಂದು ಅವರು ಹೇಳಿದರು. ಅಲ್ಲಾಹನನ್ನು ಬಾಹ್ಯ ಕಣ್ಣುಗಳಿಂದ ನೋಡಲು ಸಾಧ್ಯವಿಲ್ಲ. ಆದರೆ ಮನುಷ್ಯನ ಹೃದಯಗಳಿಗೆ ಅವನು ದರ್ಶನವಾಗುತ್ತಾನೆ. ಕೈಗಳಿಂದ ಅವನನ್ನು ಸ್ಪರ್ಶಿಸಲು ಸಾಧ್ಯವಿಲ್ಲ. ಆದರೆ ಪ್ರೇಮದಿಂದ ಅವನನ್ನು ಸ್ಪರ್ಶಿಸಲು ಸಾಧ್ಯ. ಕೇವಲ ಕೈಗಳನ್ನೂ ಕಣ್ಣುಗಳನ್ನೂ ಮಾತ್ರ ನಿಯಂತ್ರಿಸುವುದು ಧರ್ಮದ ಉದ್ದೇಶವಲ್ಲ. ಹೃದಯಗಳನ್ನೂ ವಿಚಾರಗಳನ್ನೂ ಶುದ್ಧಗೊಳಿಸುವ ಉದ್ದೇಶದಿಂದಲೇ ಅದು ಬಾಹ್ಯಾಂಗಗಳನ್ನು ನಿಯಂತ್ರಿಸುತ್ತದೆ. ಹಾಗಿದ್ದರೆ ಮಾತ್ರವೇ ಅಲ್ಲಾಹನನ್ನು ದರ್ಶಿಸಲಿಕ್ಕೂ ಅವನನ್ನು ಸ್ಪರ್ಶಿಸಲಿಕ್ಕೂ ಅವನ ಮಧುರ ಮಾತುಗಳನ್ನು ಕೇಳಲಿಕ್ಕೂ ಸಾಧ್ಯವಾಗುವುದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಈ ವಿಷಯಗಳನ್ನೆಲ್ಲ ಶಕ್ತಿಯುತವಾಗಿ ಪ್ರಬೋಧಿಸುತ್ತಾ ಇಸ್ಲಾಮಿನ ಅಭಿವೃದ್ಧಿಗಾಗಿ ಒಂದು ಹೊಸ ಮಾರ್ಗವನ್ನು ಅವರು ತೆರೆದು ತೋರಿಸಿದರು. ಇದರ ಫಲವಾಗಿ ಒಂದು ಜಮಾಅತ್ ನಿರ್ಮಾಣವಾಯಿತು. ಅದೊಂದು ಚಿಕ್ಕ ಜಮಾಅತಾದರೂ ಅವರು

ಲೌಕಿಕತೆಗಿಂತಲೂ ಧಾರ್ಮಿಕತೆಗೆ ಹೆಚ್ಚಿನ ಮಹತ್ವವನ್ನೀಯುತ್ತಾ ಇಸ್ಲಾಮಿನ ಆಧ್ಯಾತ್ಮಿಕ ಅಭಿವೃದ್ಧಿಗೆ, ತದ್ವಾರಾ ಮುಹಮ್ಮದ್ ಮುಸ್ತಫಾರ[ಸ] ಆಧ್ಯಾತ್ಮಿಕ ರಾಜ್ಯಭಾರದ ಪುನಃ ಸ್ಥಾಪನೆಗೆ ಎಲ್ಲ ವಿಧದ ತ್ಯಾಗಗಳನ್ನು ಮಾಡಲು ತೊಡಗಿದರು. ಸ್ವಲ್ಪ ಆಲೋಚಿಸಿ ನೋಡಿರಿ, ಅಹ್ಮದಿಯರ ಈ ಕಿರಿದಾದ ಜಮಾಅತಿಗೂ ಇತರ ಮುಸ್ಲಿಮರ ಬಹುದೊಡ್ಡ ಜನ ಸಮೂಹಕ್ಕೆ ತಮ್ಮೊಳಗೆ ಎಷ್ಟೊಂದು ಅಂತರವಿದೆ! ಹಾಗಿದ್ದರೂ ಕೂಡ ಅಹ್ಮದಿಯಾ ಜಮಾಅತ್ ಇಸ್ಲಾಮಿನ ಪ್ರಚಾರಕ್ಕಾಗಿಯೂ ಅದರ ಅಭಿವೃದ್ಧಿಗಾಗಿಯೂ ಮಾಡುತ್ತಿರುವ ಪ್ರಯತ್ನಗಳ ಅರ್ಧಾಂಶ ಅಥವಾ ಕಾಲು ಭಾಗಕ್ಕೆ ಸಮವಾದ ಕಾರ್ಯಗಳನ್ನಾದರೂ ಅವರಿಗಿಂತಲೂ ಎಷ್ಟೋ ಪಾಲು ಹೆಚ್ಚು ಸಂಖ್ಯೆಯಲ್ಲಿರುವ ಇತರ ಮುಸ್ಲಿಮರಿಗೆ ಮಾಡಲು ಸಾಧ್ಯವಾಗಿದೆಯೇ? ಈ ಮಾರ್ಪಾಟು ಹೇಗೆ ಉಂಟಾಯಿತು? ಅಹ್ಮದಿಯರು ಭೌತಿಕತೆಗಿಂತಲೂ ಧಾರ್ಮಿಕತೆಗೆ ಹೆಚ್ಚಿನ ಮಹತ್ವವನ್ನೀಯಬೇಕೆಂದು ಮಸೀಹ್ ಮೌಊದ್[ಅ] ಉಪದೇಶಿಸಿದ ಕಾರಣದಿಂದಲೇ ಈ ಮಹತ್ತಾದ ಪರಿವರ್ತನೆಯು ಸಾಧ್ಯ ವಾಯಿತು. ಐಹಿಕಕ್ಕಿಂತಲೂ ಧಾರ್ಮಿಕತೆಗೆ ಹೆಚ್ಚಿನ ಮಹತ್ವ ಕಲ್ಪಿಸಬೇಕೆಂಬ ತತ್ವವು ಅಹ್ಮದಿಯರಿಗೆ ಮನದಟ್ಟಾದೊಡನೆ ಅವರ ಕರ್ಮಕಾರ್ಯಗಳೆಲ್ಲವೂ ಒಂದು ನವೀನ ರೂಪವನ್ನು ಪಡೆಯಿತು. ಒಬ್ಬ ಯಥಾರ್ಥ ಅಹ್ಮದಿಯ ನಮಾಝ್ ಇತರ ಮುಸ್ಲಿಮರ ನಮಾಝಿನಂತಿರಲಾರದು. ಅಂಗ ಚಲನೆಗಳೂ ಉಚ್ಚರಿಸುವ ಪಂಕ್ತಿಗಳೂ ಒಂದೇ ಆಗಿರುವುದಾದರೂ ದೃಷ್ಟಿಕೋನಗಳು ಮಾತ್ರ ವ್ಯತ್ಯಸ್ತವಾಗಿರುವುವು. ಒಬ್ಬ ಅಹ್ಮದಿಯು ತನ್ನ ನಮಾಝನ್ನು ನಮಾಝ್ ಮಾಡಬೇಕೆಂಬ ಆಚಾರದ ರೂಪದಲ್ಲಿ ಮಾಡುವುದಿಲ್ಲ. ಅಲ್ಲಾಹನ ಸಾಮೀಪ್ಯ ಗಳಿಸಲಿಕ್ಕಾಗಿಯೂ ಅವನೊಡನಿರುವ ಬಾಂಧವ್ಯವನ್ನು ವರ್ಧಿಸಿಕೊಳ್ಳಲಿಕ್ಕಾಗಿಯೂ ನಮಾಝ್ ಮಾಡುವುದಾಗಿದೆ. ಇತರ ಮುಸ್ಲಿಮರೂ ನಮಾಝ್ ಅನುಷ್ಠಿಸುವುದು ಅಲ್ಲಾಹನೊಡನೆ ಬಾಂಧವ್ಯ ಸ್ಥಾಪಿಸಲಿಕ್ಕಾಗಿ ಅಲ್ಲವೇ ಎಂದು ಯಾರಾದರೂ ಕೇಳುವುದಿದ್ದರೆ, ಅದಕ್ಕೆ ನಾನು ಹೇಳುವ ಉತ್ತರವು "ಖಂಡಿತವಾಗಿಯೂ ಅಲ್ಲ" ಎಂದಾಗಿದೆ. ನೀವು ಸ್ವಲ್ಪ ಯೋಚಿಸಿದರೆ ನಿಮಗೆ ತಿಳಿಯುವುದು, ಇಂದಿನ ಮುಸ್ಲಿಮರಲ್ಲಿ ದುರದೃಷ್ಟವಶಾತ್ ಅಲ್ಲಾಹನೊಡನೆ ನೇರ ಸಂಪರ್ಕ ಸಾಧ್ಯವಿಲ್ಲವೆಂಬ ಒಂದು

ತಪ್ಪಭಿಪ್ರಾಯವು ಹಬ್ಬಿಕೊಂಡಿದೆ. ಅಲ್ಲಾಹನು ತನ್ನ ದಾಸರೊಂದಿಗೆ ಈಗ ಸಂಭಾಷಿಸಲಾರನೆಂದೂ, ಅವನಿಂದ ಏನನ್ನೂ ಮಾಡಿಸಿಕೊಳ್ಳಲು ಅವನ ದಾಸರಿಗೆ ಸಾಧ್ಯವಿಲ್ಲವೆಂದೂ ಇರುವ ತಪ್ಪಾದ ವಿಶ್ವಾಸವು ದುರದೃಷ್ಟವಶಾತ್ ಇಂದಿನ ಮುಸ್ಲಿಮರಲ್ಲಿ ವ್ಯಾಪಿಸಿರುವುದು. "ಇಲ್‌ಹಾಂ" (ದೇವವಾಣಿ) ಯಾರಿಗೂ ಲಭಿಸಲಾರದೆಂಬ ಈ ವಿಶ್ವಾಸವು ಮುಸ್ಲಿಮರಲ್ಲಿ ವ್ಯಾಪಿಸಿ ಸಾಧಾರಣ ಒಂದು ಶತಮಾನಕ್ಕಿಂತಲೂ ಹೆಚ್ಚು ಸಮಯವಾಯಿತು. ಅದಕ್ಕೆ ಮೊದಲು ದೇವ ವಚನಗಳು ಅವತೀರ್ಣವಾಗುತ್ತಾ ಇವೆಯೆಂಬ ವಿಶ್ವಾಸವಿರುವವರು ಮುಸ್ಲಿಮರಲ್ಲಿ ಇದ್ದರು. ಮಾತ್ರವಲ್ಲ, ತಮಗೆ ಸ್ವತಃ ದೇವವಾಣಿಯು ಲಭಿಸಿದೆ ಎಂದು ವಾದಿಸಿದವರು ಸಹ ಮುಸ್ಲಿಮರಲ್ಲಿದ್ದರು. ಆದರೆ ದೇವವಾಣಿಯು ಸಂಪೂರ್ಣ ಸ್ಥಗಿತಗೊಂಡಿರುವುದೆಂಬ ಈ ಆಪತ್ಕರವಾದ ವಿಶ್ವಾಸವು ಮುಸ್ಲಿಮರಲ್ಲಿ ಹಬ್ಬಿ ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲವಾಯಿತು. ದೇವವಾಣಿ ಲಭಿಸಿತೆಂದು ವಾದಿಸುವುದು "ಕುಫ್ರ್" ಆಗಿರುವುದೆಂದು ಕೂಡ ಕೆಲವು ಪಂಡಿತರು ನಿರ್ಣಯಿಸಿರುವರು. ಆದರೆ ಹಝ್ರತ್ ಮಸೀಹ್ ಮೌಊದ್‌ರು(ಅ) "ದೇವನು ನನ್ನೊಡನೆ ಸಂಭಾಷಿಸುತ್ತಾನೆ" ಎಂದು ಲೋಕ ಸಮ್ಮುಖದಲ್ಲಿ ಘೋಷಿಸಿದರು. ಮಾತ್ರವಲ್ಲ "ನನ್ನನ್ನು ಸಂಪೂರ್ಣ ಅನುಸರಿಸಿ ನನ್ನ ಉಪದೇಶಗಳ ಪ್ರಕಾರ ಜೀವಿಸುವವರಿಗೂ ಕೂಡ ದೇವವಾಣಿಯು ಲಭಿಸುವುದು" ಎಂದು ಅವರು ಹೇಳಿದರು. ತನಗೆ ಲಭಿಸುತ್ತಿದ್ದ ಈ ದೇವ ವಚನಗಳನ್ನು ಅವರು ಜನರ ಮುಂದಿಡುತ್ತಲೇ ಇದ್ದರು. ಅಲ್ಲಾಹನಿಂದ ಸಿದ್ಧಿಸುವ ಈ ಅಮೂಲ್ಯ ಅನುಗ್ರಹವನ್ನು ಪಡೆಯಲು ನೀವು ಸದಾ ಪ್ರಯತ್ನಿಸುತ್ತಿರಬೇಕೆಂದು ಅವರು ತನ್ನ ಅನುಯಾಯಿಗಳೊಡನೆ ಸದಾ ಉಪದೇಶಿಸುತ್ತಲೂ ಇದ್ದರು. "**ಇಹ್‌ದಿನಸ್ಸಿರಾತಲ್ ಮುಸ್ತಖೀಂ**" ನೀನು ಅನುಗ್ರಹಿಸಿದವರ ಆ ಸನ್ಮಾರ್ಗದಲ್ಲೇ ನಮ್ಮನ್ನೂ ಚಲಿಸುವಂತೆ ಮಾಡು" (ಸೂರಃ ಫಾತಿಹ) ಎಂದು ಎಲ್ಲ ಮುಸ್ಲಿಮರೂ ತಮ್ಮ ಐದು ಸಮಯದ ನಮಾಝ್‌ಗಳಲ್ಲಿ ಪ್ರಾರ್ಥಿಸುತ್ತಾರೆ. ಅನುಗ್ರಹಿಸಲ್ಪಟ್ಟವರಲ್ಲಿ ಪ್ರವಾದಿಗಳು ಪ್ರಮುಖರೆಂಬುದೂ ಅವರಿಗೆ ಅಲ್ಲಾಹನು ತನ್ನ ವಾಣಿಯನ್ನು ಅನುಗ್ರಹಿಸಿದ್ದನೆಂಬುದೂ ತರ್ಕಾತೀತವಷ್ಟೇ. ಹಾಗಿರುವಾಗ, ಆ ಪೂರ್ವಿಕ ಪುಣ್ಯಾತ್ಮರಿಗೆ ಅಲ್ಲಾಹನು ತೆರೆದಿಟ್ಟಿದ್ದ ಆ ದಿವ್ಯ ಬಾಗಿಲನ್ನು ಮುಸ್ಲಿಮರಲ್ಲಿ

ಯಾರಿಗೂ ತೆರೆದು ಕೊಡಲಾರನೆಂದೂ, ಆ ಪೂರ್ವಿಕರಲ್ಲಿ ಅವನು ಸಂಭಾಷಿಸಿದಂತೆ ಇವರಲ್ಲಿ ಯಾರೊಡನೆಯೂ ಸಂಭಾಷಿಸಲಾರನೆಂದೂ ಹೇಳುವುದಾದರೆ ಅಲ್ಲಾಹನು ಕಲಿಸಿಕೊಟ್ಟ ಈ ಪ್ರಾರ್ಥನೆಯು ವ್ಯರ್ಥವೆಂದಾಗುವುದಿಲ್ಲವೇ? ಹೀಗೆ ಹಝ್ರತ್ ಅಹ್ಮದ್‌ರು[ಅ] ಮುಸ್ಲಿಮರ ಹೃದಯಗಳಲ್ಲಿ ನೆಲೆಗೊಂಡಿದ್ದ ಉದಾಸೀನತೆಯನ್ನು ಪೂರ್ಣವಾಗಿ ನಿವಾರಿಸಿ ಒಂದು ನವಚೈತನ್ಯವನ್ನು ಕೊಟ್ಟರು.

ಪ್ರತಿಯೊಬ್ಬ ಅಹ್ಮದಿಯ ಕುರಿತು ನಾನು ಹೇಳುವುದಿಲ್ಲ; ಆದರೆ ಹಝ್ರತ್ ಮಸೀಹ್ ಮೌಊದರ[ಅ] ಉಪದೇಶಗಳ ಅಂತಃಸ್ಸಾರವನ್ನು ಚೆನ್ನಾಗಿ ಗ್ರಹಿಸಿದ ಒಬ್ಬ ಅಹ್ಮದಿಯ ನಮಾಝ್, ಅದೊಂದು ಕೇವಲ ಆಚರಣೆಯ ರೂಪದಲ್ಲಿರದೆ, ದೇವನೊಡನೆ ಏನನ್ನೋ ಕೇಳಿ ಪಡೆಯಲು ಶ್ರಮಿಸುತ್ತಿರುವವನಂತೆಯೂ ಅಲ್ಲಾಹನೊಂದಿಗೆ ಒಂದು ನವೀನ ಬಾಂಧವ್ಯವನ್ನು ಸ್ಥಾಪಿಸಲು ತಳಹದಿಯನ್ನು ಹಾಕುತ್ತಿರುವ ರೂಪದಲ್ಲಿಯೂ ಆತನು ಆ ಕರ್ಮವನ್ನು ನಿರ್ವಹಿಸುವನೆಂದು ನನಗೆ ಹೇಳಲು ಸಾಧ್ಯವಿದೆ. ಈ ರೀತಿಯಲ್ಲಿ ನಮಾಝನ್ನು ನಿರ್ವಹಿಸುವವರ ನಮಾಝಿಗೂ ಇತರರ ನಮಾಝಿಗೂ ಬಹಳಷ್ಟು ವ್ಯತ್ಯಾಸವಿರುವುದೆಂದು ಸುಲಭದಲ್ಲಿ ಗ್ರಹಿಸಬಹುದು. ಅಲ್ಲಾಹನೊಡನೆ ಬಾಂಧವ್ಯ ಸ್ಥಾಪಿಸುವುದರ ಕುರಿತು ಮಸೀಹ್ ಮೌಊದ್[ಅ] ಬಹಳವಾಗಿ ಉಪದೇಶಿಸಿರುವರು. ಅವರು ಹೇಳಿದರು: "ನನ್ನ ವಾದದ ಸತ್ಯತೆಯನ್ನು ವ್ಯಕ್ತಗೊಳಿಸಲು ಅಲ್ಲಾಹನು ನನಗೆ ಅನೇಕಾನೇಕ ಸಾಕ್ಷ್ಯಗಳನ್ನಿತ್ತಿರುವನು. ಆದರೆ, ಆ ಸಾಕ್ಷ್ಯಗಳ ಕುರಿತೆಲ್ಲ ಪರ್ಯಾಲೋಚನೆ ನಡೆಸಲು ನಾನು ನಿಮ್ಮೊಡನೆ ಹೇಳುತ್ತಿಲ್ಲ. ಅದರ ಕುರಿತು ಚಿಂತಿಸಲು ನಿಮಗೆ ಸೌಕರ್ಯ ಲಭಿಸದಿದ್ದಲ್ಲಿ ಯಾ ಅದು ಅನಗತ್ಯವೆಂದು ನಿಮಗೆ ಕಂಡುಬಂದಲ್ಲಿ ಅಥವಾ ಅದರ ಕುರಿತು ಪರ್ಯಾಲೋಚಿಸಲು ನಿಮ್ಮ ಬುದ್ಧಿಶಕ್ತಿಯು ಅಪರ್ಯಾಪ್ತವೆಂದೂ ಯಾವುದೇ ತೀರ್ಮಾನವನ್ನು ಕೈಗೊಳ್ಳುವುದರಲ್ಲಿ ನಿಮಗೆ ದೋಷ ಸಂಭವಿಸಬಹುದೆಂದೂ ನೀವು ಊಹಿಸುವುದಾದರೆ ನಿಮ್ಮ ಗಮನವನ್ನು ಬೇರೊಂದು ಮಾರ್ಗದೆಡೆ ಹರಿಯಿಸಿರಿ. ನೀವು ನನ್ನ ವಾದ ವಿಷಯದ ಕುರಿತು ಅಲ್ಲಾಹನೊಡನೆ ಪ್ರಾರ್ಥಿಸಿರಿ. ಈ ವ್ಯಕ್ತಿಯು ಸತ್ಯವಂತನಾಗಿದ್ದಲ್ಲಿ – ನಿಜವಾಗಿಯೂ ನಿನ್ನಿಂದ ನಿಯೋಗಿಸಲ್ಪಟ್ಟ ಮಸೀಹ್

ಆಗಿದ್ದಲ್ಲಿ – ಅವರನ್ನು ಅನುಸರಿಸುವ ಭಾಗ್ಯವನ್ನು ನಮಗೆ ದಯಪಾಲಿಸು ಎಂದೂ ಅಸತ್ಯವಾದಿಯೂ ಕಪಟಿಯೂ ಆಗಿದ್ದಲ್ಲಿ ಈತನಿಂದ ನಮ್ಮನ್ನು ದೂರವಿಡು ಎಂದೂ ಆ ಅಲ್ಲಾಹನೊಡನೆಯೇ ಸಹಾಯವನ್ನು ಯಾಚಿಸಿರಿ. ನಿಷ್ಕಳಂಕತೆಯಿಂದಲೂ ವಿದ್ವೇಷರಹಿತನಾಗಿಯೂ ಯಾರಾದರೂ ಕೆಲವು ದಿವಸಗಳ ವರೆಗೆ ಈ ರೀತಿ ಪ್ರಾರ್ಥಿಸಿದರೆ ಖಂಡಿತವಾಗಿಯೂ ಅಲ್ಲಾಹನು ಅವರ ಮಾರ್ಗದರ್ಶನಕ್ಕೆ ಒಂದು ಹಾದಿಯನ್ನು ತೋರಿಸಿ ಕೊಡುವನು ಮತ್ತು ನನ್ನ ಸತ್ಯತೆಯನ್ನು ಅವರಿಗೆ ತಿಳಿಸಿಕೊಡುವನು."

ಸಹಸ್ರಾರು ಸತ್ಯಾನ್ವೇಷಿಗಳು ಈ ರೀತಿ ಪ್ರಾರ್ಥಿಸಿ ಅಲ್ಲಾಹನಿಂದ ನೇರವಾಗಿ ಸನ್ಮಾರ್ಗವನ್ನು ಪಡೆದಿದ್ದಾರೆ. ಎಷ್ಟೊಂದು ವ್ಯಕ್ತವಾದ ಮಾರ್ಗವಿದು! ಸಹಜವಾಗಿಯೂ ಮನುಷ್ಯನಿಗೆ ತನ್ನ ಸ್ವಂತ ಬುದ್ಧಿಯಿಂದ ಆಲೋಚಿಸಿ ತೀರ್ಮಾನಿಸವುದರಲ್ಲಿ ತಪ್ಪು ಸಂಭವಿಸಬಹುದು. ಆದರೆ, ಮಾರ್ಗದರ್ಶನವೀಯುವುದರಲ್ಲಿ ಅಲ್ಲಾಹನಿಗೆ ಯಾವತ್ತೂ ತಪ್ಪು ಸಂಭವಿಸಲಾರದು. ತನ್ನ ಸತ್ಯತೆಯನ್ನು ಸ್ವೀಕರಿಸಲು ಇಂತಹ ಒಂದು ಪರೀಕ್ಷಾ ಮಾರ್ಗವನ್ನು ಲೋಕದ ಮುಂದಿಡುವ ಆ ವ್ಯಕ್ತಿಗೆ ಅದರಲ್ಲಿ ಎಷ್ಟು ಮಾತ್ರ ವಿಶ್ವಾಸದಾರ್ಢ್ಯತೆ ಇದ್ದಿರಬೇಕು! "ಹೋಗಿರಿ, ನನ್ನ ಕುರಿತು ದೇವನೊಡನೆ ಕೇಳಿ ನೋಡಿರಿ" ಎಂದು ಪ್ರಪಂಚವನ್ನೇ ಆಹ್ವಾನಿಸಲು ಒಬ್ಬ ಕಪಟವಾದಿಗೆ ಸಾಧ್ಯವಾದೀತೇ? ತಾನು ದೇವ ನಿಯುಕ್ತನಾಗಿರದಿದ್ದಲ್ಲಿ ಈ ರೀತಿಯ ಒಂದು ಸತ್ವ ಪರೀಕ್ಷೆಯ ಮಾರ್ಗವನ್ನು ಜನರ ಮುಂದಿಟ್ಟು ತನ್ನ ವಿರುದ್ಧ ತಾನೇ ತೀರ್ಪು ಕೊಟ್ಟಂತಾಗುವುದಿಲ್ಲವೇ? ಆದರೆ, ಹಝ್ರತ್ ಮಸೀಹ್ ಮೌಊದ್(ಅ) ಲೋಕ ಸಮ್ಮುಖದಲ್ಲಿ ಈ ಆಹ್ವಾನವನ್ನು ಒಡ್ಡುತ್ತಲೇ ಇದ್ದರು. "ಸತ್ಯಾನ್ವೇಷಿಗಳೇ, ನನ್ನ ಸತ್ಯತೆಗೆ ನನ್ನಲ್ಲಿ ಸಹಸ್ರೋಪಿ ಸಹಸ್ರ ಸಾಕ್ಷ್ಯಗಳಿವೆ. ಆ ಸಾಕ್ಷ್ಯಗಳಿಂದೆಲ್ಲ ನೀವು ಸಂತೃಪ್ತರಾಗದಿದ್ದಲ್ಲಿ, ನೀವು ನನ್ನ ಮಾತನ್ನೋ ನನ್ನ ವಿರೋಧಿಗಳ ಮಾತನ್ನೋ ಸ್ವೀಕರಿಸಬೇಡಿರಿ. ನಾನು ಸತ್ಯವಂತನೋ ಅಥವಾ ಕಪಟಿಯೋ ಎಂದು ಅಲ್ಲಾಹನ ಪವಿತ್ರ ಸನ್ನಿಧಿಯಲ್ಲಿ ನೇರವಾಗಿ ಪ್ರಾರ್ಥಿಸಿ ಕೇಳಿರಿ. ನಾನು ಅಸತ್ಯವಾದಿಯೆಂದು ಆ ಪರಮಾತ್ಮನು ನಿಮ್ಮೊಡನೆ ಹೇಳುವನಾದರೆ ನಾನು ಅಂತಹವನಾಗಿರುವುದರಲ್ಲಿ ಮತ್ತೆ ಸಂದೇಹಕ್ಕೆಡೆಯಿಲ್ಲ. ಆದರೆ ನಾನು ಸತ್ಯವಂತನೆಂದು ಅವನು ನಿಮ್ಮೊಡನೆ ಹೇಳುವನಾದರೆ ಮತ್ತೆ

ನನ್ನನ್ನು ಸ್ವೀಕರಿಸುವುದರಲ್ಲಿ ನಿಮಗೆ ತಡೆಯಾದರೂ ಏನಿದೆ?"

ಪ್ರಿಯ ಬಾಂಧವರೇ, ಇದು ಎಷ್ಟೊಂದು ನೇರವೂ ಸುಗಮವೂ ಆದ ಮಾರ್ಗವಾಗಿತ್ತು. ಸಾವಿರಾರು ಜನರು ಸತ್ಯಾನ್ವೇಷಣೆಯ ಈ ಮಾರ್ಗವನ್ನು ಅವಲಂಬಿಸಿ ಸಫಲರಾಗಿರುವರು. ಅನ್ವೇಷಣೆಯ ಈ ಮಾರ್ಗವನ್ನು ಇಂದು ಸಹ ಯಾರೆಲ್ಲ ಅವಲಂಬಿಸಲು ಸನ್ನದ್ಧರಾಗುವರೋ ಅವರಿಗೂ ಇದರಿಂದ ಫಲವನ್ನು ಅನುಭವಿಸಲು ಸಾಧ್ಯವಿದೆ. ಐಹಿಕಕ್ಕಿಂತಲೂ ಪಾರಮಾರ್ಥಿಕವು ಶ್ರೇಷ್ಠವೆಂಬ ತತ್ವವು ಸನ್ಮಾರ್ಗಕ್ಕಿರುವ ಈ ಅನ್ವೇಷಣಾ ಸೂತ್ರದಲ್ಲಿಯೂ ಅಡಕವಾಗಿತ್ತು. ಅವರು ಹೇಳಿದರು: "ಭೌತಿಕ ವಸ್ತುಗಳನ್ನು ಕಾಣಲಿಕ್ಕಾಗಿ ಅಲ್ಲಾಹನು ನಮಗೆ ಕಣ್ಣುಗಳನ್ನು ಕೊಟ್ಟಿರುವನು. ಪ್ರಾಕೃತಿಕ ವಸ್ತುಗಳ ಕುರಿತು ಅರಿತುಕೊಳ್ಳಲಿಕ್ಕಾಗಿ ಅವನು ನಮಗೆ ಬುದ್ಧಿಶಕ್ತಿಯನ್ನೂ ಇತ್ತಿರುವನು. ಭೌತಿಕ ಪದಾರ್ಥಗಳನ್ನು ಕಂಡುಕೊಳ್ಳಲು ಸೂರ್ಯ ನಕ್ಷತ್ರಾದಿಗಳನ್ನೂ ಅವನು ಸೃಷ್ಟಿಸಿರುವನು. ಎಂದಿರುವಾಗ, ಪಾರಮಾರ್ಥಿಕ ಸತ್ಯತೆಯನ್ನು ಕಂಡುಕೊಳ್ಳಲು ಯಾವುದೇ ವಿಧಾನವನ್ನೂ ಅವನು ನಮಗೆ ಇತ್ತಿಲ್ಲವೆಂದು ಊಹಿಸಬಹುದೇ? ಖಂಡಿತವಾಗಿಯೂ ಆಧ್ಯಾತ್ಮಿಕ ಸತ್ಯತೆಯನ್ನು ಗ್ರಹಿಸಲಿಚ್ಛಿಸುವವರಿಗೆ ಅವನು ಅದಕ್ಕಿರುವ ಮಾರ್ಗವನ್ನೂ ತೆರೆದು ಕೊಡುವನು. ಅವನು ಸ್ವತಃ ಪವಿತ್ರ ಖುರ್‌ಆನಿನಲ್ಲಿ ಈ ರೀತಿ ಹೇಳಿರುವನು:

وَالَّذِيْنَ جَاهَدُوْا فِيْنَا لَنَهْدِيَنَّهُمْ سُبُلَنَا

"ನಮ್ಮನ್ನು ದರ್ಶಿಸಲಿಕ್ಕಾಗಿ ಯಾರು ಪ್ರಯತ್ನಿಸುವರೋ ಅವರಿಗೆಲ್ಲ ನಮ್ಮೆಡೆಗಿರುವ ಮಾರ್ಗವನ್ನು ಖಂಡಿತವಾಗಿಯೂ ತೆರೆದುಕೊಡುವೆವು" **(29:70)**. ಸಂಕ್ಷಿಪ್ತವಾಗಿ ಹೇಳುವುದಾದರೆ, ಧಾರ್ಮಿಕತೆಗೆ ಭೌತಿಕತೆಗಿಂತಲೂ ಪ್ರಾಧಾನ್ಯತೆ ಕೊಡುವ ಈ ಮಾರ್ಗವನ್ನು ಹಝ್ರತ್ ಅಹ್ಮದ್[ಅ] ತನ್ನ ಜಮಾಅತಿನ ಮುಂದೆ ಮಾತ್ರವಲ್ಲ ತನ್ನನ್ನು ನಿಷೇಧಿಸಿಸುತ್ತಿರುವ ಎದುರಾಳಿಗಳ ಮುಂದೆಯೂ ತೆರೆದಿಟ್ಟರು. ನಮ್ಮ ರಕ್ಷಕನು ಒಬ್ಬ ಸಜೀವ ಪರಮಾತ್ಮನಾಗಿರುವನು. ಇಂದೂ ಅವನೇ ಭೌತಿಕ ಮತ್ತು ಆಧ್ಯಾತ್ಮಿಕ ಲೋಕದ ಕಾರ್ಖಾನೆಯನ್ನು ನಡೆಸುತ್ತಿರುವನು. ಅವನೊಡನೆ ಬಾಂಧವ್ಯವನ್ನಿರಿಸುವುದು ಒಬ್ಬ ವಿಶ್ವಾಸಿಗೆ ಅತ್ಯಾವಶ್ಯಕವಾಗಿರುವುದು. ಮಾರ್ಗದರ್ಶನ ಸಿದ್ಧಿಸದ ಒಬ್ಬ ವ್ಯಕ್ತಿಯು

ಅಲ್ಲಾಹನನ್ನೇ ಮೊರೆಹೊಕ್ಕು ಸನ್ಮಾರ್ಗಕ್ಕಿರುವ ಪ್ರಕಾಶವನ್ನು ಅವನಿಂದಲೇ ಯಾಚಿಸಿ, ಅವನ ಸಹಾಯದಿಂದಲೇ ಸತ್ಯವನ್ನು ಗ್ರಹಿಸಿಕೊಳ್ಳಬೇಕೆಂಬುದು ಅತ್ಯಗತ್ಯವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಲೋಕದಲ್ಲಿ ಅವತರಿಸಿದುದರ ಉದ್ದೇಶವೇ ಪ್ರಪಂಚವನ್ನು ಉದ್ಧರಿಸಿ ಮನುಷ್ಯನ ಗಮನವನ್ನು ಪುನಃ ದೇವನ ಕಡೆಗೆ ತಿರುಗಿಸುವುದೂ ದೇವದರ್ಶನವನ್ನು ಅಸಾಧ್ಯವೆಂದು ಪರಿಗಣಿಸುವವರಲ್ಲಿ ಆ ದರ್ಶನದ ಕುರಿತು ದೃಢವಿಶ್ವಾಸ ಉಂಟುಮಾಡುವುದೂ ಹಾಗೆ ಹಝ್ರತ್ ಮೂಸಾ(ಅ), ಹಝ್ರತ್ ಈಸಾ(ಅ) ಮತ್ತು ಇನ್ನಿತರ ಪ್ರವಾದಿಗಳ ಕಾಲದ ಜನರಿಗೆ ಸಿದ್ಧಿಸಿದ ಮಹಾಭಾಗ್ಯವನ್ನು ಇಂದಿನ ಜನರಿಗೂ ತೆರೆದು ತೋರಿಸುವುದೂ ಆಗಿದೆ.

ಬಂಧುಗಳೇ, ಪೂರ್ವ ಧರ್ಮಗ್ರಂಥಗಳನ್ನು ಓದಿ ನೋಡಿರಿ. ಸ್ವಂತ ಪೂರ್ವಿಕರ ಜೀವನ ಚರಿತ್ರೆಗಳನ್ನೊಮ್ಮೆ ಸ್ಮರಿಸಿರಿ. ಏನು, ಅವರ ಜೀವನವು ಭೌತಿಕವಾಗಿತ್ತೇ? ಅವರಿಗೆ ಸಿದ್ಧಿಸಿದ ಔನ್ನತ್ಯಗಳೆಲ್ಲವೂ ಕೇವಲ ಪ್ರಾಪಂಚಿಕ ವಸ್ತುಗಳ ಸಹಾಯದಿಂದ ಲಭಿಸಿದವೇ? ಅಲ್ಲಾಹನ ಪ್ರೇಮವನ್ನು ಗಳಿಸಲಿಕ್ಕಾಗಿ ಅವರ ಹೃದಯಗಳು ಅಹೋರಾತ್ರಿ ಚಡಪಡಿಸುತ್ತಿದ್ದವು. ಅದಕ್ಕಾಗಿ ಅವರು ಅವಿಶ್ರಾಂತ ಶ್ರಮಿಸಿದರು. ಅವರಲ್ಲಿ ವಿಜಯಿಗಳಾದವರಿಗೆ ಅಲ್ಲಾಹನ ಅದ್ಭುತ ಪವಾಡಗಳೂ ದೃಷ್ಟಾಂತಗಳೂ ಲಭ್ಯವಾದುವು. ಇತರ ಸಮುದಾಯಗಳಿಂದ ಅವರನ್ನು ಪ್ರತ್ಯೇಕಿಸಿ ತೋರಿಸುತ್ತಿದ್ದ ಆ ಪವಿತ್ರ ಜೀವನದ ಮಧುರ ಫಲಗಳೇ ಆ ದೃಷ್ಟಾಂತಗಳಾಗಿದ್ದವು. ಆದರೆ, ಇಂದು ಹೈಂದವರ, ಕ್ರೈಸ್ತರ ಮತ್ತು ಇತರ ಸಮುದಾಯಗಳ ಮುಂದೆ ಮುಸ್ಲಿಮರಿಗಿರುವ ವಿಶೇಷತೆಗಳಾದರೂ ಏನಿದೆ? ಹಾಗೆ ಒಂದು ವಿಶೇಷತೆ ಅವರಲ್ಲಿಲ್ಲವಾದರೆ, ಮತ್ತೆ ಇಸ್ಲಾಮಿನ ಆವಶ್ಯಕತೆಯಾದರೂ ಏನು? ನಿಜಸ್ಥಿತಿಯೇನೆಂದರೆ ಇಸ್ಲಾಮಿನಲ್ಲಿ ಅಂತಹ ಒಂದು ವಿಶೇಷತೆ ಇದ್ದೇ ಇದೆ. ಆದರೆ ಮುಸ್ಲಿಮರು ಅದನ್ನು ಮರೆತಿರುವರು. ಅಲ್ಲಾಹನ ಪವಿತ್ರ ವಾಣಿಯು ಇಸ್ಲಾಮಿನಲ್ಲಿ ಜಾರಿಯಲ್ಲಿದ್ದು ದೇವನೊಡನೆ ಯಾವಾಗಲೂ ಸಂಬಂಧ ಸ್ಥಾಪಿಸಲು ಇಸ್ಲಾಮಿನ ಮೂಲಕ ಸಾಧ್ಯವಿದೆ. ಇದೇ ಇಸ್ಲಾಮಿನ ವಿಶೇಷತೆಯಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಆಧ್ಯಾತ್ಮಿಕ ಅನುಗ್ರಹಗಳ ಅರ್ಥವೂ ಇದೇ ಆಗಿರುವುದು. ಅಲ್ಲದೆ ನಾವು ದೊಡ್ಡ ದೊಡ್ಡ ಬಿರುದುಗಳನ್ನು ಪಡೆಯುವುದು ಅವರ

ಆಧ್ಯಾತ್ಮಿಕ ಅನುಗ್ರಹದ ಫಲದಿಂದ ಎಂದು ಹೇಳಲಾಗದು. ಅಂತಹ ಬಿರುದುಗಳು ಮುಸ್ಲಿಮೇತರನಿಗೂ ಸಿಗುವುದಿಲ್ಲವೇ? ಅಂತೆಯೇ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಧ್ಯಾತ್ಮಿಕ ಅನುಗ್ರಹಗಳ ಅರ್ಥವು ನಾವು ದೊಡ್ಡ ದೊಡ್ಡ ಕಾರ್ಖಾನೆಗಳ ಮಾಲಿಕರಾಗುವುದೂ ಅಲ್ಲ. ಅಂತಹ ಕಾರ್ಖಾನೆಗಳನ್ನು ಹಿಂದುಗಳೂ ಕ್ರೈಸ್ತರೂ ಸಿಖ್ಖರೂ ಎಲ್ಲರೂ ನಡೆಸುತ್ತಿಲ್ಲವೇ? ನಾವು ದೊಡ್ಡ ದೊಡ್ಡ ವಾಣಿಜ್ಯ ಕೇಂದ್ರಗಳನ್ನು ಸ್ಥಾಪಿಸಿ ದೂರ ದೇಶಗಳೊಡನೆ ವಾಣಿಜ್ಯ ಸಂಪರ್ಕವನ್ನು ಬೆಳೆಸುವುದೂ ಹಝ್ರತ್ ಪೈಗಂಬರರ(ಸ) ಆಧ್ಯಾತ್ಮಿಕ ಅನುಗ್ರಹಗಳ ಫಲವಾಗಿ ಎಂದೂ ಹೇಳಲಾಗದು. ಇದು ಕೂಡ ಹಿಂದುಗಳೂ ಕ್ರೈಸ್ತರೂ ಯಹೂದ್ಯರೂ ಮಾಡುವಂತಹದೇ ಆಗಿದೆ. ಹಝ್ರತ್ ಸೈಯದುಲ್ ಅಂಬಿಯಾ ಮುಹಮ್ಮದ್ ಮುಸ್ತಫಾರ(ಸ) ಅನುಗ್ರಹದ ಫಲಗಳು ಇದ್ಯಾವುದೂ ಅಲ್ಲ. ಆ ಮಹಾ ಪುರುಷರ ಅನುಸರಣೆ ಫಲವಾಗಿ ಮನುಷ್ಯರಿಗೆ ಪರಮಾತ್ಮನಲ್ಲಿ ನಿಕಟ ಬಾಂಧವ್ಯ ಉಂಟಾಗಿ, ಅವನ ಇಂಪಾದ ಮಾತುಗಳ ಅನುಭವವೂ, ಅವನನ್ನು ದರ್ಶಿಸುವ ಶಕ್ತಿಯೂ ಉಂಟಾಗಿ ಅವನ ನವನವೀನ ಅದ್ಭುತ ಪವಾಡಗಳು ಅವರ ಮುಖಾಂತರ ಪ್ರತ್ಯಕ್ಷವಾಗುವುದೇ ಆ ಮಹಾತ್ಮರ ಆಧ್ಯಾತ್ಮಿಕ ಅನುಗ್ರಹದ ವೈಶಿಷ್ಟ್ಯವಾಗಿರುವುದು. ಆ ಪುಣ್ಯ ಪ್ರವಾದಿಯ(ಸ) ದಾಸ್ಯ ಸ್ವೀಕರಿಸದ ಯಾರಿಗೂ ಲಭಿಸಲು ಅಸಾಧ್ಯವಾದ ಮಹಾ ಸಿದ್ಧಿಯೂ ಇದೇ ಆಗಿದೆ. ಇದು ಮಾತ್ರವೇ ಆ ದಿವ್ಯ ಪುರುಷನ ಅನುಯಾಯಿಗಳನ್ನು ಇತರರಿಂದ ಪ್ರತ್ಯೇಕಿಸಿ ತೋರಿಸುವ ಗುಣಗಳು. ಹಝ್ರತ್ ಮಸೀಹ್ ಮೌಊದ್(ಅ) ಇದರ ಕಡೆಗೆಯೇ ಮುಸ್ಲಿಮರನ್ನು ಆಹ್ವಾನಿಸಿದರು. ತನ್ನನ್ನು ನಿರಾಕರಿಸುವವರ ಮುಂದೆಯೂ ಅವರು ಅದನ್ನು ಮಂಡಿಸುತ್ತಾ ಈ ರೀತಿ ಹೇಳಿದರು: "ಇದೋ, ಕಾಣೆಯಾದ ಆ ಮುತ್ತನ್ನು ಪರಮಾತ್ಮನು ನನಗೆ ಕೊಟ್ಟಿರುವನು. ಕೈ ಬಿಟ್ಟು ಹೋದ ಆ ಅಮೂಲ್ಯ ವಸ್ತುವನ್ನು ಅಲ್ಲಾಹನು ನನಗೆ ಇತ್ತಿರುವನು. ಈ ಅನುಗ್ರಹಗಳೆಲ್ಲವೂ ಹಝ್ರತ್ ರಸೂಲ್ ಕರೀಮರ(ಸ) ಮುಖಾಂತರ, ಅವರ ಶಿಷ್ಯತ್ವ ಮತ್ತು ಅನುಸರಣೆಯ ಫಲವಾಗಿ ನನಗೆ ಲಭಿಸಿದುವು. ಅವರ ಆಶೀರ್ವಾದವು ನನ್ನನ್ನು ಈ ಸ್ಥಾನಕ್ಕೆ ಯೋಗ್ಯನನ್ನಾಗಿ ಮಾಡಿತು."

ಇದಲ್ಲದೆ ಇನ್ನೂ ಹಲವು ಕಾರ್ಯಗಳನ್ನು ಹಝ್ರತ್ ಅಹ್ಮದ್

ಅಲೈಹಿಸ್ಸಲಾಮ್ ನಿರ್ವಹಿಸಿದರು. ಅವೆಲ್ಲವೂ ಮಹತ್ಕಾರ್ಯಗಳೇ ಆಗಿದ್ದರೂ ಮೇಲೆ ವಿವರಿಸಿದ ಕಾರ್ಯದ ಶಾಖೆಗಳೇ ಆಗಿವೆ. ಐಹಿಕಕ್ಕಿಂತಲೂ ಧಾರ್ಮಿಕತೆಗೆ ಆದ್ಯತೆಯನ್ನಿತ್ತು ಭೌತಿಕತೆಯನ್ನು ಆಧ್ಯಾತ್ಮಿಕತೆಯಿಂದ ಜಯಿಸುವ ಸನ್ನಾಹ ಮಾಡುವುದು ಅವರ ಪ್ರಮುಖ ಕಾರ್ಯವಾಗಿದ್ದಿತು. ಖಂಡಿತವಾಗಿಯೂ ಈ ಮಾರ್ಗದಿಂದ ಇಸ್ಲಾಮಿಗೆ ಇತರ ಧರ್ಮಗಳ ಮೇಲೆ ವಿಜಯ ಲಭಿಸುವುದು. ಫಿರಂಗಿಗಳಿಂದಲೂ ಕೋವಿಗಳಿಂದಲೂ ನಾವು ನಮ್ಮ ದೇಶದ ಗಡಿಗಳನ್ನು ರಕ್ಷಿಸಬಲ್ಲೆವು. ಅವುಗಳಿಂದ ಕೆಲವೊಮ್ಮೆ ನಾವು ಶತ್ರುಗಳನ್ನು ಜಯಿಸಲೂ ಬಲ್ಲೆವು. ಆದರೆ ಅಖಿಲ ಪ್ರಪಂಚದಲ್ಲಿ ಇಸ್ಲಾಮಿಗೆ ವಿಜಯವನ್ನು ತರುವ ಮಾರ್ಗವು ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತೋರಿಸಿಕೊಟ್ಟ ಈ ಮಾರ್ಗವೇ ಆಗಿದೆ. ಮುಸ್ಲಿಮರು ಯಥಾರ್ಥ ಮುಸ್ಲಿಮರಾಗಿ, ಅವರು ಐಹಿಕಕ್ಕಿಂತಲೂ ಧಾರ್ಮಿಕತೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲು ತೊಡಗಿದರೆ, ಪಾಶ್ಚಾತ್ಯರ ಸಂಪರ್ಕದಿಂದಾಗಿ ನಮ್ಮ ರಾಜ್ಯಗಳಲ್ಲಿ ಪಸರಿಸಿರುವ ಸುಖಲೋಲುಪದ ಈ ಜೀವನ ರೀತಿಯೆಲ್ಲ ತಾನಾಗಿಯೇ ಇಲ್ಲದಂತಾಗುವುದು. ಯಾರ ಒತ್ತಾಯವೂ ಇಲ್ಲದೆ ಸ್ವಇಚ್ಛೆಯಿಂದಲೇ ಮನುಷ್ಯರು ಭೋಗಾಡಂಬರಗಳನ್ನು ತ್ಯಜಿಸಿ ಆಡಂಬರ ರಹಿತವಾದ ಜೀವನ ಕ್ರಮವನ್ನು ಅವಲಂಬಿಸತೊಡಗುವರು. ಅಂತಹ ಮುಸ್ಲಿಮರ ಮಾತುಗಳು ಇತರರಲ್ಲಿ ಪ್ರಭಾವ ಬೀರುವಂತೆ ಒಂದು ಅಗೋಚರ ಶಕ್ತಿಯು ಪ್ರವರ್ತಿಸತೊಡಗುವುದು. ಅವರ ಸಹಜೀವಿಗಳು ಸಹ ಅವರ ಪಾವನವೂ ಪರಿಶುದ್ಧವೂ ಆದ ಜೀವನ ಕ್ರಮವನ್ನು ಅನುಸರಿಸಿ ಜೀವಿಸತೊಡಗುವರು. ಹಿಂದಿನ ಮಕ್ಕಾ ನಿವಾಸಿಗಳು ಹೇಳಿದಂತೆ "ಲವು ಕಾನೂ ಮುಸ್ಲಿಮೀನ್" – "ನಾವು ಸಹ ಮುಸ್ಲಿಮರಾಗಿದ್ದರೆ!" (15:3) ಎಂದು ಕ್ರೈಸ್ತರೂ ಹಿಂದುಗಳೂ ಇತರ ಧರ್ಮಾನುಯಾಯಿಗಳೂ ಹೇಳತೊಡಗುವರು. ಹಾಗೆ ಹೇಳುತ್ತಾ ಅವರ ಮಾತು ಕ್ರಮೇಣ ಕಾರ್ಯರೂಪಕ್ಕೆ ತಿರುಗಿ ಕೊನೆಗೆ ಅಂದಿನ ಮಕ್ಕಾ ನಿವಾಸಿಗಳಂತೆ ಅವರೂ ಮುಸ್ಲಿಮರಾಗುವರು. ಯಾಕೆಂದರೆ ಸನ್ಮಾರ್ಗದಿಂದ ದೀರ್ಘಕಾಲ ದೂರವಿರಲು ಯಾರಿಂದಲೂ ಸಾಧ್ಯವಿಲ್ಲ. ಪ್ರಥಮವಾಗಿ ಒಬ್ಬ ವ್ಯಕ್ತಿಗೆ ಒಂದರ ಕುರಿತು ಆಕರ್ಷಣೆಯೂ ಅನಂತರ ಅದರಲ್ಲಿ ಪ್ರೇಮವೂ ವರ್ಧಿಸಿ ಅನಂತರ ಅವನು ಅದನ್ನು ಗಳಿಸಲು ಪ್ರಯತ್ನ ಮಾಡಲು ತೊಡಗಿ

ಕೊನೆಗೆ ಅದರ ಬಳಿಗೆ ಬಂದೇ ಬರುತ್ತಾನೆ. ಈಗ ಸಂಭವಿಸಲಿರುವುದೂ ಇದೇ ಆಗಿದೆ. ಪ್ರಥಮವಾಗಿ "ಇಸ್ಲಾಂ" ಮುಸ್ಲಿಮರ ಹೃದಯಗಳಲ್ಲಿ ಪ್ರವೇಶಿಸುವುದು. ಅನಂತರ ಅದು ಅವರ ಶರೀರಗಳಲ್ಲಿ ಪ್ರತ್ಯಕ್ಷವಾಗುವುದು. ಕೊನೆಗೆ ಇತರರು ಕೂಡ ಇಂತಹ ಪರಿಪೂರ್ಣ ಮುಸ್ಲಿಮರನ್ನು ತಾವಾಗಿಯೇ ಅನುಸರಣೆ ಮಾಡಲು ತೊಡಗುವರು. ಹೀಗೆ ಪ್ರಪಂಚವು ಮುಸ್ಲಿಮರಿಂದ ತುಂಬುವುದು ಮತ್ತು "ಇಸ್ಲಾಂ" ವಿಜಯಶ್ರೀಯನ್ನು ಹೊಂದುವುದು.

ಪ್ರಿಯ ಬಾಂಧವರೇ, ಈ ಸಣ್ಣ ಉಪನ್ಯಾಸವೊಂದರ ಮೂಲಕ ಎಲ್ಲ ಪುರಾವೆಗಳನ್ನು ವಿವರಿಸಲು, ಅಥವಾ ಅಹ್ಮದಿಯಾ ಸಂದೇಶದ ಎಲ್ಲ ಭಾಗಗಳನ್ನೂ ನಿಮ್ಮ ಮುಂದಿಡಲು ಸಾಧ್ಯವಿಲ್ಲ. ಸಂಕ್ಷಿಪ್ತ ರೂಪದಲ್ಲಿ ಅಹ್ಮದಿಯ್ಯತಿನ ಉದ್ದೇಶಗಳನ್ನೂ ಅದರ ಅವಶ್ಯಕತೆಯನ್ನೂ ನಾನಿದೋ ನಿಮ್ಮ ಮುಂದಿಟ್ಟಿರುವೆನು. ನಿಮ್ಮೊಡನೆ ನನ್ನ ಅಪೇಕ್ಷೆಯೇನೆಂದರೆ, ನೀವು ಈ ಉಪನ್ಯಾಸದಲ್ಲಿ ಅಡಕವಾಗಿರುವ ವಿಷಯಗಳನ್ನು ಚೆನ್ನಾಗಿ ಗ್ರಹಿಸಿಕೊಂಡು ಆಲೋಚಿಸಿರಿ– ಪ್ರಪಂಚದಲ್ಲಿ ಎಂದಾದರೂ ಧಾರ್ಮಿಕ ಅಭಿವೃದ್ಧಿಯು ಕೇವಲ ಭೌತಿಕ ವಸ್ತುಗಳ ಸಹಾಯದಿಂದ ಉಂಟಾಗಿದೆಯೇ ಎಂದು. ಆತ್ಮಶುದ್ಧಿ, ಸದುಪದೇಶ, ತ್ಯಾಗಶೀಲತೆ ಇವುಗಳಿಂದ ಮಾತ್ರವೇ ಧಾರ್ಮಿಕ ವಿಜಯವು ಸಿದ್ಧಿಸಿರುವುದು. ಹಝ್ರತ್ ಆದಮರ[ಅ] ಕಾಲದ ಮೊದಲ್ಗೊಂಡು ಇಂದಿನವರೆಗೂ ಸಂಭವಿಸದ ಒಂದು ಕಾರ್ಯವು ಇಂದೂ ಸಂಭವಿಸಲಾರದು. ಪ್ರಪಂಚದಲ್ಲಿ ದೇವ ಸಂದೇಶಗಳು ಇದುವರೆಗೂ ಯಾವ ರೀತಿಯಿಂದ ಪಸರಿಸುತ್ತಿವೋ ಅದೇ ರೀತಿಯಿಂದ ಮಾತ್ರವೇ ಇಂದೂ ಮುಹಮ್ಮದ್ ಮುಸ್ತಫಾರ[ಸ] ಸಂದೇಶವೂ ಭೂಲೋಕದಲ್ಲಿ ಪಸರಿಸಲಿರುವುದು. ಅಂತೂ, ನೀವು ನಿಮ್ಮ ಆತ್ಮದ ಮೇಲೂ ನಿಮ್ಮ ಸಂತಾನಗಳ ಮೇಲೂ ನಿಮ್ಮ ಕುಟುಂಬದ ಮೇಲೆಯೂ ನಿಮ್ಮ ಜನತೆಯಲ್ಲೂ ನಿಮ್ಮ ರಾಷ್ಟ್ರದೊಡನೆಯೂ ಕರುಣೆಯುಳ್ಳವರಾಗಿ, ಅಲ್ಲಾಹನ ಅನುಗ್ರಹದ ಬಾಗಿಲು ಅತಿವೇಗದಲ್ಲಿ ನಿಮಗಾಗಿ ತೆರೆಯುವಂತೆಯೂ, ಇಸ್ಲಾಮಿನ ಅಭಿವೃದ್ಧಿಗೆ ವಿಳಂಬ ಸಂಭವಿಸದಿರಲೆಂಬ ಉದ್ದೇಶದಿಂದಲೂ ಅಲ್ಲಾಹನ ಸಂದೇಶಗಳನ್ನು ಕೇಳಿ ಗ್ರಹಿಸಲು ಪ್ರಯತ್ನಿಸಿರಿ. ಅಂತಾದರೆ ಅಲ್ಲಾಹನ ಪ್ರೇಮಾನುಗ್ರಹವು ನಿಮಗಾಗಿ ತೆರೆಯಲ್ಪಡುವುದು ಮತ್ತು ಇಸ್ಲಾಮಿನ ಪುರೋಗಮನವು

ಸಾವಧಾನವಾಗಲಾರದು. ನಾವು ಮಾಡಬೇಕಾದ ಕಾರ್ಯಗಳು ಅನೇಕ ಇವೆ. ಅದಕ್ಕಾಗಿ ನಾವು ನಿಮ್ಮ ಬರುವಿಕೆಯನ್ನು ಎದುರು ನೋಡುತ್ತಿದ್ದೇವೆ. ದೇವನ ಕಡೆಯಿಂದ ಸಿದ್ಧಿಸಬೇಕಾದ ವಿಜಯಗಳಿಗೆ, ದೃಷ್ಟಾಂತಗಳೂ ಪವಾಡಗಳೂ ಮಾತ್ರವಲ್ಲ ನಮ್ಮ ಪ್ರಯತ್ನವೂ ಪ್ರಚಾರ ಕಾರ್ಯವೂ ಅತ್ಯಗತ್ಯವಾಗಿದೆ. ಆದುದರಿಂದ ಬನ್ನಿರಿ, ಇಸ್ಲಾಮಿನ ಏಳಿಗೆಗಾಗಿ ನಾವು ಹೊರಬೇಕಾದ ಭಾರವನ್ನು ನಮ್ಮೊಂದಿಗೆ ನೀವು ಸಹ ವಹಿಸಿರಿ. ನಿಸ್ಸಂದೇಹವಾಗಿಯೂ ಈ ಮಾರ್ಗದಲ್ಲಿ ತ್ಯಾಗಗಳ ಅಗತ್ಯವಿದೆ. ಈ ಮಾರ್ಗದಲ್ಲಿ ಚಲಿಸುವುದರಿಂದ ನಿಂದನೆಗಳನ್ನೂ ದೌರ್ಜನ್ಯಗಳನ್ನೂ ಸಹಿಸಬೇಕಾಗುವುದು. ದುರಾರೋಪಗಳನ್ನೂ ಆಕ್ರಮಣಗಳನ್ನೂ ಎದುರಿಸಬೇಕಾಗುವುದು. ಆದರೆ ಅಲ್ಲಾಹನ ಮಾರ್ಗದಲ್ಲಿ ಒದಗುವ ಮರಣವೇ ಯಥಾರ್ಥ ಜೀವಿತವನ್ನು ನೀಡುವಂತಹದ್ದಾಗಿದೆ. ಆ ಮರಣವನ್ನು ಸ್ವೀಕರಿಸದ ಯಾರಿಗೂ ಅಲ್ಲಾಹನ ಸಾಮೀಪ್ಯ ಲಭಿಸುವುದು ಅಸಾಧ್ಯ. ಅದನ್ನು ನಾವು ಕೈಗೊಳ್ಳದೆ ಇಸ್ಲಾಂ ಜಯಗಳಿಸಲಾರದು. ಆದುದರಿಂದ ಮನೋದಾರ್ಢ್ಯತೆಯೊಂದಿಗೆ ಮುಂದಾಗಿ ಆ ಮೃತ್ಯುಪಾತ್ರೆಗೆ ನಿಮ್ಮ ತುಟಿಗಳನ್ನು ಸೇರಿಸಿರಿ. ನಮ್ಮ ಮತ್ತು ನಿಮ್ಮ ಮರಣದಿಂದಾಗಿ ಇಸ್ಲಾಮಿಗೆ ಜೀವನವು ಲಭಿಸಲಿ. ಮತ್ತು ಮುಹಮ್ಮದ್ ಪೈಗಂಬರರ(ಸ) ಧರ್ಮವು ಪುನಶ್ಚೇತನ ಹೊಂದಲಿ. ಆ ಮರಣವನ್ನು ಸ್ವೀಕರಿಸಿ ನಮ್ಮ ಪರಮ ಮಿತ್ರನಾದ ಅಲ್ಲಾಹನ ಮಡಿಲಲ್ಲಿ ನಿತ್ಯಜೀವನದ ಆನಂದವನ್ನು ಅನುಭವಿಸುವ ಮಹಾಭಾಗ್ಯವು ನಮಗೆಲ್ಲರಿಗೂ ಸಿದ್ಧಿಸುವಂತಾಗಲಿ – **ಅಲ್ಲಾಹುಮ್ಮ ಆಮೀನ್**.

27–10–1948 **ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್**